ಅಧ್ಯಕ್ಷರು.—ತಾವು ಪ್ರೆಸ್ ಮಾಡುವುದಿಲ್ಲ. Very good. ಈಗ ಮುಂದಿನ ವಿಷಯಕ್ಕೆ ಹೋಗೋಣ.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕಿಂತ ಮುಂಚೆ, ಒಂದು ಮಾತನ್ನು ಹೇಳುತ್ತೇನೆ. ಈ ಜಿಲ್ಲಾ ಪರಿಷತ್ತು, ಮಂಡಲ್ ಪಂಚಾಯತ್ ಬಗ್ಗೆ ಚುನಾವಣೆ ಮಾಡುತ್ತೀರಿ. ಆಗ ಚುನಾವಣೆಯನ್ನು ಕಾನೂನು ಪ್ರಕಾರ ಮತ್ತು ರಾಜ್ಯಾಂಗದ ಪ್ರಕಾರ ಮಾಡಬೇಕಾಗುತ್ತದೆ. ಆರ್ಟಿಕಲ್ ೩೩೩ನ್ನು ಏನು ತಿದ್ದುಪಡಿ ಮಾಡಿದ್ದೇವೆ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಡಿಲಿಮಿಟೇಶನ್ ಮಾಡಬೇಕೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು.—ರಾಜ್ಯದಲ್ಲಿ ಈಗ ಇರತಕ್ಕ ಅಭಾವ ಪರಿಸ್ಥಿತಿಯ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡೋಣ.

ರಾಜ್ಯದಲ್ಲಿ ಈಗಿರತಕ್ಕ ಅಭಾವ ಪರಿಸ್ಥಿತಿಯ ಮೇಲಿನ ಚರ್ಚೆ

ಶ್ರೀ ಎಸ್. ಬಂಗಾರಪ್ಪ (ವಿರೋಧ ಪಕ್ಷದ ನಾಯಕರು).—ಮಾನ್ಯ ಸಭಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿರತಕ್ಕ ೧೯ ಜಿಲ್ಲೆಗಳ ಪೈಕಿ ೧೭ ಜಿಲ್ಲೆಗಳು ಅಭಾವಕ್ಕೆ ಒಳಗಾಗಿರತಕ್ಕ ಪರಿಸ್ಥಿತಿಯ ಬಗ್ಗೆ ಈಗಾಗಲೇ ಒಮ್ಮೆ ಚರ್ಚೆ ಮಾಡಿದ್ದೇವೆ. ಮಾನ್ಯ ಬೊಮ್ಮಾಯಿಯವರು ಈ ವಿಷಯದ ಬಗ್ಗೆ ಒಂದು ವರದಿಯನ್ನು ಈ ಸದನಕ್ಕೆ ಕೊಟ್ಟಿದ್ದಾರೆ. ಇಷ್ಟೇ ಅಲ್ಲದೆ, ಈ ಬರಗಾಲ ಪರಿಸ್ಥಿತಿಯನ್ನು ಅಧ್ಯಯನ ಮಾಡಲು ಕೇಂದ್ರ ಸರ್ಕಾರದಿಂದ ಏನೊಂದು ಸ್ಟಡೀ ಟೀಮ್ ಬಂದಿದೆ, ಅದಕ್ಕೂ ಕೂಡ ತಮ್ಮ ಎಲ್ಲಾ ಪಕ್ಷದ ಸದಸ್ಯರೂ ಸೇರಿ, ಎಲ್ಲರ ಅಭಿಪ್ರಾಯವನ್ನು ತಿಳಿಸಿದ್ದೇವೆ. ಈ ಸದನ ಪ್ರಾರಂಭವಾಗುವುದಕ್ಕೆ ಮುಂಚೆ, ಈ ವಿಚಾರವನ್ನು ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅನಂತರ, ಆ ವಿಚಾರ ಮೇಲ್ಮನೆಯಲ್ಲಿ ಕೂಡ ಪ್ರಸ್ತಾಪಕ್ಕೆ ಬಂತು. ಆ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾಗ, ೧೯ ಜಿಲ್ಲೆಗಳ ಪೈಕಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಇವುಗಳನ್ನು ಹೊರತುಪಡಿಸಿ, ಉಳಿದ ೧೭ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ದೊಡ್ಡ ಪ್ರಮಾಣದಲ್ಲಿ ತಲೆದೋರಿದೆ. ಇನ್ನು ಕೆಲವು ಕಡೆಗಳಲ್ಲಿ ತಲೆದೋರುತ್ತಿದೆ ಎಂದು ಹೇಳಿದ್ದೆವು. ಆ ಮಾತನ್ನು ತಾವೂ ಒಪ್ಪಿದ್ದೀರಿ. ಈ ವಿಚಾರದಲ್ಲಿ ಸರ್ಕಾರ ಮತ್ತು ವಿರೋಧಪಕ್ಷದಲ್ಲಿ ಯಾವುದೇ ಭಿನ್ನಾಭಿಪ್ರಾಯವೂ ಇಲ್ಲ. ಒಂದು ಅಭಿಪ್ರಾಯವನ್ನು ಈಗ ನಾವು ವ್ಯಕ್ತಪಡಿಸುತ್ತಿದ್ದೇವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಅಷ್ಟೇ ಅಲ್ಲ, ನಗರ ಪ್ರದೇಶಗಳಲ್ಲಿರತಕ್ಕ ಜನರಿಗೂ ಕೂಡ ಈ ಒಂದು ಅಭಾವ ಪರಿಸ್ಥಿತಿಯ ಬಿಸಿ ತಟ್ಟಿದೆ ಎಂಬುದು ಗೊತ್ತಾಗುತ್ತದೆ. ಎರಡು ವಿಧದಲ್ಲಿ ಪಟ್ಟಣ ಮತ್ತು ನಗರಕ್ಕೆ ಇದನ್ನು ಸೀಮಿತಗೊಳಿಸಿ ಪರೀಕ್ಷಿಸಿದಾಗ, ಸುಮಾರಾಗಿ ಹಳ್ಳಿಗಳಲ್ಲಿ ಹೆಚ್ಚಿನ ಮಳೆ ಬಿದ್ದು ಬೆಳೆ ಚೆನ್ನಾಗಿ ಆಗಿದ್ದಿದ್ದರೆ, ವ್ಯಾಪಾರವೂ ಕೂಡ ಚೆನ್ನಾಗಿ ಆಗುತ್ತಿತ್ತು. ಆದರೆ ಇವತ್ತು ಆ ರೀತಿ ಆಗಿಲ್ಲ. ಚೆನ್ನಾಗಿ ಮಳೆ ಆದರೆ, ನಗರ ಮತ್ತು ಪಟ್ಟಣಗಳಲ್ಲೂ ಕೂಡ ನೀರಿನ ಅಭಾವ ಕಡಿಮೆಯಾಗುತ್ತದೆ. ಇವತ್ತು ತಿಪ್ಪಗೊಂಡನಹಳ್ಳಿ ಕೆರೆಗೆ ನೀರು ಬಂದಿಲ್ಲ. ಇತ್ತೀಚೆಗೆ ಆ ಕೆರೆಯ ಪರಿಸ್ಥಿತಿ ಏನಾಗಿದೆ ಎಂಬುದು ತಮಗೆ ಗೊತ್ತಿಲ್ಲ. ಬಹುಶಃ ಇತ್ತೀಚೆಗೆ ಆ ಕೆರೆಯಲ್ಲಿ ಇದ್ದಂತಹ ನೀರು ಸಂಪೂರ್ಣವಾಗಿ ಬತ್ತಿಹೋಗಿರಬಹುದು. ಇಲ್ಲವೇ ಸ್ವಲ್ಪ ನೀರು ಉಳಿದಿರಬಹುದು. ಇವತ್ತು ಕಾವೇರಿಯನ್ನು ಬಿಟ್ಟರೆ, ನಮಗೆ ಉಳಿದಿರತಕ್ಕದ್ದು ತಿಪ್ಪಗೊಂಡನಹಳ್ಳಿ ಕೆರೆ. ಇದು ಒಣಗಿಹೋದರೆ, ಕುಡಿಯುವುದಕ್ಕೆ ನೀರಿಲ್ಲದೇ ನಮಗೆ ಎಂತಹ ಕಷ್ಟದ ಪರಿಸ್ಥಿತಿ ಉಂಟಾಗುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ೧೯೭೨–೭೩ರಲ್ಲಿ ಕೂಡ ಮಳೆಯಿಲ್ಲದೇ ಇದ್ದಂತಹ ಸಂದರ್ಭದಲ್ಲಿ, ಆಗಿನ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ದೇವರಾಜ ಅರಸ್‌ರವರು ಗುಲ್ಬರ್ಗದಲ್ಲಿ ಹಲವಾರು ಕೊಳವೆ ಭಾವಿಗಳನ್ನು ತೋಡಿಸಿದ್ದರು. ಅದೇರೀತಿ ಇಂದೂ ಸಣ್ಣಪುಟ್ಟ ನಗರಗಳಷ್ಟೇ ಅಲ್ಲ, ದೊಡ್ಡ ದೊಡ್ಡ ನಗರಗಳಲ್ಲಿ ಕೂಡ ಕುಡಿಯುವ ನೀರಿನ ಅಭಾವ ಇದೆ. ಇಂತಹ ಪರಿಸ್ಥಿತಿಯನ್ನು ನಾವು ಇವತ್ತು ಎದುರಿಸತಕ್ಕ ಪರಿಸ್ಥಿತಿ ಒದಗಿ ಬಂದಿದೆ. ಅಂತಹ ಒಂದು ಕುಡಿಯುವ ನೀರಿನ ಘೋರ ಕ್ಷಾಮಕ್ಕೆ ನಾವು ಮುಟ್ಟಿದ್ದೇವೆಂದು ಹೇಳಬಯಸುತ್ತೇನೆ. ರಾಜ್ಯದಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ತುಂಬಾ ವಿಕೋಪಕ್ಕೆ ಹೋಗಿದೆ. ಮಲೆನಾಡಿನ ಭಾಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳಬೇಕು. ಆದರೆ, ಮಳೆ ಬಿದ್ದಿಲ್ಲ. ಹೆಚ್ಚಿನ ಮಳೆಯಾಗತಕ್ಕ ಪ್ರದೇಶಗಳಾದ ಆಗುಂಬೆ ಚಿರಾಪುಂಜಿ ಇಲ್ಲಿ ಕೂಡ ಇವತ್ತು ಹೆಚ್ಚು ಮಳೆ ಆಗಿಲ್ಲ. ಭತ್ತಕ್ಕೆ ನೀರು ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ. ಹಿರೇಕೆರೂರಿನಲ್ಲಿ ಕೂಡ ಮಳೆಯಿಲ್ಲದೇ ನೀರು ಸಾಲದೇ, ಇಟ್ಟ ಭತ್ತದ ಬೆಳೆಯೆಲ್ಲಾ ಒಣಗಿಹೋಗಿದೆ ಎಂದು ಕೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ

ಹೋಗಿ ನೋಡಿದರೆ, ಮಳೆ ಇಲ್ಲದಿರುವುದರಿಂದ, ಆ ಭಾಗದಲ್ಲಿ ಜನಗಳು ಉಳಿಯುವುದೇ ಕಷ್ಟವಾಗಿದೆ. ಶಿಕಾರಿಪುರ, ಸೊರಬ, ತೀರ್ಥಹಳ್ಳಿ, ಶಿವಮೊಗ್ಗ, ಶೃಂಗೇರಿ, ಕೊಪ್ಪ, ಚಿಕ್ಕಮಗಳೂರು, ಮಡಿಕೇರಿ ಮತ್ತು ಹಾಸನ ಜಿಲ್ಲೆಯ ಹಲವಾರು ಪ್ರದೇಶಗಳಲ್ಲೂ ಕೂಡ ಮಳೆ ಸಕಾಲಕ್ಕೆ ಬಾರದ ಪ್ರಯುಕ್ತ, ನನಗೆ ತಿಳಿದಿರುವಂತೆ, ಆ ಭಾಗದಲ್ಲಿ ಇಟ್ಟಿರತಕ್ಕ ಭತ್ತದ ಬೆಳೆಯೆಲ್ಲಾ ಒಣಗಿಹೋಗುತ್ತಿದೆ. ಆ ಪ್ರದೇಶದಲ್ಲಿ ಭತ್ತದ ಬೆಳೆ ಏನೇನೂ ಸಿಕ್ಕುವುದಿಲ್ಲ. ನಾನು ಇತ್ತೀಚೆಗೆ, ನನ್ನ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಅಲ್ಲಿ ಭತ್ತದ ಗದ್ದೆಗಳು ಕೆಂಪಾಗಿದ್ದವು, ಆದರೆ, ಮಳೆ ಇಲ್ಲದ್ದರಿಂದ, ಬಹುಶಃ ಇಷ್ಟೊತ್ತಿಗೆ ಅದೂ ಒಣಗಿ ಹೋಗಿರಬಹುದು. ನಮ್ಮ ತಾಲ್ಲೂಕಿನಲ್ಲಿ ಒಂದು ದೊಡ್ಡ ಕೆರೆ ಇವೆ. ಅದು ಪ್ರತಿ ಸಾರಿಯೂ ನೀರಿನಿಂದ ತುಂಬಿ ಹರಿಯುತ್ತಿತ್ತು. ಅಂತಹ ಕೆರೆಯಲ್ಲಿ ಈ ದಿವಸ ಕಾಲು ಭಾಗ ಕೂಡ ನೀರಿಲ್ಲ. ಅಂದರೆ, ಆ ಕೆರೆಯ ಆಶ್ರಯದಲ್ಲಿ ಇರುವಂತಹ ಭತ್ತದ ಗದ್ದೆಗಳಿಗೆ ನೀರಿಲ್ಲದೇ, ಇಟ್ಟ ಬೆಳೆಯೆಲ್ಲಾ ಹಾಳಾಗಿಹೋಗುತ್ತಿದೆ. ಹೆಚ್ಚು ಮಳೆ ಬೀಳತಕ್ಕ ನಮ್ಮ ಮಲೆನಾಡು ಪ್ರದೇಶದ ಪರಿಸ್ಥಿತಿಯೇ ಈ ರೀತಿ ಇರುವಾಗ, ಇನ್ನು ಉಳಿದಿರತಕ್ಕ ಬಯಲು ಸೀಮೆಯ ಗತಿ ಏನೆಂಬುದನ್ನು ತಾವೇ ಯೋಚನೆ ಮಾಡಬೇಕು. ಶಾಸನ ಸಭಾ ಸದಸ್ಯರ ವರದಿಯಿರಬಹುದು, ಕೇಂದ್ರ ಸರ್ಕಾರದ ಅಧ್ಯಯನ ತಂಡದ ವರದಿಯಿರಬಹುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಎರಡೂ ಜಿಲ್ಲೆಗಳನ್ನು ಹೊರತು ಪಡಿಸಿ ನೋಡಿದರೆ, ತಮಗೆ ಗೊತ್ತಾಗುತ್ತದೆ. ಅಲ್ಲಿಯ ಸದಸ್ಯರ ಅಭಿಪ್ರಾಯವನ್ನು ನಾನು ಸಂಗ್ರಹಿಸಿದ್ದೇನೆ. ಇವತ್ತು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಭತ್ತದ ಬೆಳೆ ಇಟ್ಟಿದ್ದಾರೆ, ಅದು ಎಲ್ಲವೂ ಕೂಡ ಒಣಗಿ ಹೋಗುತ್ತಿದೆ ಎಂಬ ಮಾತನ್ನು ಸದಸ್ಯರು ಹೇಳಿದ್ದಾರೆ. ಅಂದರೆ ಯಾವ ಮಟ್ಟಕ್ಕೆ ಇವತ್ತು ಮಲೆನಾಡು ಪ್ರದೇಶ ಹೋಗಿದೆ ಎನ್ನತಕ್ಕ ವಿಚಾರವನ್ನು ನಾವು ಗಮನಿಸಬೇಕು. ಮಲೆನಾಡಿನಲ್ಲಿ ಎಷ್ಟೇ ಮಳೆಬಿದ್ದರೂ ನೀರು ಹರಿದು ಹೋಗುತ್ತದೆ. ಬಯಲು ಸೀಮೆಗಳಲ್ಲಿ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಅಭಾವವನ್ನು ಹೇಗೆ ಎದುರಿಸುತ್ತಾರೆ. ಅಷ್ಟೇ ಅಭಾವ ಪರಿಸ್ಥಿತಿಯನ್ನು ಮಲೆನಾಡು ಪ್ರದೇಶಗಳಲ್ಲೂ ಎದುರಿಸತಕ್ಕ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಕುಡಿಯುವ ನೀರಿನ ಸಮಸ್ಯೆ ಮಾನ್ಯ ಗೋವಿಂದೇಗೌಡರ ಮತ ಕ್ಷೇತ್ರದಲ್ಲೂ ಇದೆ ಶೃಂಗೇರಿ ಕೊಪ್ಪ ಮತ್ತೆ ಕೆಲವು ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ಇದೆ. ಮಳೆಗಾಲದಲ್ಲಿಯೇ ಈ ತರಹ ಆದರೆ, ಇನ್ನು ಮುಂದೆ ಬರತಕ್ಕ ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಯಾವ ರೀತಿಯಾಗಿ ವಿಕೋಪಕ್ಕೆ ಹೋಗುತ್ತದೆ ಎಂಬುದರ ಬಗ್ಗೆ ತಾವು ಗಮನಿಸ ಬೇಕಾಗುತ್ತದೆ. ಈಗಾಗಲೇ ನೀವು ಕೊಳವೆ ಭಾವಿಗಳನ್ನು ತೋಡಿ ಆಗಿದೆ ಎಂದು ಹೇಳಿದ್ದೀರಿ. ನೀವು ತೋಡಿರತಕ್ಕ ಕೊಳವೆ ಬಾವಿಗಳು ರಿಪೇರಿಯಾಗಿಲ್ಲ. ಇದು ಶಾಸಕರ ಸಮಿತಿಯಲ್ಲಿ ಕೊಟ್ಟಂತಹ ವರದಿಯಲ್ಲಿ ಬಂದಿರತಕ್ಕ ಮಾತು. ಕೊಳವೆಬಾವಿಗಳನ್ನು ರಿಪೇರಿ ಮಾಡಲಿಕ್ಕೆ ಮೊಬೈಲ್ ವ್ಯಾನುಗಳನ್ನು ಹಾಕದಿದ್ದರೆ ಕೊಳವೆ ಬಾವಿಗಳನ್ನು ತೋಡಿದರೂ ಏನು ಉಪಯೋಗಕ್ಕೆ ಬರುವುದಿಲ್ಲ. ನೀವು ಬಾವಿ ತೋಡಿ ಏನು ಪ್ರಯೋಜನ ? ಕುಡಿಯುವ ನೀರಿನ ಅಭಾವವನ್ನು ಇವತ್ತು ಮಲೆನಾಡು ಪ್ರದೇಶಗಳಲ್ಲೂ ಎದುರಿಸ ತಕ್ಕ ಪರಿಸ್ಥಿತಿ ಬಂದಿದೆ. ಮಳೆ ಬರತಕ್ಕ ಪ್ರದೇಶಗಳಲ್ಲಿಯೇ ಹೀಗಾದರೆ ಮಳೆ ಬಾರದೇ ಇರತಕ್ಕ ಪ್ರದೇಶಗಳಲ್ಲಿ ನೀವು ಹೀಗಿನಿಂದಲೇ ಕೆಲಸ ಮಾಡದಿದ್ದರೆ ಮುಂದೆ ಬರತಕ್ಕ ಪರಿಸ್ಥಿಯನ್ನು ಎದುರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ದನಕರುಗಳಿಗೆ ಮೇವನ್ನು ಒದಗಿಸಲಿಕ್ಕೆ ಮೇವಿನ ಬ್ಯಾಂಕುಗಳನ್ನು ಮಾಡಬೇಕು. ತಾಲ್ಲೂಕು ಮಟ್ಟಗಳಲ್ಲಿ ದನಕರುಗಳ ಮೇವಿನ ಬ್ಯಾಂಕನ್ನು ಮಾಡಬೇಕು, ಈಗ ಕೇಂದ್ರದವರು ಬರಗಾಲ ಪ್ರದೇಶಗಳಲ್ಲಿ ಜನರಿಗೆ ಉದ್ಯೋಗ ಕೊಡಲು ಕೆಲವೊಂದು ಕಾರ್ಯಕ್ರಮಗಳನ್ನು ಮಾಡಿ ಇಟ್ಟಿದ್ದಾರೆ. ಅದೇ ರೀತಿ ತಾವು ಕೂಡ ಮಾಡಿ ಇಟ್ಟಿದ್ದೀರಿ. ಕಾರ್ಯಕ್ರಮಗಳಿಗೆ ನೀವು ಹಣವನ್ನು ಜೋಡಿಸಲಿಕ್ಕೆ ಯಾವ ರೀತಿಯಲ್ಲಿ ಮಾಡಿದ್ದೀರಿ ? ನಿಮ್ಮ ಹಣದ ಪರಿಸ್ಥಿತಿಯನ್ನು ನೋಡಿದರೆ ಈಗಲೇ ನಮಗೆ ಹೆದರಿಕೆಯಾಗುತ್ತದೆ. ಮುಖ್ಯಮಂತ್ರಿಗಳು ಹೇಳಿದ್ದಾರೆ, ನಮ್ಮಲ್ಲಿ ಹೆಚ್ಚು ಹಣವಿಲ್ಲ ಅದಕ್ಕೋಸ್ಕರ ಈ ವರ್ಷ ಹೆಚ್ಚು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಈ ಹಿನ್ನೆಲೆಯನ್ನು ನೋಡಿದರೆ ಹಣ ಜೋಡಿಸತಕ್ಕ ಪ್ರತಿಯೊಂದರಲ್ಲೂ ನೀವು ಕೇಂದ್ರದ ಮೇಲೆ ಹೋಗತಕ್ಕವರು ಇಂತಹ ಪರಿಸ್ಥಿತಿಯಲ್ಲಿ ನೀವು ಇದ್ದರೆ ನಿಮ್ಮ ಯೋಜನೆಗಳು ಮತ್ತು ಯೋಚನೆಗಳು ವಿಫಲವಾಗುತ್ತವೆ ಎನ್ನುವುದು ನನ್ನ ಮಾತು. ಕೇಂದ್ರ ಸರ್ಕಾರದವರು ಹಣ ಕೊಡತಕ್ಕ ವಿಚಾರದಲ್ಲಿ ಆಯಾಯ ರಾಜ್ಯಗಳಿಗೆ ಎಷ್ಟು ಹಣ ಕೊಡಬೇಕು, ಕೊಟ್ಟಿದ್ದರೆ ಮಹಾರಾಷ್ಟ್ರದ ವಿಚಾರ ತೆಗೆದುಕೊಂಡರೆ ಮಹಾರಾಷ್ಟ್ರಕ್ಕೆ ಎಷ್ಟು ಕೊಟ್ಟಿದ್ದಾರೆ ಎಂಬುದನ್ನು ಸಹ ನೋಡಬೇಕು. It is completely under the grip of drought conditions.

ಎನ್ನತಕ್ಕ ಮಾತನ್ನು ನಾವು ಮಹಾರಾಷ್ಟ್ರದ ಬಗ್ಗೆ ಕೇಳುತ್ತಿದ್ದೇವೆ, ಮಹಾರಾಷ್ಟ್ರದಲ್ಲೂ ಕೂಡ ಈಗಾಗಲೇ ಬರಗಾಲ ಬಂದಿದೆ. ಕೆಲವೊಂದು ಏರಿಯಾಗಳು ಬರಗಾಲ ಬರುವ ಮಟ್ಟಕ್ಕೆ ಹೋಗುತ್ತಿವೆ. ಎನ್ನುವುದು ''ಟೈಮ್ಸ್ ಆಫ್ ಇಂಡಿಯಾ ದಲ್ಲಿ ನಾನು ಓದಿದ್ದೇನೆ. ಅಖಂಡ ಭಾರತದಲ್ಲಿ ಹಲವಾರು ಭಾಗ ಗಳಲ್ಲಿ ಕಡಿಮೆ ಮಳೆಯಾಗಿದೆ, ಮಳೆ ಬಾರದೆ ಇರತಕ್ಕ ಪ್ರದೇಶಗಳು ಇವೆ. ಈ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಹಣವನ್ನು ಕೇಂದ್ರ ಸರ್ಕಾರ ಎಷ್ಟು ಕೊಟ್ಟಿದೆ ಎಂಬುದನ್ನು ಗಮನಿಸಬೇಕು. ಒಂದು ಸಂತೋಷದ ಮಾತು ಮಾನ್ಯ ಬೊಮ್ಮಾಯಿಯವರಿಗೆ ನೆನಪು ಮಾಡಿಕೊಡುತ್ತೇನೆ ಯಾವುದೇ ಸಂದರ್ಭ ದಲ್ಲಿ ಎಷ್ಟೇ ಕಷ್ಟವಾದರೂ ರಾಜ್ಯ ಸರ್ಕಾರ ಹಣ ಜೋಡಿಸುತ್ತದೆ ಎನ್ನುವ ಮಾತನ್ನು ಪದೇ ಪದೇ ಹೇಳಿದ್ದಾರೆ. I hope you will stand by your statement made on behalf of the Government. ಏಕೆಂದರೆ ಕೇಂದ್ರ ಸರ್ಕಾರದ ಬರಗಾಲ ಅಧ್ಯಯನ ತಂಡ ಬಂದು ಹೋಗಿದೆ, ಅವರು ನಿಮಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆಂಬುದು ನಮಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದ ಅಧ್ಯಯನ ತಂಡ ಬಂದು ಹೋದಮೇಲೆ ಮಳೆಬಾರದೆ ಭೀಕರತೆ ದೊಡ್ಡ ಪ್ರಮಾಣದಲ್ಲಿ ಬಂದಿದೆ ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಈ ಮಾತನ್ನು ಹೇಳಬೇಕಾದರೆ, I am going to Delhi on sunday. ನಾನು ದೆಹಲಿಗೆ ಹೋಗುತ್ತಿದ್ದೇನೆ. ಕೇಂದ್ರ ಸರ್ಕಾರಕ್ಕೆ ಹೇಳತಕ್ಕ ಜವಾಬ್ದಾರಿ ನಮಗೂ ಇದೆ, ಜನರ ಹಿತದೃಷ್ಟಿಯಿಂದ ಹೇಳುತ್ತೇವೆ. ಕೇಂದ್ರ ಸರ್ಕಾರ ಬರಗಾಲ ಕಾಮಗಾರಿಗಾಗಿ ಎಷ್ಟು ಹಣವನ್ನು ಕೊಟ್ಟಿದೆ? ಅವರು ಹಣವನ್ನು ಹೇಗೆ ಕೊಡಬೇಕೆಂಬುದರ ಬಗ್ಗೆ ಒಂದು ಗೈಡ್‌ಲೈನ್ಸ್‌ನ್ನು ಇಟ್ಟುಕೊಂಡಿದ್ದಾರೆ ಈಗ ನಿಮಗೆ ಹಣ ಕೊಡಬೇಕಾದರೆ ೨೦೦ ಕೋಟಿ ರೂಪಾಯಿ ಕೊಡಬೇಕಾಗುತ್ತದೆ. ಅಧ್ಯಯನ ತಂಡ ಏನು ಶಿಫಾರಸ್ಸು ಮಾಡಿದೆ ? ನಮ್ಮ ಶಾಸಕರ ಸಮಿತಿ ವರದಿಯಲ್ಲಿ ೨೦೦ ಕೋಟಿ ರೂಪಾಯಿ ಬೇಕಾಗುತ್ತದೆಂದು ಹೇಳಿದ್ದಾರೆ. ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಡುತ್ತಾರೆ ? ೨೦–೩೦–೪೫ ಕೋಟಿ ರೂಪಾಯಿ ಕೊಡಬಹುದು. ಕೇಂದ್ರ ಸರ್ಕಾರ ಕೊಡತಕ್ಕ ಹಣದ ಮೇಲೆ ನಿಲ್ಲತಕ್ಕ ವಿಚಾರಧಾರೆ ನಿಮ್ಮದು ಆದರೆ ಆ ಕೆಲಸವನ್ನು ನೀವು ಮಾಡುವುದಾದರೆ ನೀವು ಮುಂದೆ ಬರತಕ್ಕ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಿಮ್ಮಿಂದ ಆಗ ಲಾರದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ನಿಮ್ಮ ಸಂಪನ್ಮೂಲಗಳ ಆಧಾರದ ಮೇಲೆ ಸಂಪನ್ಮೂಲಗಳು ಹೇಗೆ ಬಿದ್ದು ಹೋಗುತ್ತವೆ. ಎಂಬುದನ್ನು ಹೇಳುತ್ತೇನೆ. ವಾಣಿಜ್ಯ ಇಲಾಖೆಯಿಂದ ಬರತಕ್ಕ ಹಣ ಇರಬಹುದು, ಕೇಂದ್ರ ಸರ್ಕಾರದಿಂದ ಬರತಕ್ಕ ಹಣ ಇರಬಹುದು ಎಕ್ಸೈಜ್ ಇಲಾಖೆಯಿಂದ ಬರತಕ್ಕ ಹಣ ಏನಿದೆ ಅದನ್ನು ಡೈವರ್ಟ್ ಮಾಡ ಬೇಕಾಗುತ್ತದೆ. ಎಕ್ಸೈಜ಼ ಕರ್‌ಗೆ ಬರತಕ್ಕ ಆದಾಯಗಳ ಪ್ರಮಾಣವನ್ನು ಏರಿಸಿದರೆ ಮಾತ್ರ ಮುಂದೆ ಬರತಕ್ಕ ಪರಿಸ್ಥಿತಿ ಯನ್ನು ಎದುರಿಸ ಬಹುದು. ಹಿಂದೆ ದಿವಂಗತ ದೇವರಾಜ ಅರಸ್‌ರವರು ೧೯೭೨ರಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ ಎಲ್ಲಾ ಹಣವನ್ನು ಡೈವರ್ಟ್‌ಮಾಡಿ ಪರಿಸ್ಥಿತಿಯನ್ನು ಎದುರಿಸತಕ್ಕ ನಿರ್ಮಾಣ ವನ್ನು ಮಾಡಿದ್ದರು ಕೆರೆ ಕಟ್ಟೆಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಎಷ್ಟೋ ಹಣವನ್ನು ಖರ್ಚುಮಾಡಿ ದ್ದಾರೆ. ಕೆರೆ ಕಟ್ಟೆಗಳ ಕೆಲಸವನ್ನು ಮಾಡಿದರೆ ಮಳೆ ಬಂದಾಗ ನೀರು ಜಾಸ್ತಿ ಶೇಖರಣೆಯಾಗಿ ಅಚ್ಚು ಕಟ್ಟು ಏರಿಯಾಕ್ಕೆ ಉಪಯೋಗವಾಗಲಿ ಎನ್ನುವ ದೃಷ್ಟಿಯಿಂದ, ಜನರಿಗೆ ಕೆಲಸ ಸಿಗಲಿ ಎನ್ನುವ ದೃಷ್ಟಿ ಯಿಂದ ಕೆರೆ, ಕಟ್ಟೆ, ಬಾವಿಗಳ ಕೆಲಸವನ್ನು ಮಾಡಿದರೆ ಜನರಿಗೆ ಉದ್ಯೋಗ ಕೊಡಬಹುದು ಎನ್ನುವ ದೃಷ್ಟಿಯಿಂದ ಆ ರೀತಿ ಮಾಡಿದ್ದಾರೆ. ಕಟ್ಟಡಗಳ ನಿರ್ಮಾಣ ಮಾಡಿದ್ದಾರೆ. ಸ್ಕೂಲ್ ಕಟ್ಟಡಗಳನ್ನು ಕಟ್ಟಿಸಿದ್ದಾರೆ. ರಸ್ತೆ ಮಾಡುವುದು ಕಲ್ಲು ಒಡೆಸುವುದು ನಾನು ಲೋಕೋಪಯೋಗಿ ಮಂತ್ರಿಯಾಗಿದ್ದಾಗ ಒಡೆದಂತಹ ಕಲ್ಲುಗಳಲ್ಲಿ ರಸ್ತೆಯಲ್ಲಿಯೇ ಇವೆ. ಹಣವನ್ನು ಸರ್ಕಾರದ ವತಿಯಿಂದ ಖರ್ಚುಮಾಡಿದ್ದೇವೆ. ಕಲ್ಲುಗಳನ್ನು ಗುಡ್ಡದಲ್ಲಿ ಒಡೆದಿದ್ದಾರೆ, ಆದರಿಂದ ಟ್ರಾನ್ಸ್‌ಪೋರ್ಟೇಶನ್ ಕಾಸ್ಟ್ ಜಾಸ್ತಿಯಾಗುತ್ತವೆ, ಒಡೆದಂತಹ ಕಲ್ಲುಗಳು ರಸ್ತೆಯಲ್ಲಿವೆ. ಒಟ್ಟಿನಲ್ಲಿ ಜನರಿಗೆ ಉದ್ಯೋಗ ಕೊಡಬೇಕಾದರೆ ಲೋಕೋಪ ಯೋಗಿ ಇಲಾಖೆ, ಗ್ರಾಮಾಭಿವೃದ್ಧಿ ಇಲಾಖೆ ರೆವಿನ್ಯೂ ಇಲಾಖೆ ಮತ್ತು ಯಾವ್ಯಾವ ಇಲಾಖೆಗಳಿವೆ ಆ ಎಲ್ಲಾ ಇಲಾಖೆಗಳ ಮುಖಾಂತರ ಜನರಿಗೆ ಕೆಲಸವನ್ನು ಕೊಡತಕ್ಕ ವಿಚಾರದಲ್ಲಿ ಸ್ಪಷ್ಟವಾದ ಯೋಜನೆ ಯನ್ನು ಹಾಕಬೇಕು ಸರಿಯಾದ ಪ್ಲಾನಿಂಗ್ ಇಲ್ಲದಿದ್ದರೆ, ನೀವು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಹೋದರೆ ನನಗ ನಿಸುತ್ತದೆ ಬರಗಾಲ ಕಾಮಗಾರಿ ಕೆಲಸದಲ್ಲಿ ಹಣ ದುರ್ವ್ಯಯ ಆಗುವುದಕ್ಕೆ ಅವಕಾಶ ಮಾಡಿದಂತಾಗುತ್ತದೆ, ಏಕೆಂದರೆ ಕಂಟ್ರಾಕ್ಟರುಗಳು ಇಂತಹ ಸಮಯವನ್ನು ಕಾಯುತ್ತಿರುತ್ತಾರೆ. ಕೆಲವರಿ ಗಂತೂ ಬರಗಾಲ ಬೇಕು. ಕ್ಷಾಮ ಮತ್ತು ಬರಗಾಲ ಬಂದರೆ ಕೆಲವರಿಗೆ ಬಹಳ ಸಂತೋಷ ಕೆಲವರು ಇಂತಹ ಸಮಯವನ್ನು ಕಾಯುತ್ತಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ಹಣವನ್ನು ಮಾಡತಕ್ಕ ಕೆಟ್ಟ ಎಲಿಮೆಂಟ್ಸ್ ಇರುತ್ತಾರೆ. ಹಣವನ್ನು ಡೈವರ್ಟ್ ಮಾಡಿದಾಗ ಎಲ್ಲಿ ಹಣ ಜಾಸ್ತಿ ಹೋಗುತ್ತ ಅಂತಹ ಕಡೆ ಇಂತಹ ವ್ಯಕ್ತಿಗಳ ಹಾಜರಾತಿ ತತ್‌ಕ್ಷಣ ದೊಡ್ಡ ಪ್ರಮಾಣದಲ್ಲಿ ಬರುತ್ತದೆ.

12-00 NOON

ಈ ರೀತಿಯಾಗಿ ಹಣವನ್ನು ನೀವು ಬಿಡುಗಡೆ ಮಾಡಿ, ಪರಿಸ್ಥಿಯನ್ನು ಎದುರಿಸತಕ್ಕ ಸಂದರ್ಭದಲ್ಲಿ, ಅಂದರೆ ಸರ್ಕಾರ ಯಾವ ಸದುದ್ದೇಶದಿಂದ ಹಣವನ್ನು ಬಿಡುಗಡೆ ಮಾಡಿದೆಯೋ ಅದು ಹಾಳಾಗುವುದಕ್ಕೆ ಅವಕಾಶ ಇಲ್ಲದ ಹಾಗೆ ಒಳ್ಳೆಯ ರೀತಿಯಲ್ಲಿ ಹಣವನ್ನು ಖರ್ಚು ಮಾಡುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತಮ್ಮ ಇಲಾಖೆಯವರು ಹಾಕುತ್ತಾರೆಂದು ನಾನು ನಂಬಿದ್ದೇನೆ. ಮಲೆನಾಡಿನ ಬಗ್ಗೆಯೂ ಹೇಳುತ್ತಿದ್ದಾರೆ. ಮಲೆನಾಡಿನ ಪರಿಸ್ಥಿತಿಯೇ ಆ ರೀತಿಯಾಗಿದ್ದರೆ, ಮೈದಾನದ ಪರಿಸ್ಥಿತಿ ಯಾವ ರೀತಿ ಇರಬಹುದು ಎಂಬುದನ್ನು ತಾವೇ ಊಹೆ ಮಾಡಿಕೊಳ್ಳಬಹುದು, ಬೀದರ್, ಗುಲ್ಬರ್ಗ, ರಾಯಚೂರು, ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ನೀರಾವರಿ ಯಾಗುತ್ತಿದೆಯೋ ಆ ಪ್ರದೇಶವನ್ನು ಬಿಟ್ಟರೆ, ಉಳಿದೆಲ್ಲ ಕಡೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ ಅಂತ ಹೇಳಿದರೆ ತಪ್ಪಾಗಲಾರದು. ಬಯಲು ಸೀಮೆ ಪ್ರದೇಶ ಸಂಪೂರ್ಣವಾಗಿ ನಾಶವಾಗಿದೆ. ಧಾರವಾಡ ಜಿಲ್ಲೆಯಲ್ಲಿ ಹಾಕಿರತಕ್ಕಂತಹ ಮೆಣಸಿನಕಾಯಿ ಗಿಡವೂ ಕೂಡ ಒಣಗಿ ಹೋಗಿದೆ. ಈಗ ಮಳೆ ಬಿದ್ದರೂ ಕೂಡ ೨೫ ಪರ್ಸೆಂಟ್ ಮಾತ್ರ ಮೆಣಸಿನಕಾಯಿ ಗಿಡ ಬದುಕಿಕೊಳ್ಳಬಹುದು. ಹಾಕಿರತಕ್ಕಂತಹ ಕಡಲೆಕಾಯಿ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಈಗ ಮಳೆ ಬಿದ್ದರೂ ಕೂಡ ಎರಡನೆ ಬೆಳೆಯ ಬಗ್ಗೆ ವಿಚಾರ ಮಾಡಬಹುದು. ಆದರೆ ರಬಿ ಕ್ರಾಪ್ ಬಗ್ಗೆ ವಿಚಾರ ಮಾಡತಕ್ಕ ಪರಿಸ್ಥಿತಿ ಹೊರಟು ಹೋಯಿತು. ಬಿಳಿ ಜೋಳ ತೇವಾಂಶದಿಂದ ಬರತಕ್ಕ ಎರಡನೇ ಬೆಳೆ ಅದು. ಅದೂ ಕೂಡ ಮಳೆ ಬಿದ್ದ ಮೇಲೆ ಯೋಚನೆ ಮಾಡತಕ್ಕಂತಹದ್ದು. ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗಿರತಕ್ಕಂತಹದ್ದನ್ನು ನಾವು ಕಂಡಿದ್ದೇವೆ. ಮುಳ್ಳು ಜೋಳದ ದಂಡು (ನಮ್ಮ ಕಡೆ ಅದನ್ನು ಸೊಪ್ಪೆ ದಂಟು ಅಂತ ಕರೆಯುತ್ತಾರೆ) ಅದು ದನಗಳಿಗೆ ಮೇವು ಆಗತಕ್ಕಂತಹದ್ದು. ಅದೂ ಕೂಡ ದನಗಳಿಗೆ ಸಿಕ್ಕುವುದಿಲ್ಲ. ಆದ್ದರಿಂದ ದನಕರುಗಳ ಬಗ್ಗೆ ಯಾವ ರೀತಿಯಿಂದಲಾದರೂ ಮೇವನ್ನು ಒದಗಿಸುವ ಬಗ್ಗೆ ಕೂಡಲೇ ಸರ್ಕಾರ ಯೋಚನೆ ಮಾಡುವುದರ ಜೊತೆಗೆ ಆ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಈ ವಿಚಾರ ಕಳೆದ ಸಾರಿ ಎರಡೂ ಸದನಗಳಲ್ಲೂ ಪ್ರಸ್ತಾಪಕ್ಕೆ ಬಂದಾಗ, ಪರಿಸ್ಥಿತಿಯನ್ನು ತಿಳಿದುಕೊಳ್ಳುವ ಸಲುವಾಗಿ ಸದನದ ಸಮಿತಿಯನ್ನು ಮಾಡಬೇಕೆಂದು ಒತ್ತಾಯ ಮಾಡಿದ್ದರ ಮೇರೆಗೆ, ಸದನದ ಸಮಿತಿಯನ್ನು ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರ ನಾಯಕತ್ವದಲ್ಲಿ ರಚನೆ ಮಾಡಿದ್ದು, ಆ ಸಮಿತಿಯವರು. ರಾಜ್ಯದ ಎಲ್ಲ ಕಡೆಗೆ ಹೋಗಿ ನೈಜ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಸರ್ಕಾರಕ್ಕೆ ಪೂರ್ಣ ಚಿತ್ರದ ಒಂದು ವರದಿಯನ್ನು ಕೊಟ್ಟಿದ್ದಾರೆ. ೨೦೦ ಕೋಟಿ ರೂಪಾಯಿಗಳನ್ನಾದರೂ ತತ್‌ಕ್ಷಣ ಸಿದ್ಧ ಮಾಡಿಕೊಳ್ಳದಿದ್ದರೆ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಸಾಧ್ಯವಿಲ್ಲ, ಎನ್ನತಕ್ಕಂತಹ ಅಭಿಪ್ರಾಯವನ್ನೂ ಆ ವರದಿಯಲ್ಲಿ ಅವರು ಕೊಟ್ಟಿದ್ದಾರೆ. ಆ ಸಮಿತಿಯ ವರದಿಯ ಪ್ರಕಾರ ರಾಜ್ಯದಲ್ಲಿರತಕ್ಕ ೧೭೫ ತಾಲ್ಲೂಕುಗಳಲ್ಲಿ ೧೪೧ ತಾಲ್ಲೂಕುಗಳಲ್ಲಿ ಮಳೆ ಬಾರದೆ, ಸಂಪೂರ್ಣವಾಗಿ ಬರಗಾಲದ ಪರಿಸ್ಥಿತಿಗೆ ಒಳಗಾಗಿವೆ ಎಂಬುದಾಗಿಯೂ ಕೂಡ ಹೇಳಿದ್ದಾರೆ ಅವರ ವರದಿಯ ಪ್ರಕಾರ ೧೮,೦೦೦ ಹಳ್ಳಿಗಳು ತುಂಬಾ ತೊಂದರೆಗೆ ಒಳಗಾಗಿವೆ ಎನ್ನತಕ್ಕಂತಹದ್ದನ್ನು ಕೂಡ ವರದಿಯಲ್ಲಿ ಕೊಟ್ಟಿದ್ದಾರೆ. ಆದರೆ ವರದಿಯನ್ನು ಈಗ ತಾನೇ ಕೊಟ್ಟಿದ್ದಾರೆ. ನೆನ್ನೆಯೇ ಕೊಟ್ಟಿದ್ದರೆ, ಅದನ್ನು ಚೆನ್ನಾಗಿ ಅಧ್ಯಯನ ಮಾಡಿ, ಸಲಹೆಗಳನ್ನು ಕೊಡುವುದಕ್ಕೆ ಅನುಕೂಲವಾಗುತ್ತಿತ್ತು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮೊನ್ನೆ ಸಂಜೆ ಸಮಿತಿಯವರು ನಮಗೆ ವರದಿಯನ್ನು ಕೊಟ್ಟಿದ್ದು. ಒಂದೇ ದಿವಸದಲ್ಲಿ ಅದನ್ನು ತಯಾರು ಮಾಡಿ ಪ್ರಿಂಟ್ ಮಾಡಿ ಸದನಕ್ಕೆ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ನಿನ್ನೆ ಸಂಜೆಯಾದರೂ ನಮಗೆ ಕೊಟ್ಟಿದ್ದರೆ ಅದನ್ನು ಅಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ೧೮,೦೦೦ ಹಳ್ಳಿಗಳು ತೊಂದರೆಗೆ ಒಳಗಾಗಿವೆ. ಮತ್ತೆ ೧೧೧ ತಾಲ್ಲೂಕುಗಳು ಅವುಗಳನ್ನು ರಿಪೇರಿ ಮಾಡುವುದಕ್ಕೆ ಬಾರದೇ ಇರತಕ್ಕಂತಹ ಪರಿಸ್ಥಿತಿಯಲ್ಲಿ ಇವೆ. ಮತ್ತೆ ೪೯.೯೫ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಮಳೆ ಬಾರದೆ ಹಾಕಿದ್ದಂತಹ ಬೆಳೆ ಸಂಪೂರ್ಣವಾಗಿ ನಾಶವಾಗಿದೆ ಎಂಬುದನ್ನೂ ಕೂಡ ಅವರಲ್ಲಿ ನಮೂದು ಮಾಡಿದ್ದಾರೆ. ಅಂದ ಮೇಲೆ ಪರಿಸ್ಥಿತಿ ಎಷ್ಟು ವಿಕೋಪಕ್ಕೆ ಹೋಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು. ಒಟ್ಟು ಬೆಳೆಯನ್ನು ಮಾಡತಕ್ಕ ಭೂಮಿ ಏನಿದೆ ಅದರಲ್ಲಿ ೭೪ ರಿಂದ ೭೫ ಪರ್ಸೆಂಟ್‌ರವರೆಗೆ ಬೆಳೆ ಸಂಪೂರ್ಣವಾಗಿ ಈಗಾಗಲೇ ನಾಶವಾಗಿ ಹೋಗಿದೆ. ನಂತರ ೧.೯ ಕೋಟಿ ಜನ ಈಗಾಗಲೇ ಈ ಒಂದು ಬರಗಾಲದ ತೊಂದರೆಗೆ ಒಳಗಾಗಿದ್ದಾರೆ. ೯೬ ಲಕ್ಷ ಜಾನುವಾರುಗಳೂ ಕೂಡ ಬರಗಾಲದ ತೊಂದರೆಗೆ ಒಳಗಾಗಿವೆ. ಪರಿಸ್ಥಿತಿ ಉಲ್ಬಣಾವಸ್ಥೆಯಲ್ಲಿದೆ. ಅದಕ್ಕಾಗಿ ಸರ್ಕಾರ ಈಗಾಗಲೇ ಏನು ಸಿದ್ಧತೆಗಳನ್ನು ಮಾಡಿಕೊಂಡಿದೆ ಎಂಬುದು ಬಹಳ ಮುಖ್ಯವಾಗಿರತಕ್ಕಂಥಹದ್ದು. ಏಕೆಂದರೆ ಕುಡಿಯುವ ನೀರಿನ ಅಹಾಕಾರ ಈಗಾಗಲೇ ಪ್ರಾರಂಭವಾಗಿದೆ. ಈ ರೀತಿಯ ಸಂದರ್ಭವನ್ನು ನೋಡಿದರೆ, ಅನೇಕ ಹಳ್ಳಿಗಳಿಗೆ ಲಾರಿ

ಮೂಲಕ ನೀರನ್ನು ಕಳುಹಿಸತಕ್ಕ ಪರಿಸ್ಥಿತಿ ಬರುತ್ತದೆ. ಎತ್ತಿನ ಗಾಡಿಯಿಂದ ನೀರನ್ನು ಕಳುಹಿಸತಕ್ಕ ಪರಿಸ್ಥಿತಿ ಬರುತ್ತದೆ. ಕರ್ನಾಟಕ ರಾಜ್ಯದ ಹಲವಾರು ಗ್ರಾಮಗಳಲ್ಲಿ ಈ ಒಂದು ಪರಿಸ್ಥಿತಿ ಬರಬಹುದು. ಹಲವಾರು ಕಡೆ ಕೊಳವೆ ಬಾವಿಗಳನ್ನು ಹಾಕಿದ್ದಾರೆ. ಆದರೆ ಮಳೆಬಾರದೇ ಇರುವುದರಿಂದ ಭೂಮಿಯಲ್ಲಿರತಕ್ಕ ನೀರಿನ ಮಟ್ಟ ಮತ್ತಷ್ಟು ಕೆಳಕ್ಕೆ ಹೋಗಿರುವುದರಿಂದ ಹಾಕಿರತಕ್ಕಂತಹ ಕೊಳವೆ ಬಾವಿಗಳು ಕೆಲಸ ಮಾಡುತ್ತಿಲ್ಲ. ಕುಡಿಯುವ ನೀರನ್ನು ಸರಬರಾಜು ಮಾಡುವಂತಹದ್ದು ಅಷ್ಟೇ ಪ್ರಮುಖವಾದುದು. ಕುಡಿಯುವ ನೀರಿನ ಬಗ್ಗೆ ಗ್ರಾಮಾಂತರ ಪ್ರದೇಶದ ಮಟ್ಟದಲ್ಲೂ ಹಾಗೂ ನಗರ ಪ್ರದೇಶಗಳಲ್ಲೂ ಕೂಡ ಹೆಚ್ಚಿನ ಆದ್ಯತೆಯನ್ನು ಕೊಟ್ಟು, ಆ ಬಗ್ಗೆ ಕಾರ್ಯಕ್ರಮವನ್ನು ಹಾಕದಿದ್ದರೆ ಪರಿಸ್ಥಿತಿಯನ್ನು ನಿಭಾಯಿಸುವುದು ಬಹಳ ಕಷ್ಟವಾಗುತ್ತದೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ತಾವು ಹೇಳಿದ ಪ್ರಕಾರವೇ ನಾನು ಹೇಳುವುದಾದರೆ, ಎಷ್ಟೇ ಹಣ ಖರ್ಚಾಗಲೀ, ಅದನ್ನು ಎದುರಿಸುವುದಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆಂದು ತಾವು ಹೇಳಿದ್ದೀರಿ. ಆದ್ದರಿಂದ ಅದಕ್ಕಾಗಿ ಬೇಕಾಗುವಷ್ಟು ಹಣವನ್ನು ಜೋಡಿಸಿಕೊಂಡು ಪರಿಸ್ಥಿತಿಗೆ ತಕ್ಕಂತೆ ವ್ಯವಸ್ಥೆ ಮಾಡತಕ್ಕಂತ ಶಕ್ತಿಯನ್ನು ಸರ್ಕಾರ ಪಡೆದಿದೆಯೇ ಎಂಬುದನ್ನು ಈ ಸಂದರ್ಭದಲ್ಲಿ ನಿರೀಕ್ಷೆ ಮಾಡಬೇಕಾಗುತ್ತದೆ. ಅನಂತರ ಜಾನುವಾರುಗಳ ಮೇವಿನ ವಿಚಾರದಲ್ಲಿ ಹೇಳುವುದಾದರೆ, ಇವತ್ತು ಬೆಳಿಗ್ಗೆ ತಾನೇ ಗುಲ್ಬರ್ಗದಿಂದ ಬಂದ ಜನರು ಹೇಳುತ್ತಿದ್ದರು ದನಕರುಗಳ ಮಾರಾಟ ಪ್ರಾರಂಭವಾಗಿದೆ ಎಂದು. ಇದು ಸೆಪ್ಟೆಂಬರ್ ತಿಂಗಳಾದ್ದರಿಂದ ನನ್ನ ಪ್ರಕಾರ ಇನ್ನೂ ಮಳೆಗಾಲ ಮುಗಿದಿಲ್ಲ. ಬಿಜಾಪುರ ಜಿಲ್ಲೆಯಿಂದ ಮಹಾರಾಷ್ಟ್ರಕ್ಕೆ ದನಕರುಗಳು ಮಾರಾಟಕ್ಕೆ ಹೋಗುತ್ತಿವೆಯಂತೆ, ಆದರೆ ಅಲ್ಲಿ ತೆಗೆದುಕೊಳ್ಳುವವರೇ ಇಲ್ಲವಂತೆ. ಈಗಲೇ ಹೀಗಾದರೆ ಮುಂದಿನ ದಿನಗಳಲ್ಲಿ ಯಾವ ಮಟ್ಟಕ್ಕೆ ಹೋಗಬಹುದೆಂಬುದನ್ನು ಯೋಚಿಸಬೇಕಾಗುತ್ತದೆ ಜಾನುವಾರುಗಳ ಮಾರಾಟವಾದರೆ ಇದರ ಪರಿಣಾಮ ಬಹಳ ಕೆಟ್ಟದಾಗುತ್ತದೆ. ಜಾನುವಾರುಗಳು ರೈತನ ಕುಟುಂಬಕ್ಕೆ ನಿಧಿಯಾಗಿರುತ್ತವೆ. ಅವು ಹೋದಮೇಲೆ ಮುಂದಿನ ವರ್ಷದಲ್ಲಿ ಮಳೆ ಬಂದು ಬೆಳೆ ಆದರೂ ಕೂಡ ಪರಿಸ್ಥಿತಿ ಸುಧಾರಿಸುವುದು ಕಷ್ಟವಾಗುತ್ತದೆ. ಮಳೆ ಆಧಾರಿತ ಪ್ರದೇಶಗಳಲ್ಲಿ ಇರತಕ್ಕ ಜಾನುವಾರುಗಳು ಸಾಯುತಕ್ಕ ಪರಿಸ್ಥಿತಿ ಬರಬಹುದು ಅಥವಾ ಕಡಿಮೆ ದರದಲ್ಲಿ ಮಾರತಕ್ಕ ಪರಿಸ್ಥಿತಿ ಬರಬಹುದು. ಹಿಂದೆ ೧೯೭೨-೭೩ರಲ್ಲಿ ಬರಗಾಲ ಬಂದಾಗ ಶಾಸನಸಭೆಯ ಸಮಿತಿ ಪರಿಶೀಲನೆ ಹೋದಾಗ ನೋಡಿದ್ದೇವೆ. ಮುಂದಿನ ದಿನಗಳಲ್ಲಿ ಅದೇ ಪರಿಸ್ಥಿತಿ ಬರತಕ್ಕ ಪರಿಸ್ಥಿತಿಕಾದಿದೆ. ಮೇವಿನ ಬಗ್ಗೆ ನೀವುಈಗಾಗಲೇ ಸೂಚನೆಕೊಟ್ಟಿದ್ದೀರಿ. ಆಬಗ್ಗೆ ಖಾರ್ಗೆಯವರಸಮಿತಿಯ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಲಾರಿಗಳ ಮುಖಾಂತರ ಮೇವನ್ನು ತಂದು ತೊಂದರೆಇದ್ದಲ್ಲಿ ಒದಗಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಆಜ್ಞೆ ಮಾಡಿದ್ದೀರಿ. ಎಲ್ಲೆಲ್ಲಿ ನೀರಾವರಿ ಪ್ರದೇಶ ಇದೆ ಅಲ್ಲಿ ಭತ್ತದ ಹುಲ್ಲು ಸಿಗುತ್ತದೆ. ಉತ್ತರ ಜಿಲ್ಲೆಯಲ್ಲಿ ಹೆಚ್ಚಾಗಿ ಭತ್ತದ ಹುಲ್ಲು ಸಿಗುತ್ತದೆ. ಸಿದ್ದಾಪುರ ತಾಲ್ಲೂಕಿನಲ್ಲಿ ಮಳೆ ಬಂದಾಗ ಕಲ್ಲದ ಹುಲ್ಲು ಎಂದು ಬರುತ್ತದೆ. ಆ ಹುಲ್ಲನ್ನು ಕುಯಿಸಿ ದನಕರುಗಳಿಗೆ ಒದಗಿಸತಕ್ಕ ಕೆಲಸ ಮಾಡಿದರೆ ಅವು ಜೀವ ಇಟ್ಟುಕೊಳ್ಳಬಹುದು. ಆ ದೃಷ್ಟಿಯಿಂದ ಈ ಜವಾಬ್ದಾರಿಯನ್ನು ಅರಣ್ಯ ಇಲಾಖೆಯವರಿಗೆ ವಹಿಸಿದರೆ ಒಳ್ಳೆಯದು. ಆ ಇಲಾಖೆಯವರೊಡನೆಯೂ ಸಮನ್ವಯ ಇಟ್ಟುಕೊಳ್ಳಬೇಕಾಗುತ್ತದೆ. ಅದಿಲ್ಲದೆ '' ಎತ್ತು ಏರಿಗೆ ಎಳೆಯಿತು, ಕೋಣ ಕೆರೆಗೆ ಎಳೆಯಿತು '', ಎಂಬ ಪರಿಸ್ಥಿತಿಯಾದರೆ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಅದಕೋಸ್ಕರ ಮಾನ್ಯ ಜೀವರಾಜ ಆಳ್ವ ಅವರೊಡನೆ ಸಮಾಲೋಚನೆ ಮಾಡಿ ಕಲ್ಲದ ಹುಲ್ಲನ್ನು ಕೊಯ್ದು ಒದಗಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅದು ಸಾಮಾನ್ಯವಾಗಿ ಶಿವಮೊಗ್ಗ, ಕಾರವಾರ ಮತ್ತು ಬೆಳಗಾಂ ಜಿಲ್ಲೆಯ ಕೆಲವು ಭಾಗಗಳಲ್ಲಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಬೆಟ್ಟದ ಪ್ರದೇಶಗಳಲ್ಲಿ ಸಿಗುತ್ತದೆ. ಅದು ನೋಡುವುದಕ್ಕೆ ಚೆನ್ನಾಗಿರುತ್ತದೆ. ಅದನ್ನು ಕುಯಿಸತಕ್ಕ ಕೆಲಸವನ್ನು ಈಗಲೇ ಮಾಡಬೇಕಾಗುತ್ತದೆ. ತಡವಾದರೆ ಹಾಳಾಗುತ್ತದೆ. ಆದ್ದರಿಂದ ತಕ್ಷಣ ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ಹಾಕಬೇಕೆಂದು ಒತ್ತಾಯಿಸುತ್ತೇನೆ. ನೀವು ಹುಲ್ಲನ್ನು ಕೊಂಡುಕೊಳ್ಳುವುದಕ್ಕೆ ಹೋದರೆ ಬಹಳ ನಷ್ಟವಾಗುತ್ತದೆ. ನಾಳೆ ದಿವಸ ಆಂಧ್ರಪ್ರದೇಶದಿಂದ ಹುಲ್ಲು ತರತಕ್ಕ ಪರಿಸ್ಥಿತಿ ಬರಬಹುದು. ಅದನ್ನು ತಪ್ಪಿಸಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಬಹುಭಾಗ ಬರಗಾಲದಿಂದ ಕೂಡಿದೆ.

ಶ್ರೀ ಯು. ಭೂಪತಿ.—ಅಲ್ಲಿ ಮಳೆಗಾಲ, ಚಳಿಗಾಲ ಇಲ್ಲವಂತೆ, ಬೇಸಿಗೆ ಕಾಲ ಮತ್ತು ಅತಿ ಬೇಸಿಗೆ ಕಾಲವಂತೆ.

ಶ್ರೀ ಎಸ್. ಬಂಗಾರಪ್ಪ.—ಹೌದು, ಅಲ್ಲಿನ ಬಿಸಿಲಿನ ತಾಪವನ್ನು ನೋಡಿ ಮಂತ್ರಿಗಳು ಬಳ್ಳಾರಿಗೆ ಪ್ರವಾಸ ಹೋಗುವುದಿಲ್ಲವಂತೆ. ಬಹುಶಃ ಪ್ರಕಾಶ್‌ರವರಿಗೆ ರೂಢಿಯಾಗಿರಬಹುದು. ರಾಯಚೂರು, ಗುಲ್ಬರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಹುಟ್ಟಿ ಬೆಳೆದ ಜನರು ಶಾಸಕರಾಗಿ ಬಂದಮೇಲೆ

ಬೆಂಗಳೂರನ್ನು ಬಿಟ್ಟು ಹೋಗುವುದಿಲ್ಲ. ಬೆಂಗಳೂರು ನಗರದ ಹವ ಒಗ್ಗಿದರೆ ಯಾರಿಗೂ ಬಿಟ್ಟು ಹೋಗುವುದಕ್ಕೆ ಮನಸ್ಸಾಗುವುದಿಲ್ಲ. ಮಾಜಿ ಶಾಸಕರು ಖಾಯಂ ಆಗಿ ಇಲ್ಲೇ ಇರುತ್ತಾರೆ. ಏಕೆಂದರೆ ಅಲ್ಲಿನ ಸೀಸನ್ ಕಂಡೀಷನ್ ಚೆನ್ನಾಗಿಲ್ಲವೆಂದು. ನೀವು ಕೂಡ ಇದನ್ನು ನೋಡಿದ್ದೀರಿ. ಅಲ್ಲಿ ಬಿಸಿಲಿನ ತಾಪ ಅಷ್ಟೊಂದು ಇದೆ. ಆ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಹೇಗೆ ದೊರೆಯಬೇಕು ? ಜಾನುವಾರುಗಳ ಪರಿಸ್ಥಿತಿ ಏನು ? ಜನರ ಪರಿಸ್ಥಿತಿ ಏನು ಎಂಬುದನ್ನು ಗಮನಿಸಬೇಕು. ಧಾರವಾಡ ದಲ್ಲಿ ನೀರಾವರಿ ಪ್ರದೇಶ ಎಲ್ಲಿದೆ ಅಲ್ಲಿ ಹುಲ್ಲನ್ನು ಕಂತೆ ಕಟ್ಟಿ ಒಂದೊಂದು ಕಂತೆಗೆ ಒಂದೊಂದು ರೂಪಾಯಿನಂತೆ ಮಾರಾಟ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ನನ್ನ ತಾಲ್ಲೂಕು ಮಲೆನಾಡಿಗೆ ಸೇರಿದ್ದು ಅಲ್ಲಿ ಹೇಗಿದೆ ಎಂಬುದನ್ನು ನೋಡಬೇಕು. ಸದನ ಮುಗಿದ ಕೂಡಲೇ ನನ್ನ ತಾಲ್ಲೂಕಿಗೆ ಪ್ರವಾಸ ಹೋಗುತ್ತಿದ್ದೇನೆ. ಇದನ್ನೆಲ್ಲ ನೋಡಿದರೆ ಮೇವಿನ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ ಎಂದು ಗೊತ್ತಾಗುತ್ತದೆ. ಭತ್ತ ಬೆಳದದ್ದೆಲ್ಲ ನೀರಿಲ್ಲದೆ ಒಣಗಿಹೋಗಿದೆ. ಆ ಬಗ್ಗೆ ಸರ್ಕಾರಕ್ಕೆ ಒಂದು ಪತ್ರವನ್ನು ಕೂಡ ಬರೆದಿದ್ದೇನೆ. ಮಳೆ ಇಲ್ಲದ ಕಡೆ ಫರಂಗಿ ಯೋಜನೆಯನ್ನು ಮಾಡಬಹುದು. ಅದು ನಮ್ಮ ಸಭಾಧ್ಯಕ್ಷರಾದ ಬಣಕಾರ್‌ರವರು ಕ್ಷೇತ್ರದಲ್ಲಿ ಚೆನ್ನಾಗಿ ಬರುತ್ತದೆ. ಅದು ಮಳೆ ಬಂದರೆ ಬರುವುದಿಲ್ಲ. ಹೆಚ್ಚಿನ ತೇವಾಂಶ ಇರುವ ನಮ್ಮ ಕಡೆಯ ಭೂಮಿಯಲ್ಲಿ ಬರುವುದಿಲ್ಲ. ಕಂದಾಯ ಮಾಫಿ ಮಾಡುವುದು ಮತ್ತೊಂದು ವಿಚಾರ ಇರಬಹುದು ಯಾವುದನ್ನಾದರೂ ನನ್ನ ತಾಲ್ಲೂಕಿಗೋಸ್ಕರ ಹೇಳುತ್ತಿಲ್ಲ. ನಾನು ಮೊನ್ನೆ ಒಂದು ಹೈಸ್ಕೂಲ್ ಉದ್ಘಾಟನೆಗೆ ಹೋದಾಗ ಏನು ಪರಿಸ್ಥಿತಿ ಇತ್ತು ಎಂಬುದನ್ನು ಗಮನಕ್ಕೆ ತಂದೆ. ದನಕರುಗಳ ಮೇವಿಗೋಸ್ಕರ ಪ್ರತಿ ತಾಲ್ಲೂಕಿನಲ್ಲಿ ವ್ಯವಸ್ಥೆ ಮಾಡಬೇಕು. ಪಶುಸಂಗೋಪನಾ ಮಂತ್ರಿ ಗಳಾದ ಸಿದ್ಧರಾಮಯ್ಯನವರು ಎಲ್ಲಾ ಇಲಾಖೆಗಳ ಕೋ-ಆರ್ಡಿನೇಟ್ ಮಾಡಿ ಕೆಲಸ ಮಾಡದಿದ್ದರೆ ಪರಿಸ್ಥಿತಿಯನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಜಾನುವಾರುಗಳ ಅಂಕಿಅಂಶ ತೆಗೆದು ಕೊಂಡು ಸಂಪೂರ್ಣವಾಗಿ ತಾಲ್ಲೂಕುಗಳಲ್ಲಿ ಮೇವು ಬ್ಯಾಂಕ್ ಮಾಡತಕ್ಕ ಕಾರ್ಯಕ್ರಮವನ್ನು ಹಾಕದೇ ಹೋದರೆ ಕಷ್ಟವಾಗುತ್ತದೆ. ತಡ ಮಾಡಿದರೆ ಮೇವು ಏನಿದೆ ಅದು ಕೈತಪ್ಪಿ ಬೇರೆ ಕಡೆಗೆ ಹೋಗ ಬಹುದು. ರೈತರು ಎಲ್ಲೆಲ್ಲಿ ಬೆಳೆದಿದ್ದಾರೆ ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ ತಾವು ಹುಲ್ಲನ್ನು ಮಾರಾಟ ಮಾಡಬೇಕಾದ ಪರಿಸ್ಥಿತಿ ಇದ್ದರೂ ಮಾರಾಟ ಮಾಡಬೇಡಿ. ಬೇರೆಯವರಿಗೆ ಕೊಡುವ ಬದಲು ಕಡಿಮೆ ದರಕ್ಕೆ ಸರ್ಕಾರಕ್ಕೆ ಕೊಟ್ಟು ಮೇವು ಸಂಗ್ರಹ ಮಾಡತಕ್ಕ ಕಾರ್ಯಕ್ರಮಕ್ಕೆ ನೆರವು ನೀಡ ಬೇಕೆಂದು ರೈತರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಫಾಡರ್ ಬ್ಯಾಂಕ್‌ನ್ನು ನಮ್ಮ ಸರ್ಕಾರದವರು ಏನು ಮಾಡುತ್ತಿದ್ದಾರೆ ಇದಕ್ಕೆ ನೆರವಾಗತಕ್ಕ ಕರ್ತವ್ಯವನ್ನು ನಮ್ಮ ರೈತರು ಮಾಡಬೇಕೆಂದು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಹಣಕ್ಕೋಸ್ಕರ ಮಾರಾಟ ಮಾಡಿದರೆ ಸಹಕಾರ ಇರುವುದಿಲ್ಲ. ತಮ್ಮ ಸಹೋದರ ಸಹೋದರಿಯರು ತೊಂದರೆ ಅನುಭವಿಸತಕ್ಕ ಸಂದರ್ಭದಲ್ಲಿ, ಜಾನುವಾರುಗಳು ಸಾಯುತಕ್ಕ ಪರಿಸ್ಥಿತಿಯಲ್ಲಿ ನಾವು ನಮ್ಮ ಕಾಣಿಕೆಯನ್ನು ಮೇವಿನ ರೂಪದಲ್ಲಿ ಸಂದಾಯ ಮಾಡಬೇಕು ಎಂಬ ಮನಸ್ಸು ರೈತರಲ್ಲಿ ಇರಬೇಕು. ಸರ್ಕಾರ ನಿಗದಿ ಮಾಡಿರುವ ದರಕ್ಕೆ ಅಥವಾ ಪುಕ್ಕಟೆಯಾಗಿ ಕೊಡ ಬೇಕು. ಕೆಲವರು ಮೇವನ್ನು ದಾನರೂಪದಲ್ಲಿ ಕೊಡತಕ್ಕ ರೈತರೂ ಇದ್ದಾರೆ. ಮಾನ್ಯ ಮಂತ್ರಿಗಳು ಪ್ರತಿ ತಾಲ್ಲೂಕಿನಲ್ಲೂ ಪ್ರಚಾರ ಮಾಡಿ, ಮನವಿ ಮಾಡಿಕೊಂಡು ಮೇವನ್ನು ದಾನ ಮಾಡುವಂತೆ ಒತ್ತಾಯ ಮಾಡಬೇಕು. ಜನರಿಗೆ ಪರಿಸ್ಥಿತಿಯನ್ನು ಮನವರಿಕೆ ಮಾಡಿ ಕೊಡಬೇಕು. ಪ್ರಚಾರ ಹೆಚ್ಚಿನ ಪ್ರಮಾಣದಲ್ಲಿ ಮಾಡಬೇಕು. ಜಾನುವಾರುಗಳು ಮಾರಾಟವಾಗದ ಹಾಗೆ ತಡೆ ಹಾಕಿ ದನಕರುಗಳಿಗೆ ಮೇವು ಮತ್ತು ಕುಡಿಯುವ ನೀರನ್ನು ಒದಗಿಸಿದರೆ ಯಾರೂ ಮಾರಾಟ ಮಾಡಲಾರರು. ಎಷ್ಟೋ ಜನರಿಗೆ ಮಾರಾಟ ಮಾಡುವುದಕ್ಕೆ ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ಮಾರಾಟ ಮಾಡುವ ಪರಿಸ್ಥಿತಿ ಇದೆ. ಅಂಥ ಜಾನುವಾರುಗಳನ್ನು ಉಳಿಸತಕ್ಕ ಪ್ರಾಮಾಣಿಕ ಪ್ರಯತ್ನ ಸರ್ಕಾರದಿಂದ ನಡೆಯಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದರ ಜೊತೆಗೆ ಬರಗಾಲ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಇದೊಂದು ದೊಡ್ಡ ಪ್ರಶ್ನೆಯಾಗಿದೆ. ರಿಗ್ಸ್ ಮೂಲಕ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಪ್ರತಿ ತಾಲ್ಲೂಕಿಗೂ ರಿಗ್ ಇಟ್ಟು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಟೆಂಡರ್ ಕರೆಯದೆ ಅರ್ಜೆಂಟಾಗಿ ಕುಡಿಯುವ ನೀರಿಗೆ ಆದ್ಯತೆ ಕೊಟ್ಟು ಕೆಲಸ ಮಾಡಿದ್ದೇವೆ ಎಂದು ಹೇಳಿದ್ದೀರಿ. ಇರಬಹುದು. ಆ ಪರಿಸ್ಥಿತಿ ಬಂದಿದೆ. ನಾವು ಎಲ್ಲದಕ್ಕೂ ಅನುಮಾನ ಪಡುವುದಿಲ್ಲ. ಶಾಸಕರ ಸಮಿತಿ ವರದಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ವೈಫಲ್ಯತೆ ಕಂಡುಬಂದರೆ ಜಿಲ್ಲಾಧಿಕಾರಿಗಳನ್ನು ಹೊಣೆ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏನೇ ಕಾನೂನು ಮಾಡಿದರೂ ಡೆಪ್ಯುಟಿ ಕಮಿಷನರ್ ಎಂದು ಪ್ರಾವಿಷನ್ ಮಾಡುತ್ತೇವೆ. ಜಿಲ್ಲಾಧಿಕಾರಿಗಳು ಬರೀ ಮೀಟಿಂಗ್‌ಗಳಲ್ಲೇ ಕಾಲ ಕಳೆಯಬೇಕಾಗುತ್ತದೆ. ಈ ಒತ್ತಡವನ್ನು ಕಡಿಮೆ ಮಾಡಬೇಕು. ಜಿಲ್ಲಾಧಿಕಾರಿಗಳು, ಅಸಿಸ್ಟೆಂಟ್ ಕಮಿಷನರ್‌ಗಳು, ತಹಸೀಲ್ದಾರರುಗಳು, ಬಿ.ಡಿ.ಒ.ಗಳು, ಲೋಕೋಪಯೋಗಿ ಇಲಾಖೆ

ಯಾರು, ಅರಣ್ಯ ಇಲಾಖೆಯವರು ಎಲ್ಲ ಕಡೆ ಪ್ರವಾಸ ಮಾಡಿ ಪರಿಸ್ಥಿತಿಯನ್ನು ಹತೋಟಿಗೆ ತರಬೇಕು. ಡೆಪ್ಯುಟಿ ಕಮಿಷನರ್ ಮತ್ತು ಡಿವಿಷನಲ್ ಕಮಿಷನರುಗಳ ಸಭೆಯನ್ನು ಕರೆಯಬೇಕಾಗುತ್ತದೆ ಎಂಬ ಭಾವನೆ ಇದೆ. ಮಂತ್ರಿಗಳು ಅಥವಾ ಡಿವಿಷನಲ್ ಕಮಿಷನರ್‌ಗೆ ಬಿಟ್ಟು ಆಯಾ ಮಟ್ಟದಲ್ಲಿ ಡಿವಿಷನ್‌ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ, ಅಸಿಸ್ಟೆಂಟ್ ಕಮಿಷನರ್, ತಹಸಿಲ್ದಾರ್, ಬಿ.ಡಿ.ಒ.ಗಳ ಸಭೆ ನಡೆಸ ಬೇಕಾಗುತ್ತದೆ. ಆಯಾ ಮಟ್ಟದಲ್ಲಿ ಸಭೆ ಮಾಡಬೇಕಾಗುತ್ತದೆ. ಪೀರಿಯಾಡಿಕಲ್ ವಿಸಿಟಿಂಗ್ಸ್, ಚೆಕಿಂಗ್ಸ್ ಮಾಡಬೇಕು. You may think of keeping them under their toes. ಹೀಗೆ ಮಾಡಿದರೆ ಪ್ರತಿಯೊಂದು ಕೆಲಸಕ್ಕೂ ಹೆಚ್ಚಿನ ಗಮನ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಸದನ ಇವತ್ತಿಗೆ ಮುಕ್ತಾಯವಾಗುತ್ತಿದೆ. ಸದನ ಮುಗಿದ ಕೂಡಲೇ ಮಂತ್ರಿಗಳು ಪ್ರವಾಸ ಹೋಗ ಬೇಕು. ಎಲ್ಲಾ ತಾಲ್ಲೂಕಿಗೂ ಬೇಡ. I know your limitations. Then the Officers will have to shed the entire machinery in to speedy motion. ಇಲ್ಲದಿದ್ದರೆ lethargic attitude of certain Officers...I am not blaming all Officers. ಕೆಲವು ಅಧಿಕಾರಿಗಳು ಏನು ಮಾಡುತ್ತಾರೆಂದರೆ ಅವರಿಗೆ ಎಚ್ಚರವೇ ಇರುವುದಿಲ್ಲ. ಬರಗಾಲವಿದ್ದರೂ ಒಂದೇ, ಮಳೆಗಾಲ ಇದ್ದರೂ ಒಂದೇ. ಒಳ್ಳೆಯ ಅಧಿಕಾರಿಗಳನ್ನು ಆದಷ್ಟು ಹುಡುಕಿ ಹಾಕಬೇಕು. ಉಪಯೋಗ ಇಲ್ಲ ಎಂಬ ಅಭಿಪ್ರಾಯ ಕಂಡುಬಂದರೆ ತಕ್ಷಣ ಆ ಅಧಿಕಾರಿಗಳನ್ನು ಬದಲಾವಣೆ ಮಾಡಬೇಕು. ಬೇರೆ ಕಡೆಗೆ ವರ್ಗ ಮಾಡಿ. ಐರನ್ ಹ್ಯಾಂಡ್‌ನಿಂದ ಕೆಲಸ ಮಾಡದಿದ್ದರೆ ಸ್ಟಿಫ್‌ನೆಸ್ ಇಲ್ಲದಿದ್ದರೆ ಅವರನ್ನು ಬೇರೆ ಕಡೆಗೆ ವರ್ಗ ಮಾಡಿ ಒಳ್ಳೆಯ ಅಧಿಕಾರಿಗಳನ್ನು ಹಾಕಿ. ಎಲ್ಲ ಸಂಬಂಧಪಟ್ಟ ಅಧಿಕಾರಿಗಳನ್ನೂ ಕರೆದು ಕೋ-ಆರ್ಡಿನೇಟ್ ಮಾಡಿ ಈ ಕೆಲಸವನ್ನು ತೆಗೆದುಕೊಂಡರೆ ಅಷ್ಟು ತೊಂದರೆ ಬರಲಾರದು ಎಂಬ ಭಾವನೆ ನನಗಿದೆ. ಸಮಿತಿ ವರದಿ ಪ್ರಕಾರ ೫೦–೫೧ ಲಕ್ಷ ಜನ ರೈತರು ಮತ್ತು ಕೃಷಿ ಕಾರ್ಮಿಕರು ಕೆಲಸಕ್ಕಾಗಿ ಕಾದು ನಿಂತಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಈ ಬಗ್ಗೆ ಹೆಚ್ಚಿನ ಗಮನ ಕೊಡುತ್ತಾರೆಂದು ಭಾವಿಸಿದ್ದೇನೆ. ತಕ್ಷಣ ಇವರಿಗೆ ಉದ್ಯೋಗ ಕೊಟ್ಟರೆ ಒಂದು ದಿನಕ್ಕೆ ಒಂದು ಕೋಟಿ ೩೭ ಲಕ್ಷ ರೂಪಾಯಿ ಹಣ ಖರ್ಚಾಗುತ್ತದೆ. ಈ ಮಟ್ಟದಲ್ಲಿ ಲೆಕ್ಕ ಹಾಕಿದರೆ ೨೦೦ ಕೋಟಿ ರೂಪಾಯಿಗಳನ್ನು ಸಮಿತಿ ವರದಿಯಲ್ಲಿ ಕೊಡಬೇಕೆಂದು ಏನು ಸಲಹೆ ಮಾಡಿದ್ದಾರೆ ಅದೂ ಸಾಕಾಗುವುದಿಲ್ಲ. ಇನ್ನು ಒಂದು ಎರಡು ದಿವಸ ಹೋದರೆ ಕ್ಲಿಯರ್ ಪಿಕ್ಚರ್ ಸಂಪೂರ್ಣವಾಗಿ ಸಿಗುತ್ತದೆ. ೧೫–೨೦ ದಿವಸದಲ್ಲಿ ಗೊತ್ತಾಗುತ್ತದೆ. ಹೆಚ್ಚು ಎಂದರೆ ಒಂದು ತಿಂಗಳಲ್ಲಿ ಸರಿಯಾದ ಪರಿಸ್ಥಿತಿ ಗೊತ್ತಾಗುತ್ತದೆ. ೧೭೫ ತಾಲ್ಲೂಕಿನಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಬಿಟ್ಟರೆ ಉಳಿದ ಎಲ್ಲ ತಾಲ್ಲೂಕುಗಳಲ್ಲಿ ಪ್ರಕ್ಷುಬ್ಧತೆ ಹೆಚ್ಚಿನ ಪ್ರಮಾಣದಲ್ಲಿ ಹೋಗತಕ್ಕದ್ದು ಕಾಣುತ್ತಿದೆ. ಕೆಲಸ ಕೊಡತಕ್ಕ ವಿಚಾರದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂಬುದಕ್ಕೆ ಒಂದು ಪಟ್ಟಿ ಇದೆ. ಪಟ್ಟಿಯಲ್ಲಿ ಇಲ್ಲದಿದ್ದರೆ ಹೊಸದಾಗಿ ಸೇರಿಸಿ. ಆ ರೀತಿ ಸೇರಿಸಿ ಕೆಲಸ ತೆಗೆದು ಕೊಳ್ಳತಕ್ಕ ವಿಚಾರದಲ್ಲಿ, ಹಣ ಜೋಡಣೆ ಮಾಡತಕ್ಕ ವಿಚಾರದಲ್ಲಿ ಯೋಚನೆ ಮಾಡಬೇಕು.

೧೨–೩೦ ಪಿ. ಎಂ.

ಆದ್ದರಿಂದ, ನಾನಾದರೂ ಹೇಳುವುದೇನೆಂದರೆ, ತಾವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅದನ್ನೆಲ್ಲಾ ಈ ಬರಗಾಲ ಕಾಮಗಾರಿಗೋಸ್ಕರ ವರ್ಗ ಮಾಡಬೇಕು. ಈ ರೀತಿ ನೀವು ಹಣವನ್ನು ವರ್ಗ ಮಾಡದೇ ಹೋದರೆ, ಎಂದೂ ಕೂಡ ಈ ಬರಗಾಲ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ನಿಮ್ಮಿಂದ ಸಾಧ್ಯವಾಗುವುದಿಲ್ಲ. ಒಂದು ಮಾತು ಹೇಳುವುದಾದರೆ, ನಾಗಮಂಗಲ ತಾಲ್ಲೂಕಿನ ಜನರು ಯಾವುದೇ ಸರ್ಕಾರ ಬರಲಿ, ಮಳೆ ಬರಲಿ, ಬಾರದೇ ಇರಲಿ ಅವರು ಎಲ್ಲ ಕಾಲಕ್ಕೂ ಹೊಂದಿಕೊಳ್ಳುತ್ತಾರೆ. ಯಾವಾಗಲೂ ಒಂದೇ ರೀತಿಯಲ್ಲಿ ಇರುತ್ತಾರೆ. ಅವರಿಗೆ ಮಳೆ ಬರಲಿ, ಬಾರದೇ ಇರಲಿ ಯೋಚನೆ ಮಾಡುವುದಿಲ್ಲ. ಬರಗಾಲದ ತಾಪ ಅವರಿಗೆ ತಟ್ಟುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಇದುವರೆಗೆ ಬರಗಾಲವೇ ನಮ್ಮನ್ನು ಎದುರಿಸುತ್ತಿತ್ತು. ಆದರೆ ನಾವೇ ಈಗ ಬರಗಾಲವನ್ನು ಎದುರಿಸಿ, ಓಡಿಸುವ ಪರಿಸ್ಥಿತಿಗೆ ಮುಟ್ಟಿದ್ದೇವೆ.

ಶ್ರೀ ಪಟಮಕ್ಕಿ ರತ್ನಾಕರ್.—ಬಹುಶಃ ಬರಗಾಲ ಇವರ ದೇಹವನ್ನು ನೋಡಿ ಹೆದರಿಹೋಗಿರ ಬಹುದೆಂದು ಕಾಣುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾಗಮಂಗಲ ತಾಲ್ಲೂಕಿನಲ್ಲಿ ಬರಗಾಲ ಹೆದರಿ ಓಡಿಹೋದರೆ, ನಮಗೆ ಅಷ್ಟೇ ಸಾಕು.

ಶ್ರೀ ಎಚ್. ಟಿ. ಕೃಷ್ಣಪ್ಪ.—ನೀವು ಜಲಚರ ಪ್ರಾಣಿಗಳಿದ್ದಂತೆ. ನೀವು ಯಾವಾಗಲೂ ನೀರಿನಲ್ಲೇ ಇರತಕ್ಕಂತಹ ಪ್ರಾಣಿಗಳು. ಆದರೆ, ನಾವು ನೀರಿನಲ್ಲೂ ಇರುತ್ತೇವೆ, ಭೂಮಿಯಲ್ಲೂ ಇರುತ್ತೇವೆ. ನಿಮ್ಮದು ಈಗ ಯಾವರೀತಿ ಇದೆ ಎಂದರೆ, ಮಳೆ ಬಾರದೇಹೋದರೆ, ನೀರಿನಿಂದ ಹೊರಕ್ಕೆ ತೆಗೆದು ಹಾಕಿದ ಮೀನಿನಂತೆ ಆಗುತ್ತೀರಿ. ಆದರೆ, ನಮ್ಮದು ಆರೀತಿ ಅಲ್ಲ.

ಶ್ರೀ ಪಟ್ಟಣಶೆಟ್ಟಿ ರತ್ನಾಕರ್.—ಮಾನ್ಯ ಕೃಷ್ಣಪ್ಪನವರನ್ನು ನೋಡಿದರೆ, ಅವರು ಬರಗಾಲ ಪ್ರದೇಶದಿಂದ ಬಂದವರು ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಅಲ್ಲಿ ಬರಗಾಲ ಇದೆಯೆಂಬ ಕಲ್ಪನೆ ನಮಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರಾದ ವೀರಪ್ಪ ಮೊಯಿಲಿಯವರು ಮಾತನಾಡುವಾಗ, ಒಂದು ಉತ್ತಮ ಉದಾಹರಣೆಯನ್ನು ಕೊಟ್ಟರು. ನಾನು ಅದನ್ನು ಹೇಳಿದರೆ ಯಾರೂ ಕೂಡ ದಯವಿಟ್ಟು ತಪ್ಪು ತಿಳಿದುಕೊಳ್ಳಬಾರದು. ಮರುಭೂಮಿಯಲ್ಲಿ ಸಾಮಾನ್ಯವಾಗಿ ಕುಡಿಯುವುದಕ್ಕೆ ಎಲ್ಲೂ ನೀರು ಸಿಕ್ಕುವುದಿಲ್ಲ. ಅಂತಹ ಕಡೆಗಳಲ್ಲಿ ಒಂಟೆಗಳು ಹೋಗುವಾಗ, ಎಲ್ಲಾದರೂ ನೀರು ಕಂಡರೆ, ಅದನ್ನು ಕುಡಿದು ಒಂದುಕಡೆ ಸ್ಟಾಕ್ ಇಟ್ಟುಕೊಂಡು, ತನಗೆ ಬೇಕಾದಾಗೆಲ್ಲಾ ಉಪಯೋಗಿಸಿಕೊಳ್ಳುತ್ತದೆ. ಅದೇರೀತಿ............

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಾವು ಬೇರೆಯವರ ರೀತಿ ಅಲ್ಲ. ಯಾವುದೇ ಆಹಾರವನ್ನಾಗಲೀ ಚೆನ್ನಾಗಿ ಮಾಡಿಕೊಂಡು ಅಚ್ಚುಕಟ್ಟಾಗಿ ಊಟ ಮಾಡಿ, ಅರಗಿಸಿಕೊಳ್ಳತಕ್ಕ ಒಂದು ವ್ಯವಸ್ಥೆಯನ್ನು ಅಭ್ಯಾಸ ಮಾಡಿಕೊಂಡಿದ್ದೇವೆ. ಅದೇರೀತಿ ತಾವೂ ಮಾಡುವುದಾದರೆ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾವರೀತಿ ಪ್ರಾಕ್ಟೀಸ್ ಮಾಡಿದ್ದೀರಿ ಹೇಳಿ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಿಮ್ಮ ತರಹ ನಾವು ಭಕ್ಷ್ಯಭೋಜನಗಳನ್ನು ತಿನ್ನತಕ್ಕವರಲ್ಲ. ನಮಗೆ ಸಿಕ್ಕತಕ್ಕ ಆಹಾರಗಳನ್ನೇ ಚೆನ್ನಾಗಿ ತಿನ್ನುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ನೀವೇನು ಪ್ರಾಕ್ಟೀಸ್ ಮಾಡಿದ್ದೀರಿ ಎಂದು ಹೇಳುತ್ತಿದ್ದೀರಿ, ಆ ರೀತಿ ನಾವು ಪ್ರಾಕ್ಟೀಸ್ ಮಾಡುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ಮಾನ್ಯ ಮೊಯಿಲಿಯವರೇ, ಮೊನ್ನೆ ಶಾಸಕರ ದಿನಾಚರಣೆಯ ದಿವಸ ತಾವು ಮಾನ್ಯ ಕೃಷ್ಣಪ್ಪನವರನ್ನು ನೋಡಲಿಲ್ಲವೇ?

ಶ್ರೀ ಎಂ. ವೀರಪ್ಪ ಮೊಯಿಲಿ.—ಊಟ ಆದಮೇಲೆ ತಾವು ಏನು ಕಲೆಯನ್ನು ಇಟ್ಟುಕೊಂಡಿದ್ದೀರಿ. ಅದನ್ನು ಮಾತ್ರ ಮಾಡಬೇಡಿ.

ಶ್ರೀ ಎಸ್. ಬಂಗಾರಪ್ಪ.—ನಾನು ಮತ್ತು ಮಾನ್ಯ ಕೃಷ್ಣಪ್ಪನವರು ಜನರಲ್ ಹಾಸ್ಟಲ್‌ನಲ್ಲಿ ಇದ್ದೆವು. ಆಗ ನಾನು ಅವರನ್ನು ಚೆನ್ನಾಗಿ ನೋಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಈಗ ಆ ವಿಚಾರವನ್ನೆಲ್ಲಾ ಮಾತನಾಡುವುದಕ್ಕೆ ಕಾಲಾವಕಾಶವಿಲ್ಲ. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿರತಕ್ಕ ಬರಗಾಲದ ಪರಿಸ್ಥಿತಿಯ ಬಗ್ಗೆ ಹೋಗಿರತಕ್ಕಂಥಾದ್ದನ್ನು ನೋಡಿದರೆ ಜನರಿಗೆ ಉದ್ಯೋಗ ಕೊಡತಕ್ಕಂಥ ವಿಚಾರದಲ್ಲಿ ಬಹಳ ಕಷ್ಟವಾಗಿದೆ. ಸುಮಾರು ೫೦ ಲಕ್ಷ ಜನ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಏನಿದ್ದಾರೆ ಅವರ ಪರಿಸ್ಥಿತಿ ಮಾನ್ಯ ಖಾರ್ಗೆ ಸಮಿತಿಯವರು ಹೇಳಿರುವಂತೆ ಬಹಳ ಕಠಿಣವಾಗುತ್ತದೆ. ಈ ಸಾರಿ ತುಮಕೂರು ಜಿಲ್ಲೆಯಲ್ಲಿ ಮಳೆಯಾಗದೆ ಸಂಪೂರ್ಣವಾಗಿ ಬರಗಾಲಕ್ಕೆ ತುತ್ತಾಗಿದೆ. ಅದೇರೀತಿ ಮಾನ್ಯ ಸಚಿವರಾದ ವೀರಣ್ಣನವರ ಕ್ಷೇತ್ರವಾದ ಕೊರಟಗೆರೆಯೂ ಕೂಡ ಬರಗಾಲಕ್ಕೆ ತುತ್ತಾಗಿದೆ. ಇಷ್ಟೇ ಅಲ್ಲದೆ ಮಧುಗಿರಿ, ಕೋಲಾರ, ನಾಗಮಂಗಲದ ಕೆಲವು ಭಾಗಗಳು ಬರಗಾಲಕ್ಕೆ ತುತ್ತಾಗಿವೆ. ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಬಂದಿರತಕ್ಕ ಕ್ಷೇತ್ರದಲ್ಲಿ ಯಾವರೀತಿ ಬರಗಾಲ ಪ್ರಾಪ್ತವಾಗಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ಕೆಲವು ಶಾಶ್ವತವಾದ ಬರಗಾಲದ ದವಡೆಯಲ್ಲಿರತಕ್ಕ ಪ್ರದೇಶಗಳನ್ನು ಬಿಟ್ಟರೆ ಇನ್ನುಳಿದ ಪ್ರದೇಶಗಳಲ್ಲಿ ಸುಮಾರಾಗಿ ಮಳೆ, ಬೆಳೆ ಆಗುತ್ತಿತ್ತು. ಆದರೆ ಇತ್ತೀಚೆಗೆ ಅಲ್ಲಿಯೂ ಕೂಡ ಮಳೆ ಬೆಳೆ ಆಗದೆ ಪರಿಸ್ಥಿತಿ ತುಂಬಾ ಗಂಭೀರವಾಗಿದೆ. ಇದರಿಂದಾಗಿ, ಖಾರ್ಗೆ ಸಮಿತಿಯವರು ಹೇಳಿರುವ ಕೃಷಿಕರು ಮತ್ತು ಕೃಷಿ ಕಾರ್ಮಿಕರ ಸಂಖ್ಯೆ ಸುಮಾರು ೫೦ ಲಕ್ಷ ಎಂದು ಏನು ಇದೆ ಈ ಸಂಖ್ಯೆ ಇನ್ನೂ ಹೆಚ್ಚಿಗೆ ಆಗತಕ್ಕ ಸಂಭವ ಇದೆ. ೭೨–೭೩ನೇ ಇಸವಿಯಲ್ಲಿ ಏನು ಬರಗಾಲ ಪರಿಸ್ಥಿತಿ ಇತ್ತು ಅದೇರೀತಿಯ ಪರಿಸ್ಥಿತಿ ಇಂದೂ ಕೂಡ

ಬಂದಿದೆ. ಉದಾಹರಣೆಗೆ ಹೇಳುವುದಾದರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ೩೦–೪೦ ಎಕರೆ ಜಮೀನನ್ನು ಹೊಂದಿರತಕ್ಕ ಭೂ ಮಾಲೀಕರೂ ಕೂಡ ಇವತ್ತು ಬೆಂಗಳೂರು ಮುಂತಾದ ಕಡೆಗಳಿಗೆ ವಲಸೆ ಬಂದು ಕಟ್ಟಡಗಳನ್ನು ಕಟ್ಟುವ ಸ್ಥಳಗಳಲ್ಲಿ ಇಟ್ಟಿಗೆ, ಮಣ್ಣು ಹೊರುವ ಕೆಲಸ ಮಾಡುತ್ತಿದ್ದಾರೆ. ಅವರು ಅಷ್ಟೊಂದು ಜಮೀನು ಇದ್ದರೂ ಏತಕ್ಕೆ ಕೂಲಿ ಮಾಡಲು ಬಂದಿದ್ದಾರೆ ಎಂದು ತಾವು ಕೇಳಬಹುದು. ಆದರೆ ಅವರಿಗೆ ಜಮೀನು ಇದ್ದರೂ ಕೂಡ ಬೆಳೆ ಬೆಳೆಯಲು ಮಳೆ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಅವರು ಲ್ಯಾಂಡ್ ಲಾರ್ಡ್ಸ್.

ಶ್ರೀ ಎಸ್. ಬಂಗಾರಪ್ಪ.—ಅವರು ಲ್ಯಾಂಡ್ ಲ್ಯಾರ್ಡ್ಸ್ ಅಲ್ಲ. ಲ್ಯಾಂಡ್ ಹೋಲ್ಡರ್ಸ್. ಅಂದರೆ ನೆಲ ಹಚ್ಚಿರುವವರು. ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರಲ್ಲಿ ತಮ್ಮ ಮೂಲಕ ಒಂದು ಮಾತನ್ನು ಕೇಳಿಕೊಳ್ಳುತ್ತೇನೆ. ಇದುವರೆಗೆ ಕಂದಾಯವನ್ನು ಕಂತಿನ ಪ್ರಕಾರ ವಸೂಲು ಮಾಡುತ್ತಿರುವುದನ್ನು ಇನ್ನು ಮುಂದೆ ಸಂಪೂರ್ಣವಾಗಿ ಮಾಫಿ ಮಾಡಬೇಕು. ಸುಮಾರು ೬ ಕೋಟಿ ರೂಪಾಯಿ ಸರ್ಕಾರಕ್ಕೆ ಕಂದಾಯ ಬರಬಹುದೆಂದು ಕಾಣುತ್ತದೆ. ಇದು ಇಷ್ಟನ್ನೂ ತಾವು ಪೂರ್ತಿಯಾಗಿ ಮಾಫಿ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಮಕ್ಕಿಗದ್ದೆಯಲ್ಲಿ ಕೂಡ ಮಳೆ ಇಲ್ಲದೆ ಬೆಳೆ ಹೋಗಿರುವುದರಿಂದ ಅಲ್ಲಿಯೂ ಕೂಡ ಕಂದಾಯವನ್ನು ವಸೂಲು ಮಾಡುವುದನ್ನು ಮಾಫಿ ಮಾಡಬೇಕು. ಹಿಂಕಟ್ಟು ಮಳೆ ಬೀಳುವಂಥ ಪ್ರದೇಶದಲ್ಲಿ, ಬ್ಲಾಕ್ ಕಾಟನ್ ಸಾಯಿಲ್ ಇರತಕ್ಕ ಕಡೆಗಳಲ್ಲಿ ಕೆಮಿಕಲ್ ಮೆನ್ಯೂರ್, ಅಂದರೆ ರಾಸಾಯನಿಕ ಗೊಬ್ಬರವನ್ನು ಹಂಚತಕ್ಕ ವ್ಯವಸ್ಥೆಯನ್ನು ಮಾಡಬೇಕು. ಈಗ ಇದು ಮುಗಿದುಹೋಗಿದೆ. ನಾನು ಈ ಮಾತನ್ನು ಹೇಳಿದ್ದರಿಂದ ಈ ಬಗ್ಗೆ ತಾವು ಏನು ಉತ್ತರವನ್ನು ಕೊಡುವುದಕ್ಕೆ ಸಿದ್ಧವಾಗುತ್ತೀರಿ ಎಂಬುದನ್ನೂ ಕೂಡ ನಾನು ಆಲೋಚನೆ ಮಾಡಿದ್ದೇನೆ. ಮಳೆಯೇ ಇಲ್ಲ, ಅಂದಮೇಲೆ ಅವರಿಗೆ ಗೊಬ್ಬರವನ್ನು ಏತಕ್ಕೆ ಕೊಡಬೇಕೆಂದು ತಾವು ತಮ್ಮ ಉತ್ತರವನ್ನು ಸಿದ್ಧಮಾಡಿಕೊಂಡಿರಬಹುದು. ಈಗ ನೀವು ಕೊಟ್ಟಿಲ್ಲವೆಂದು ಹೇಳಬಹುದು. ಆದರೆ ಹಿಂದೆ ಮಳೆಗಾಲದಲ್ಲೂ ಕೂಡ ತಾವು ರೈತರಿಗೆ ಗೊಬ್ಬರವನ್ನು ಕೊಟ್ಟಿಲ್ಲ. ಯಾರು ಕಡು ಬಡ ರೈತರು ಇದ್ದಾರೆ ಅವರಿಗೆ ಸಹಾಯಧನದ ರೂಪದಲ್ಲಿ ಬೀಜ ಮತ್ತು ಗೊಬ್ಬರವನ್ನು ಈ ದಿವಸದಿಂದಲೇ ಹಂಚಲು ಪ್ರಾರಂಭ ಮಾಡಿದರೂ ಕೂಡ ಬರತಕ್ಕ ಅಲ್ಪಸ್ವಲ್ಪ ಮಳೆಯಲ್ಲೇ ಸುಮಾರಾಗಿ ಬೆಳೆಯನ್ನು ಬೆಳೆದುಕೊಳ್ಳುವುದಕ್ಕೆ ಸಹಾಯವಾಗುತ್ತದೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಹೇಳುವುದಾದರೆ ಕೆಲವು ವರ್ಗದ ಜನರಿಗೆ ಬಡ್ಡಿ ರಹಿತ ಸಾಲವನ್ನು ಕೊಡಬೇಕಾಗುತ್ತದೆ. ರೈತರು ಬಾವಿಗಳನ್ನು ತೋಡಿದಾಗ ನೀರು ಸಿಕ್ಕದೆ ವಿಫಲವಾದರೆ ಅದಕ್ಕೆ ರಿಯಾಯಿತಿಯನ್ನು ಕೊಡುತ್ತೀರಿ. ಪಿ.ಎಲ್.ಡಿ. ಬ್ಯಾಂಕ್‌ನ ಮೂಲಕ ಯಾರು ಹಣವನ್ನು ಸಾಲ ತೆಗೆದುಕೊಂಡಿರುತ್ತಾರೆ ಅವರು ಬಾವಿಯನ್ನು ತೆಗೆದಾಗ, ನೀರು ಬಾರದೆ ಹೋದರೆ ಸಾಲ ಮನ್ನಾ ಮಾಡುವುದು ಕೆಲವು ಸಂದರ್ಭಗಳಲ್ಲಿ, ಬಡ್ಡಿಯನ್ನು ಅಸಲನ್ನು ಮಾತ್ರ ತೆಗೆದುಕೊಳ್ಳುವುದು ಮಾಡುತ್ತೀರಿ. ಈಗ ಬರಗಾಲಕ್ಕೆ ತುತ್ತಾಗಿರುವ ಈ ೧೭ ಜಿಲ್ಲೆಗಳಲ್ಲಿ ತಾವು ಬಡ್ಡಿ ರಹಿತ ಸಾಲವನ್ನು ಕೊಡದೇಹೋದರೆ, ರೈತರಿಗೆ ತೊಂದರೆಯಾಗುತ್ತದೆ. ಅವರು ಕೂಲಿಮಾಡಿ ಜೀವನ ಮಾಡುವುದಕ್ಕೂ ಕಷ್ಟವಾಗುತ್ತದೆ. ಸರ್ಕಾರದವರು ಒಂದು ಪಟ್ಟಿಯನ್ನು ತಯಾರುಮಾಡಿ, ಇಂತಿಂತಹವರು ಬಂದು, ಇಂತಿಂಥ ಕೆಲಸವನ್ನು ಮಾಡಬೇಕು ಎಂದು ಹೇಳಿದರೆ, ಆ ಕೆಲಸವನ್ನು ಮಾಡುವುದಕ್ಕೆ ಯಾರೂ ಬರುವುದಿಲ್ಲ. ೧೦ ಸಾವಿರ ರೂಪಾಯಿಯನ್ನು ಬಾವಿಗೋಸ್ಕರ ಸಾಲ ಕೊಟ್ಟರೆ ಅವನು ಇನ್ನೊಬ್ಬರನ್ನು ಆ ಕೆಲಸಕ್ಕೆ ಹಚ್ಚುತ್ತಾನೆ. ತಾವು ಬಡ್ಡಿ ರಹಿತ ಸಾಲವನ್ನು ಕೊಟ್ಟು ಬಾವಿಯನ್ನು ತೋಡಿಸುವುದು, ಭೂಸಾರ ರಕ್ಷಣೆ ಕಾಮಗಾರಿ ಮಾಡಿಸುವುದನ್ನು ಮಾಡಬೇಕು.

ಮಾನ್ಯ ಅಧ್ಯಕ್ಷರೆ, ಮಲೆನಾಡು ಭಾಗದಲ್ಲಿ ಕೆರೆಗಳಲ್ಲಿ ಹೂಳನ್ನು ತೆಗೆಯಬಾರದೆಂದು ಹೇಳುತ್ತಿದ್ದಾರೆ. ಇದು ಸರಿಯಲ್ಲ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಕೆರೆಗಳಲ್ಲಿ ಬಿದ್ದಿರತಕ್ಕ ಹೂಳನ್ನು ತೆಗೆಸಲು ಇದೇ ಸೂಕ್ತ ಸಮಯ. ಏಕೆಂದರೆ ಒಂದು ರೀತಿಯಲ್ಲಿ ಇದು ಬರಗಾಲ ಕಾಮಗಾರಿಯಲ್ಲದೆ ಹೂಳನ್ನು ತೆಗೆಯುವ ಒಂದು ಕಾರ್ಯವೂ ಆದಂತಾಗುತ್ತದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಈಗ ಹೂಳನ್ನು ತೆಗೆಸುವ ಕಾರ್ಯವನ್ನು ಮಾಡಿಸುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಒಂದೇಸಾರಿ ಎಲ್ಲ ವಿಧವಾದ ಬರಗಾಲ ಕಾಮಗಾರಿಗಳನ್ನೂ ತೆಗೆದುಕೊಳ್ಳಿ ಎಂದು ನಾನು ಹೇಳುವುದಿಲ್ಲ. ಸಮಯವನ್ನು ಅರಿತು ಹಂತಹಂತವಾಗಿ ಮಾಡಿ. ಹೂಳನ್ನು

ತೆಗೆಸಿ ಕೆರೆಯ ಏರಿಯ ಮೇಲೆ ಅಥವಾ ದೂರಕ್ಕೆ ಎಲ್ಲಾದರೂ ಹಾಕಿಸಿ. ಇಲ್ಲದೇ ಹೋದರೆ ರೈತರು ಹೊಲಗಳಿಗೆ ತೆಗೆದುಕೊಂಡು ಹೋಗಿ ಹಾಕಿಕೊಳ್ಳಲು ಹೇಳಿ. ಅದು ಅವರಿಗೆ ಗೊಬ್ಬರ ಆದಂತಾಗುತ್ತದೆ. ಮೀನುಗಾರಿಕೆ ಇಲಾಖೆಯವರಿಗೂ ಅವಕಾಶವನ್ನು ತಾವು ಮಾಡಿಕೊಡುವುದಾದರೆ ಅವರಿಂದಲೂ ಉತ್ಪಾದನೆಯಾಗುತ್ತದೆ. ಹೂಳನ್ನು ತೆಗೆಸುವುದರಿಂದ ಕೆರೆಯ ಆಳ ಜಾಸ್ತಿಯಾಗಿ ಹೆಚ್ಚು ನೀರು ಶೇಖರಣೆಯಾಗುತ್ತದೆ. ಹೆಚ್ಚಿನ ಅಚ್ಚು ಕಟ್ಟು ಪ್ರದೇಶಕ್ಕೆ ತಾವು ನೀರನ್ನೊದಗಿಸಿದರೆ ಹೆಚ್ಚು ಬೆಳೆಯನ್ನೂ ಬೆಳೆಯಲು ಅನುಕೂಲವಾಗುತ್ತದೆ. ಈ ದಿಸೆಯಲ್ಲಿ ಲೋಕೋಪಯೋಗಿ ಇಲಾಖೆಯವರ ಸಹಕಾರವನ್ನು ತಾವು ಹೆಚ್ಚಿಗೆ ತೆಗೆದುಕೊಳ್ಳಬೇಕು. ಸಣ್ಣಪುಟ್ಟ ಕೆರೆಗಳನ್ನು ಪಿಕಪ್‌ಗಳನ್ನು ಕಟ್ಟಿದರೆ ಪ್ರತಿಯೊಂದು ಕಡೆಯಲ್ಲೂ ಸುಮಾರು ೫೦ ರಿಂದ ೨೦೦ ಎಕರೆಗಳವರೆಗೂ ನೀರನ್ನು ಒದಗಿಸಬಹುದು. ಆದರೆ ಈ ಕೆಲಸವನ್ನು ಇಂಥಿಂಥಾ ಕಡೆಗಳಲ್ಲೇ ತೆಗೆದುಕೊಳ್ಳಿ ಎಂದು ನಾನು ಹೇಳುವುದಿಲ್ಲ. ರಿಲೀಫ್ ಕಾಮಗಾರಿಗಳನ್ನು ಮಾಡುವಾಗ ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿ. ಹಳೇ ಮೈಸೂರು ಭಾಗ, ಬೊಂಬಾಯಿ ಕರ್ನಾಟಕದ ಭಾಗ, ಹೈದರಾಬಾದ್ ಕರ್ನಾಟಕದ ಭಾಗ ಮುಂತಾಗಿ ಇನ್ನೂ ಎಲ್ಲೆಲ್ಲಿ ಈ ಯೋಜನೆಗಳನ್ನು ಮಾಡಬೇಕೆಂದು ತಾವು ಯೋಚಿಸಿದ್ದೀರೋ ಆ ಪ್ರದೇಶಕ್ಕೆ ಅನುಗುಣವಾಗಿ ಎಲ್ಲ ಯೋಜನಾ ವ್ಯವಸ್ಥೆಗಳನ್ನೂ ಸಿದ್ಧಮಾಡಿ ಇಟ್ಟುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲು ಇದ್ದ ವ್ಯವಸ್ಥೆಯನ್ನು ಈಗ ಬದಲಾವಣೆ ಮಾಡಿದ್ದೇವೆ. ಅನೇಕ ಕಡೆಗಳಲ್ಲಿ ಈಗ ಕೆರೆಗಳಲ್ಲಿ ಹೂಳು ಎತ್ತುವ ಕೆಲಸವನ್ನು ಪ್ರಾರಂಭ ಮಾಡಿಸಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೆ, ಹೂಳು ತೆಗೆಸುವುದರಲ್ಲಿ ನನ್ನ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಕೆರೆಯಲ್ಲಿರತಕ್ಕ ಹೂಳನ್ನು ರೈತರು ಅಲ್ಪ ಪ್ರಮಾಣದಲ್ಲಿ ಮಾತ್ರ ತೆಗೆಯುತ್ತಾರೆ. ಆದರೆ ಅವರಿಗೆ ಏನಾದರೂ ಸ್ವಲ್ಪ ಪರಿಹಾರಧನ ಎಂದು ಕೊಡುವುದಾದರೆ, ಇಲ್ಲವೇ, ಒಂದು ಗಾಡಿಗೆ ಇಂತಿಷ್ಟು, ಒಂದು ಟ್ರ್ಯಾಕ್ಟರ್‌ಗೆ ಇಂತಿಷ್ಟು ಅಥವಾ ಒಂದು ಲಾರಿ ಲೋಡಿಗೆ ಇಂತಿಷ್ಟು ಎಂದು ಗೊತ್ತುಮಾಡಿದರೆ ಆಗ ರೈತರು ಆಸಕ್ತಿಯಿಂದ ಮುಂದೆಬಂದು ಹೂಳನ್ನು ತೆಗೆಯುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಇದು ಬಹಳ ಉತ್ತಮ ಸಲಹೆ.

ಶ್ರೀ ಆರ್. ವೆಂಕಟರಾಮಯ್ಯ.—ಖರ್ಗೆ ಸಮಿತಿಯ ವರದಿಯಲ್ಲೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರುವ ರೀತಿಯಲ್ಲಿ ಅರ್ಧ ಹಣವನ್ನಾದರೂ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ವೈ.ಕೆ. ರಾಮಯ್ಯ.—ಎಲ್ಲ ಕೆರೆಗಳಲ್ಲೂ ಕೂಡ ಇದೇರೀತಿ ಹೂಳು ತುಂಬಿಕೊಂಡಿದೆ. ಹೂಳು ತೆಗೆಯುವ ಕೆಲಸ ಸಂಪೂರ್ಣವಾಗಿ ಫಲಪ್ರದವಾಗಿಲ್ಲ. ನಮ್ಮ ಜಿಲ್ಲಾಧಿಕಾರಿಯವರ ಜೊತೆಯಲ್ಲಿ ನಾನು ಚರ್ಚೆಮಾಡಿ ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಹೂಳನ್ನು ತೆಗೆಯುವ ಸಲುವಾಗಿ ಕಂಟ್ರಾಕ್ಟರ್‌ಗಳಿಗೆ ಕೊಡತಕ್ಕ ಹಣದಲ್ಲಿ ಅರ್ಧ ಭಾಗವನ್ನು ರೈತರಿಗೇ ಕೊಟ್ಟರೆ ಅವರು ಆಸಕ್ತಿಯಿಂದ ತೆಗೆಯುವುದರ ಜೊತೆಗೆ ತಮ್ಮ ತಮ್ಮ ಹೊಲಗಳಿಗೆ ಅದನ್ನು ತೆಗೆದುಕೊಂಡು ಹೋಗುತ್ತಾರೆ. ಇದು ಅವರ ಹೊಲಕ್ಕೆ ಗೊಬ್ಬರ ಆಗುತ್ತದೆ. ಅದ್ದರಿಂದ ಇದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾವೂ ಇದನ್ನೇ ಹೇಳುತ್ತಿದ್ದೇವೆ, ತಾವೂ ಕೂಡ ಇದೇ ಸಲಹೆಯನ್ನೇ ಹೇಳುತ್ತಿದ್ದೀರಿ. ಆದರೆ ಮಾನ್ಯ ಸಚಿವರಾದ ಬೊಮ್ಮಾಯಿಯವರು ಇದನ್ನು ವ್ಯಾಪಕವಾಗಿ ಮಾಡಬೇಕು ಅಷ್ಟೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೂಳು ತೆಗೆಯುವ ವಿಚಾರದಲ್ಲಿ ಹೇಳುವುದಾದರೆ, ಅದು ಕುಡಿಯುವ ನೀರನ್ನು ಸರಬರಾಜು ಮಾಡುವ ಕೆರೆ ಆಗಬಹುದು, ಇಲ್ಲವೇ ನೀರಾವರಿಗಾಗಿ ಉಪಯೋಗಿಸುವ ಕೆರೆ ಆಗಬಹುದು, ತುಂಬಿಕೊಂಡಿರುವ ಹೂಳನ್ನು ಹೊರಗೆ ತೆಗೆಯಲೇಬೇಕಾಗುತ್ತದೆ. ಮೊದಲು ರೈತರು ಕೆರೆಯ ಗೋಡು ಮಣ್ಣನ್ನು ಹೊಲಗಳಿಗೆ ತೆಗೆದುಕೊಂಡು ಹೋಗಿ ಹಾಕಿಕೊಳ್ಳುತ್ತಿದ್ದರು. ಆದರೆ ಈಗ ಅವರು ಇದನ್ನು ಮರೆತಿದ್ದಾರೆ. ಆದ್ದರಿಂದ ಇವತ್ತು ರೈತರು ಈ ಮಣ್ಣನ್ನು ತೆಗೆದುಕೊಂಡು ಹೋಗುವಂತೆ ಹೇಳಬೇಕಾಗಿದೆ, ಅಲ್ಲದೆ ಆ ಜನರಿಗೆ ಕೆಲಸವನ್ನೂ ಕೂಡ ಕೊಡಬೇಕಾಗುತ್ತದೆ. ನಮ್ಮ ಮುಖ್ಯ ಉದ್ದೇಶ ಬಡವರಿಗೆ, ಕೂಲಿ ಮಾಡುವವರಿಗೆ ಅನುಕೂಲ

ಮಾಡಿಕೊಡಬೇಕೆಂಬುದು. ಈ ಮಣ್ಣನ್ನು ಸಾಗಾಣಿಕೆ ಮಾಡುವವರಿಗೂ ಹಣವನ್ನು ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಮತ್ತು ರೈತರು ಇದರ ಬಗ್ಗೆ ಸಹಕರಿಸಬೇಕು. ಯಾವುದೇ ಗ್ರಾಮಕ್ಕಾಗಲಿ ರಸ್ತೆಯನ್ನು ಮಾಡಬೇಕಾದರೆ, ಕೆರೆಯಲ್ಲಿರುವ ಹೂಳನ್ನು ತೆಗೆಯಬೇಕಾದರೆ ಆ ಸ್ಥಳೀಯ ಜನರು ಮುಂದೆಬಂದು ಸಹಕರಿಸಬೇಕು. ಯಾರಿಗೆ ಗಾಡಿ ಇರುತ್ತದೆ, ಯಾರಿಗೆ ಟ್ರ್ಯಾಕ್ಟರ್ ಇರುತ್ತದೆ, ಯಾರ ಮನೆಯಲ್ಲಿ ಆಳುಗಳು ಇರುತ್ತಾರೆ, ಲಾರಿಗಳನ್ನು ಯಾರು ಇಟ್ಟುಕೊಂಡಿರುತ್ತಾರೆ ಅಂಥವರು ಮುಂದೆಬಂದು ಸಹಕರಿಸಬೇಕು.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಸ್ಥಳೀಯ ರೈತರಿಗೇ ಹಣವನ್ನು ಕೊಟ್ಟು ಮಾಡಿಸುತ್ತೀವೆ ಎಂದರೆ ನಿಮ್ಮ ಅಧಿಕಾರಿಗಳಿಗೆ ಏನೂ ಅನುಕೂಲವಾಗುವುದಿಲ್ಲ. ಅವರಿಗೆ ಅದು ಗಿಟ್ಟುವುದಿಲ್ಲ. ಅಧಿಕಾರಿಗಳೇ ಆದರೆ ಅವರು ತಮಗೆ ಬೇಕಾದ ಕಂಟ್ರಾಕ್ಟರ್‌ಗಳಿಗೆ ಕೊಟ್ಟು ಮಾಡಿಸುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಯಾವ ಗ್ರಾಮದ ಸ್ಥಳೀಯ ಜನರು ಬರಗಾಲ ಕಾಮಗಾರಿಗಳನ್ನು ಮಾಡಲು ಮುಂದೆ ಬರುತ್ತಾರೆ ಅವರಿಗೇ ನಾವು ಈ ಕೆಲಸವನ್ನು ಒಪ್ಪಿಸುತ್ತೇವೆ. ಬೇರೆ ಕಂಟ್ರಾಕ್ಟರ್‌ಗಳಿಗೆ ಕೊಡತಕ್ಕ ಹಣವನ್ನು ಇವರಿಗೇ ಕೊಡುತ್ತೇವೆ. ಇದರಿಂದಾಗಿ ಅಧಿಕಾರಿಗಳು ಕಂಟ್ರಾಕ್ಟರ್‌ಗಳ ಜೊತೆ ಅವ್ಯವಹಾರ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ನಾವು ಕೊಡತಕ್ಕ ಹಣವೂ ಕೂಡ ಹಳ್ಳಿಯ ಬಡ ರೈತರಿಗೇ ಸೇರಿಕೊಳ್ಳುತ್ತದೆ.

ಶ್ರೀ ಬಾಬುರೆಡ್ಡಿ ತುಂಗಳ್.—ಸ್ವಾಮಿ, ನನ್ನ ಕ್ಷೇತ್ರದಲ್ಲಿ ೬–೭ ಕೆರೆಗಳಲ್ಲಿ ಹೂಳು ತುಂಬಿಕೊಂಡಿದೆ. ಲಾರಿಗಳನ್ನು ಇಟ್ಟುಕೊಂಡಿರುವವರಿಗೆ ಟ್ರಾಕ್ಟರ್‌ಗಳನ್ನು ಇಟ್ಟುಕೊಂಡಿರುವವರಿಗೆ ಒಂದೊಂದು ಲೋಡಿಗೆ ಇಂತಿಷ್ಟು ಎಂದು ಹಣವನ್ನು ಗೊತ್ತುಮಾಡಿದರೆ ಅವರು ಬೇಗ ಹೂಳನ್ನು ತೆಗೆಯುವುದರ ಜೊತೆಗೆ ನೂರಾರು ಜನರಿಗೆ ಕೆಲಸ ಸಿಕ್ಕುತ್ತದೆ. ಮತ್ತು ಈ ಮಣ್ಣನ್ನು ರೈತರು ಹೊಲಗಳಿಗೆ ತೆಗೆದುಕೊಂಡು ಹೋಗಲು ಅನುಮತಿಯನ್ನು ನೀಡುವಂತೆ ತಹಸೀಲ್ದಾರ್‌ರವರಿಗೆ ಆದೇಶವನ್ನು ತಾವು ಕೊಡಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೆ. ಮಾನ್ಯ ಬೊಮ್ಮಾಯಿಯವರು ಹೇಳಿದ್ದನ್ನು ನಾನು ಸ್ವಾಗತ ಮಾಡುತ್ತೇನೆ. ಆಯಾಯ ಗ್ರಾಮದ ಸ್ಥಳೀಯ ಜನರೇ ಹೂಳನ್ನು ತೆಗೆಯಲು ಮುಂದೆ ಬಂದರೆ ಅವರಿಗೇ ಅದನ್ನು ಒಪ್ಪಿಸುತ್ತೇವೆಂದು ಹೇಳಿದ್ದಾರೆ. ಎನ್.ಆರ್.ಇ.ಪಿ. ಯೋಜನೆಯಲ್ಲಿ ಕಂಟ್ರಾಕ್ಟರ್‌ಗಳು ಇರಬಾರದೆಂದು ಹೇಳಿದರೂ ಕೂಡ ಅವರೇ ಬರುತ್ತಾರೆ. ಈಗ ಮಾನ್ಯ ಸಚಿವರು ಹೇಳಿದಂತೆ ಮಾಡುವುದಾದರೆ ಆ ಗ್ರಾಮದ ಜನರಿಗೇ ಹಣ ಸಿಕ್ಕುವುದರ ಜೊತೆಗೆ ಇಂಥ ಕೆಲಸಗಳಲ್ಲಿ ಏನೂ ಅವ್ಯವಹಾರ ಆಗದಂತೆ ನಡೆಯಲು ಅನುಕೂಲವಾಗುತ್ತದೆ, ಮತ್ತು ಎಲ್ಲಾದರೂ ಅವ್ಯವಹಾರ ನಡೆದರೆ ಅದು ಎಲ್ಲ ಜನರಿಗೂ ಗೊತ್ತಾಗುತ್ತದೆ. ಈ ದಿಸೆಯಲ್ಲಿ ತಾವು ಒಂದು ಆದೇಶವನ್ನು ಹೊರಡಿಸಿದರೆ ಆಗ ಅಧಿಕಾರಿಗಳು ಸ್ಥಳೀಯ ಜನರಿಗೆ ಮೋಸ ಮಾಡುವುದಕ್ಕಾಗುವುದಿಲ್ಲ. ಸರ್ಕಾರದಿಂದ ಕೊಡತಕ್ಕ ಹಣ ನೇರವಾಗಿ ಬಡವರಿಗೆ ತಲುಪುತ್ತದೆ. ಈ ಕೆಲಸ ಕಾರ್ಯಗಳ ಜೊತೆಗೆ ಮಲೆನಾಡು ಕ್ಷೇತ್ರದಲ್ಲೂ ಕೂಡ ಚಾನಲ್ಸ್ ಬಗ್ಗೆ ಗಮನವನ್ನು ಕೊಡಬೇಕೆಂದು ನಾವು ಹೇಳಿದ್ದೇವೆ.

ಇನ್ನೂ ಕೂಲಿಗಾರರ ವಿಚಾರದಲ್ಲಿ ಹೇಳುವುದಾದರೆ ಗಂಡಸರು ಮತ್ತು ಹೆಣ್ಣುಮಕ್ಕಳು ಕೂಲಿ ಕೊಡತಕ್ಕಂಥ ದರದಲ್ಲಿ ವ್ಯತ್ಯಾಸವಿದೆ ಎಂದು ಹೇಳುತ್ತಾರೆ. ಆದ್ದರಿಂದ ಒಂದೇ ರೀತಿಯಾದ ದರವನ್ನು ಕೊಡತಕ್ಕಂಥದ್ದು ಬಹಳ ಅವಶ್ಯಕತೆ ಇರುತ್ತದೆ, ಒಂದೇ ರೀತಿಯಾದ ದರವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಮತ್ತೆ ಇಲ್ಲಿ ಆಪಾದನೆಗಳು ಬಹಳವಾಗಿ ಇರುತ್ತದೆ. ಒಂದೇ ರೀತಿಯಲ್ಲಿ ಕೊಡಬೇಕೆಂದು ಸಮಿತಿಯ ವರದಿಯಲ್ಲೂ ಕೂಡ ಹೇಳಿದ್ದಾರೆ. ಆದ್ದರಿಂದ ನೀವು ಆಜ್ಞೆ ಮಾಡತಕ್ಕಂಥ ರೀತಿಯಲ್ಲಿ ಯಾರೇ ಅಧಿಕಾರಿಗಳು ನಡೆದುಕೊಳ್ಳದಿದ್ದರೆ ಅಂಥ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಕೆಲವರಿಗೆ ಇದರಿಂದ, ದುಡ್ಡು ತಿನ್ನತಕ್ಕಂಥದ್ದಕ್ಕೆ ಒಂದು ಒಳ್ಳೆಯ ಅವಕಾಶ ದೊರೆತಂತಾಗುತ್ತದೆ. ಒಂದು ಹುಲ್ಲುಗಾವಲು ಇದ್ದಹಾಗೆ ಆಗುತ್ತದೆ. ಆದ್ದರಿಂದ ಅಧಿಕಾರಿಗಳಿಂದ ಹಣದ ದುರುಪಯೋಗವಾಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ, ಇಷ್ಟು ವಿಷಯಗಳನ್ನು ತಿಳಿಸಿ ಅನೇಕ ವಿಷಯಗಳನ್ನು ಹೇಳಬೇಕಾಗಿತ್ತು, ಆದರೆ ಈಗ ತಾನೇ ವರದಿ ಬಂದಿರುತ್ತದೆ. ಆದುದರಿಂದ ಲೇಟೆಸ್ಟ್

ಫಿಗರ್ಸ್ ಸಂಪೂರ್ಣವಾಗಿ ನಮಗೆ ಅರ್ಥವಾಗಿಲ್ಲ. ತಮಗೂ ಕೂಡ ಸಾಧ್ಯವಾಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡತಕ್ಕಂಥದ್ದು ಏನೆಂದರೆ ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಕೊಡುತ್ತಾರೆ, ನಿಮಗೆ ಎಷ್ಟು ಹಣ ಕೊರತೆ ಬೀಳುತ್ತದೆ, ಆ ಕೊರತೆಯ ಹಣವನ್ನು ಬೇರೆ ಬೇರೆ ಬಾಬುಗಳಿಂದ ಕೂಡಿಸುವುದಕ್ಕೆ ವಿಚಾರ ಮಾಡಬೇಕು, ಶಾಸಕರು ಶಾಸನ ಸಭೆಯು ಮುಗಿದಮೇಲೆ ತಮ್ಮ ತಮ್ಮ ಕ್ಷೇತ್ರಕ್ಕೆ ಹೋದಮೇಲೆ ಕೂಡಲೇ ಸೂಕ್ತಕ್ರಮ ತೆಗೆದುಕೊಳ್ಳುವುದರಲ್ಲಿ ಆಸಕ್ತಿ ತೋರದಿದ್ದರೆ ಜನರ ಶಾಪಕ್ಕೆ ಗುರಿಯಾಗುತ್ತಾರೆ. ಮಾನ್ಯ ಸಚಿವರೂ ಒಳ್ಳೆಯ ತೀರ್ಮಾನವನ್ನು ತೆಗೆದುಕೊಳ್ಳದಿದ್ದ ಪಕ್ಷದಲ್ಲಿ ಅವರೂ ಕೂಡ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ದನಕರುಗಳಿಗೆ ಮೇವು ಇಲ್ಲ, ಕುಡಿಯಲಿಕ್ಕೆ ನೀರಿಲ್ಲ, ಜನರಿಗೆ ಉದ್ಯೋಗವಿಲ್ಲವೆಂದು ಕಾಡತಕ್ಕಂಥ ಈ ಪ್ರಶ್ನೆಗಳನ್ನು ಬಿಡಿಸಲು ಶಾಸಕರು ಒಬ್ಬರಿಂದಲೇ ಸಾಧ್ಯವಾಗುವುದಿಲ್ಲ. ಹಾಗೆಯೇ ಒಬ್ಬ ಸಚಿವರು ಕೂಡ ಹೋಗಿ ಅಲ್ಲಿ ಏನು ಮಾಡುವುದಕ್ಕೆ ಆಗುವುದಿಲ್ಲ. ಆದರೆ ಅಲ್ಲಿರತಕ್ಕಂಥ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಸ್ಥಳೀಯ ಶಾಸಕರು ಮುಖಂಡರು ಮತ್ತು ಜನರನ್ನು ತಾವು ನಂಬಿಕೆಗೆ ತೆಗೆದುಕೊಂಡು ಒದಗಿಬರತಕ್ಕಂಥ ಹಣವನ್ನು ಖರ್ಚುಮಾಡತಕ್ಕಂಥ ಸಂದರ್ಭದಲ್ಲಿ ನ್ಯಾಯವಾದ ರೀತಿಯಲ್ಲಿ ನಡೆದುಕೊಳ್ಳುವಂಥ ವಿಚಾರಧಾರೆಯ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಜಾರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಇಲಾಖೆ ತಪ್ಪುಮಾಡುವ ರೀತಿಯಲ್ಲಿ ಯಾವ ಕೆಲಸವನ್ನೇ ಪ್ರಾರಂಭ ಮಾಡಿದರೂ ಕೂಡ ಅದರಿಂದ ಜನತೆಗೂ ಪ್ರಯೋಜನವಾಗುವುದಿಲ್ಲ, ಇಲಾಖೆಗೂ ಒಳ್ಳೆಯ ಹೆಸರು ಬರುವುದಿಲ್ಲ.

ಇನ್ನು ಮತ್ತೊಂದು ವಿಚಾರವೇನೆಂದರೆ ಕೇಂದ್ರ ಸರ್ಕಾರದವರು ಕೊಡತಕ್ಕಂಥ ಹಣದ ಜೊತೆಗೆ ನಿಮ್ಮ ಸಂಪನ್ಮೂಲಗಳನ್ನೂ ರಾಜ್ಯ ಸರ್ಕಾರದವರು ಹುಡುಕಿಕೊಳ್ಳಬೇಕು. ಅದರಲ್ಲಿ ವಿಫಲವಾದರೆ ಜನತೆಯ ಆಕ್ರೋಷಕ್ಕೆ ತುತ್ತಾಗಬೇಕಾಗುತ್ತದೆ. ಅನಕ್ಕೆ ಅವಕಾಶವನ್ನು ಕೊಡದೆ ಈ ವಿಚಾರ ಧಾರೆಯ ಬಗ್ಗೆ ಸ್ಪಷ್ಟವಾಗಿ ಒತ್ತಾಯ ಮಾಡಿ ಹೇಳಬಯಸುತ್ತೇನೆ. ಇದೇ ಸಂದರ್ಭದಲ್ಲಿ ಬರಗಾಲ ಸಮಿತಿ ಎಂದು ಮಾನ್ಯ ಮಲ್ಲಿಕಾರ್ಜುನ ಖಾರ್ಗೆಯವರ ನೇತೃತ್ವದಲ್ಲಿ ಮಾಡಿದಂಥ ಸಮಿತಿಯು ಬಹಳ ಚೆನ್ನಾಗಿ ಕೆಲಸ ಮಾಡಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಅವರು ಬಹಳ ಕಡಿಮೆ ಕಾಲದಲ್ಲಿ ಬಹಳ ಉತ್ಕೃಷ್ಟವಾದ ವರದಿಯನ್ನು ಕೊಟ್ಟಿದ್ದಾರೆ ನಿಜವಾಗಿಯೂ ಬಹಳ ಕಷ್ಟಪಟ್ಟು ಎಲ್ಲ ಭಾಗಗಳನ್ನು ಸಂಚಾರ ಮಾಡಿ ಪರಿಸ್ಥಿತಿಯನ್ನು ಅರಿತು ಒಂದು ಒಳ್ಳೆಯ ವರದಿಯನ್ನು ಕೊಟ್ಟಿರುತ್ತಾರೆ. ಇದರಲ್ಲಿ ಗುಲ್ಬರ್ಗಾಕ್ಕೆ ಸೇರಿದಂಥ ಧರ್ಮಸಿಂಗ್ ರವರೂ ಕೂಡ ಇದ್ದಾರೆ. ಹೈದರಾಬಾದ್ ಕರ್ನಾಟಕಕ್ಕೆ ಸೇರಿದಂಥ ಜನರು ಬಹಳ ನಂಬಿಕೆ ಇರತಕ್ಕಂಥ ಜನರು, ಅಂದರೆ ಬೇರೆ ಜನರು ನಂಬಿಕೆಗೆ ಒಳಗಾದವರಲ್ಲವೆಂದು ಹೇಳತಕ್ಕಂಥದ್ದಲ್ಲ. ಇದರಲ್ಲಿ ಮಾನ್ಯ ಭೂಪತಿಯವರೂ ಸೇರಿಕೊಳ್ಳುತ್ತಾರೆ, ಅವರು ಬಳ್ಳಾರಿಯಿಂದ ಬಂದವರು, ಬಹಳ ಒಳ್ಳೆಯ ವರದಿಯನ್ನು ಕೊಟ್ಟಿದ್ದಾರೆ. ಮಾನ್ಯ ಎಂ. ಎಸ್. ಪಾಟೀಲ್ ಇವರನ್ನೆಲ್ಲ ಒಳಗೊಂಡಂಥ ಸಮಿತಿಯು ಬಹಳ ಕಡಿಮೆ ಕಾಲದಲ್ಲಿ ಕಷ್ಟಪಟ್ಟು ಕೆಲಸ ಮಾಡಿ ಬರಗಾಲದ ವಿಚಾರದಲ್ಲಿ ಪರಿಸ್ಥಿತಿಯನ್ನು ಅರಿತುಕೊಂಡು ತಮ್ಮ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸಿ ಕೊಟ್ಟಿರತಕ್ಕಂಥ ವರದಿಗೆ ನಮ್ಮ ವಿರೋಧ ಪಕ್ಷದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಬರಗಾಲ ಪೀಡಿತ ಪ್ರದೇಶಗಳಲ್ಲಿ ಜನತೆ ಕಷ್ಟ ಪರಿಸ್ಥಿತಿಯಲ್ಲಿರುವುದರಿಂದ ಸಮಿತಿಯವರು ವಸೂಲಾತಿಯ ವಿಚಾರದಲ್ಲೂ ಕೂಡ ಹೇಳಿರುತ್ತಾರೆ. ಮಾನ್ಯ ಸಚಿವರಾದ ಜಾಲಪ್ಪನವರು ಅವರು ತಮ್ಮ ಕೆಲಸವನ್ನು ಮಾಡಬೇಕಾಗುತ್ತದೆ. ಅವರು ಶಕ್ತಿವಂತರು, ಅದನ್ನು ಮುಂದುವರಿಸಿಕೊಂಡು ಹೋಗುತ್ತಾರೆಂದು ನಾನು ಭಾವಿಸುತ್ತೇನೆ. ಆದರೆ ಇಂಥ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಅವರು ಸ್ವಲ್ಪ ರಬ್ಬರ್ ರೀತಿಯಲ್ಲಿ ಇರಬೇಕೆಂದು ಹೇಳುತ್ತೇನೆ. ತಮ್ಮ ಇಲಾಖೆಯಲ್ಲಿ ಆ ರೀತಿ ಇಲ್ಲದೇಹೋದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ. ನಾನೇನೋ ರಬ್ಬರ್ ರೀತಿಯಲ್ಲಿಯೇ ಇದ್ದೇನೆ. ಏತಕ್ಕೆಂದರೆ ಎಲ್ಲಿ ಜಾಸ್ತಿ ಎಳತಕ್ಕೆ ಸಿಕ್ಕಿ ಕಿತ್ತು ಹೋಗುತ್ತೇನೋ ಎನ್ನುವ ದಿಗಿಲು ಬಿದ್ದು ಸುಮ್ಮನೆ ಇದ್ದೇನೆ.

ಶ್ರೀ ಎಸ್. ಬಂಗಾರಪ್ಪ.—೧೪೧ ತಾಲ್ಲೂಕುಗಳಲ್ಲಿ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳನ್ನು ಹೊಂದಿರತಕ್ಕಂಥ ಕಡೆಗಳಿಗೆ ತಾವು ಹೆಚ್ಚಿನ ರೀತಿಯಲ್ಲಿ ರೈತರಿಗೆ ರಿಯಾಯಿತಿಯನ್ನು ತೋರಿಸಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಈಗಾಗಲೇ ಎಲ್ಲೆಲ್ಲಿ ಬರಗಾಲಕ್ಕೆ ಒಳಗಾಗಿರತಕ್ಕಂಥ ಪ್ರದೇಶಗಳಿರುತ್ತದೋ ಅಲ್ಲಿ ಸಣ್ಣ ರೈತರುಗಳಿಂದ ಯಾವುದೇ ರೀತಿಯಾದ ವಸೂಲಾತಿ ಕ್ರಮ ತೆಗೆದುಕೊಳ್ಳಬಾರದೆಂದು ಇನ್‌ಸ್ಟ್ರಕ್ಷನ್ ಕೊಟ್ಟಿರುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಇಷ್ಟು ಮಾತುಗಳನ್ನು ಹೇಳಿ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಎಸ್. ಬಂಗಾರಪ್ಪನವರು ಬರಗಾಲಕ್ಕೆ ಒಳಗಾದವರ ಬಗ್ಗೆ ತಮ್ಮ ಕಾಳಜಿ ಏನು ಇದೆ ಅದನ್ನು ಬಹಳ ಚೆನ್ನಾಗಿ ಮಾತನಾಡುವುದರ ಮೂಲಕ ವ್ಯಕ್ತಪಡಿಸಿದ್ದಾರೆ. ಅವರು ಮಾತನಾಡುವಾಗ ಒಂದು ಮಾತನ್ನು ಹೇಳಿದರು. ನಮ್ಮ ಸಂಪನ್ಮೂಲಗಳು ಏನು ಇದೆ ಅದನ್ನು ಉಪಯೋಗಿಸಿಕೊಂಡು ಸಾಕಷ್ಟು ವೇಗದಿಂದ ಕೆಲಸ ಮಾಡಬೇಕೆಂದು ಹೇಳಿದರು. ನಮ್ಮ ಸಂಪನ್ಮೂಲಗಳಿಂದ ಎಷ್ಟರಮಟ್ಟಿಗೆ ಕೆಲಸ ಮಾಡಬಹುದು ಎನ್ನುವುದೆಲ್ಲ ಮಾನ್ಯ ನಾಯಕರಾದ ಬಂಗಾರಪ್ಪನವರಿಗೇ ಗೊತ್ತಿದೆ. ಅವರು ಭಾಷಣ ಮಾಡುವಾಗ ಕೇಂದ್ರದಿಂದ ಎಷ್ಟರಮಟ್ಟಿಗೆ ಅವರಿಂದ ಹಣ ಒದಗಿಸಿಕೊಡಲಿಕ್ಕೆ ಸಾಧ್ಯವಾಗುತ್ತದೆ ಎಷ್ಟರಮಟ್ಟಿಗೆ ಪ್ರಯತ್ನ ಮಾಡುತ್ತಾರೆ ಎನ್ನುವ ಒಂದು ಮಾತನ್ನು ಕೂಡ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಈಗಲಾದರೂ ಕೂಡ ಬರಗಾಲ ಬಂದಾಗ ಕೇಂದ್ರದಿಂದ ಎಷ್ಟು ಹಣ ಬಂದಿದೆ ಎನ್ನುವುದು ಮಾನ್ಯ ನಾಯಕರಿಗೆ ಗೊತ್ತಿದೆ. ಈ ದೃಷ್ಟಿಯಿಂದ ಅವರನ್ನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಕಳೆದಬಾರಿ ಆದಹಾಗೆ ಆಗಬಾರದು. ಕೇಂದ್ರದಿಂದ ನಮಗೆ ಎಷ್ಟು ಸಹಕಾರ ಮತ್ತು ಸಹಾಯದ ಹಣ ಬರಲಿಕ್ಕೆ ಸಾಧ್ಯವಿರುತ್ತದೋ ಅಷ್ಟು ದೊರಕಿಸಿಕೊಡಲು ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

೧–೦೦ ಪಿ. ಎಂ.

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯಗಳನ್ನು ತಾವು ಪೂರ್ತಿಯಾಗಿ ಕೇಳಿದಿರೋ, ಇಲ್ಲವೋ ಗೊತ್ತಿಲ್ಲ. ಪೂರ್ತಿಯಾಗಿ ತಾವು ಕೇಳದಿದ್ದರೆ ಈ ಮಾತನ್ನು ಹೇಳುತ್ತಲೇ ಇರಲಿಲ್ಲ. ನಾನು ಹೇಳಿದ್ದೇನೆ, ನಾಳೆ ಭಾನುವಾರ ನಾನು ದೆಹಲಿಗೆ ಕೂಡ ಹೋಗುತ್ತಿದ್ದೇನೆ ಎಂದು ಹೇಳಿದ್ದೇನೆ. ಇದನ್ನು ತಾವು ಕೇಳಿಸಿಕೊಂಡಿಲ್ಲ. ನೀವೂ ಕೂಡ ಕೇಂದ್ರಸರ್ಕಾರದವರಲ್ಲಿ ಹಣ ಕೇಳಬೇಕು. ಒಬ್ಬ ವ್ಯಕ್ತಿಯ ಹತ್ತಿರ ಯಾವರೀತಿ ಮಾತನಾಡಬೇಕು ಯಾವರೀತಿ ಹಣವನ್ನು ತೆಗೆದುಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಅದನ್ನು ಬಿಟ್ಟು ಒಂದೇಸಾರಿ ಕಾಲು ಕೆರೆದುಕೊಂಡು ಜಗಳಕ್ಕೆ ನಿಮ್ಮ ಮುಖ್ಯ ಮಂತ್ರಿಗಳು ಹೋದರೆ ಹೇಗೆ? ಹಿಂದೆ ಆರೀತಿ ಮಾಡಿದ್ದಾರೆ. ಆದರೆ ಈಗ ಅದು ಸ್ವಲ್ಪ ಕಡಿಮೆಯಾಗಿದೆ. ಅವರು ಕೊಡುವುದಿಲ್ಲವೆಂದು ಏನೂ ಹೇಳುವುದಿಲ್ಲ. ನಮ್ಮ ರಾಜ್ಯದ ಇಂದಿನ ಪರಿಸ್ಥಿತಿಯನ್ನು ನೋಡಿಕೊಂಡು ಹಣವನ್ನು ಕೊಡಬೇಕೆಂದು ನಾವು ಕೇಂದ್ರಸರ್ಕಾರದವರಿಗೆ ಹೇಳುತ್ತೇವೆ. ಆದರೆ ಹಣವನ್ನು ಪಡೆಯತಕ್ಕ ಬುದ್ಧಿ ನಿಮಗೆ ಚೆನ್ನಾಗಿದ್ದರೆ ಒಳ್ಳೆಯದು ಎನಿಸುತ್ತದೆ. ನೀವು ಕಾಲು ಕೆರೆದುಕೊಂಡು ಜಗಳಕ್ಕೆ ಹೋಗುವುದನ್ನು ಬಿಟ್ಟರೆ ಇನ್ನೂ ನಾಲ್ಕಾರು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಅವರಿಂದ ಪಡೆಯಬಹುದು. ಇದು ನಿಮಗೆ ಇರಬೇಕು. ಈ ಮಾತನ್ನು ನೀವು ನಿಮ್ಮ ಮುಖ್ಯ ಮಂತ್ರಿಯವರಿಗೆ ಕಿವಿಯಲ್ಲಿ ಹೇಳಿದರೆ ನಿಮ್ಮ ರಾಜಕಾರಣಕ್ಕೂ ಒಳ್ಳೆಯದು ಮತ್ತು ರಾಜ್ಯದ ಜನರಿಗೂ ಒಳ್ಳೆಯದೆಂದು ಹೇಳಬಯಸುತ್ತೇನೆ.

ಶ್ರೀ ಜಿ. ಎಸ್. ಅಜ್ಜಿಬಾಳ ಹೆಗಡೆ (ಅಂಕೋಲ).—ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮೊಟ್ಟಮೊದಲು ಮಾನ್ಯ ಬಾರ್ಗೆ ಸಮಿತಿಯವರಿಗೆ ಮತ್ತು ಆ ಸಮಿತಿಯ ಸದಸ್ಯರಿಗೆ ಅಭಿನಂದಿಸುತ್ತೇನೆ. ಅವರು ಅಲ್ಪ ಸಮಯದಲ್ಲಿಯೇ ಹಲವಾರು ಒಳ್ಳೆಯ ಸೂಚನೆಗಳನ್ನು ತಮ್ಮ ಮುಂದಿಟ್ಟಿದ್ದಾರೆ. ಅವರಿಗೆ ಯಾವುದೇ ಕೆಲಸವನ್ನು ಕೊಟ್ಟರೂ ಅವರು ಚೆನ್ನಾಗಿ ಮಾಡುತ್ತಾರೆಂದು ಅನಿಸುತ್ತದೆ ಏಕೆಂದರೆ ೧೭ ಜಿಲ್ಲೆಗಳಲ್ಲಿ ತಿರುಗಾಡಿ ಇಷ್ಟು ಅಲ್ಪ ಸಮಯದಲ್ಲಿ ಇಷ್ಟೊಂದು ಕನ್‌ಸ್ಟ್ರಕ್ಟೀವ್ ಸಜೆಷನ್ಸ್‌ನ್ನು ಕೊಟ್ಟಿದ್ದಾರೆ. ಹಿಂದೆ ನಮ್ಮ ರಾಜ್ಯದಲ್ಲಿ ಕೇವಲ ೧೬ ಜಿಲ್ಲೆಗಳಲ್ಲಿ ಮಾತ್ರ ಬರಗಾಲ ಇದೆಯೆಂದು ಕೇಳಿಬರುತ್ತಿತ್ತು. ಆದರೆ ಈ ಸಾರಿ ೧೭ ಜಿಲ್ಲೆಗಳಾಗಿವೆ. ಈ ಸಾರಿ ಉತ್ತರ ಕನ್ನಡ ಜಿಲ್ಲೆ ಹೊಸದಾಗಿ ಸೇರಿಕೊಂಡಿದೆ. ಇದು ಒಂದು ದುರ್ದೈವ. ಉತ್ತರ ಕನ್ನಡ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ ಕೊಡಗು ಸಾಮಾನ್ಯವಾಗಿ ಬಲಿಯಾಗುವುದು ನೆರೆಹಾವಳಿಗೆ. ಕಳೆದ ೧೯೮೧ರಲ್ಲಿ ಮಾನ್ಯ ಬಂಗಾರಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ನೆರೆ ಪೀಡಿತ ಆದಾಗ, ಬಹಳ ಚುರುಕಾಗಿ ಕೆಲಸವನ್ನು ಮಾಡಿದರು. ನಮ್ಮ ಜಿಲ್ಲೆಯಲ್ಲಿ ಮುಂಡಗೋಡು ತಾಲ್ಲೂಕು ಮತ್ತು ಸಿರ್ಸಿಯ ಪೂರ್ವಭಾಗದಲ್ಲಿ

೧೯ರ ಜೂನ್‌ವರೆಗೆ ಮಳೆ ಬಾರದೆ ಯಾವುದೇ ಬಿತ್ತನೆ ಕೆಲಸ ಆಗಲಿಲ್ಲ. ಸಾಧಾರಣವಾಗಿ ಮೇ ತಿಂಗಳಲ್ಲಿ ೫ ಅಂಗುಲದಿಂದ ೭ ಅಂಗುಲದವರೆಗೂ ಮಳೆ ಆಗುತ್ತಿತ್ತು. ಆದರೆ ಈ ಸಾರಿ ೫ ಎಂ.ಎಂ. ಕೂಡ ಮಳೆ ಆಗಿಲ್ಲ. ಹೀಗಾಗಿ ಬಿತ್ತನೆ ಮಾಡಿದ ಬೀಜವೂ ಕೂಡ ಒಣಗಿಹೋಯಿತು ೧೯ರ ನಂತರ ಮಳೆ ಬಂತು. ಆಗ ಭತ್ತ ಯಾವುದು, ಕಳೆ ಯಾವುದು ಎಂಬುದು ಗೊತ್ತಾಗದೆ ೩೦ ಪರ್ಸೆಂಟ್ ಫಸಲು ಇಲ್ಲಿ ಬರುತ್ತದೆಂದು ಖಾರ್ಗೆ ಸಮಿತಿಯವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ ಅದು ನಿಜವಾಗಿಯೂ ಸತ್ಯ. ಆದ್ದರಿಂದ ಜಿಲ್ಲಾಧಿಕಾರಿಗಳು ಅದನ್ನು ಅಂದಾಜು ಮಾಡಿ ೧೪ ೯೩ ಲಕ್ಷ ಜನ ರೈತರಿಗೆ ಸಹಾಯಧನವನ್ನು ಕೊಡಬೇಕೆಂದು ಶಿಫಾರಸು ಮಾಡಿ ಕಳುಹಿಸಿದ್ದಾರೆ. ಮಾನ್ಯ ರೆವಿನ್ಯೂ ಮಂತ್ರಿಯವರು ಈಗಾಗಲೇ ಬಹಳ ಉದಾರತೆಯಿಂದ ಬರಗಾಲ ಕಾಮಗಾರಿಗೋಸ್ಕರ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆ ಹಣ ಬಡವರಿಗೆ ಸಿಕ್ಕುವಂತಾಗಬೇಕು. ಆದ್ದರಿಂದ ಇನ್ನೂ ಬರಬೇಕಾದ ಹಣವನ್ನು ಆದಷ್ಟು ಬೇಗ ಮಂಜೂರು ಮಾಡಿ ಕೊಡಬೇಕೆಂದು ಮಾನ್ಯ ಕಂದಾಯ ಮಂತ್ರಿಯವರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ ಮಾನ್ಯ ಬಂಗಾರಪ್ಪನವರು ಮಾನ್ಯ ಸಹಕಾರ ಮಂತ್ರಿಗಳಿಗೆ ಒಂದು ಸೂಚನೆಯನ್ನು ನೀಡಿ ಸಾಲ ವಸೂಲಾತಿಯನ್ನು ಬಿಗಿ ಮಾಡಬೇಡಿ ಎಂದು ಹೇಳಿದ್ದಾರೆ. ಈಗ ಸಾಲವನ್ನು ವಸೂಲು ಮಾಡದಿದ್ದರೂ ಕೂಡ ಈ ರೈತರಿಗೆ ಬೇರೆ ರೀತಿಯಿಂದ ಪರಿಹಾರ ಸಿಕ್ಕುವಂತೆ ಮಾಡಬೇಕಾಗುತ್ತದೆ. ಕಾರಣ ಕಳೆದ ೮ ವರ್ಷಗಳಿಂದಲೂ ಸತತವಾಗಿ ಬರಗಾಲ ಬರುತ್ತಲೇ ಇರುವುದರಿಂದ ಕಂತನ್ನು ಕೊಡಲಿಕ್ಕೂ ಕೂಡ ರೈತರು ಬಹಳ ದರಿದ್ರಾವಸ್ಥೆಯಲ್ಲಿದ್ದಾರೆ. ಆದರೆ ಮಾನ್ಯ ಪ್ರಧಾನಮಂತ್ರಿಯವರು ಈ ವರ್ಷದಿಂದ ಕಂಪಲ್ಸರಿ ಇನ್‌ಷೂರೆನ್ಸ್‌ನ್ನು ಜಾರಿಗೆ ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಬೇಕಾಗಿದೆ. ಇವತ್ತು ಕರ್ನಾಟಕದಲ್ಲಿ ಏನಾಗಿದೆ ಎಂದು ನೋಡಿದರೆ I must congratultte the Hon'ble Chief Minister ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಅಭಿನಂದಿಸ ಬೇಕಾಗಿದೆ. ರಾಜ್ಯಾದ್ಯಂತ ಇದನ್ನು ಅಮಲಿನಲ್ಲಿ ತಂದಿದ್ದಾರೆ. ಆದರೆ ವಿಮೆ ವಿಷಯವನ್ನು ಕೆಲವು ಷರತ್ತುಗಳನ್ನು ಹಾಕಿದ್ದಾರೆ. ಆದ್ದರಿಂದ ನಮಗೆ ಏನೂ ಸಿಕ್ಕುವುದಿಲ್ಲ. ಉದಾಹರಣೆಗೆ ಹೇಳು ವುದಾದರೆ ಬರಗಾಲ ಪೀಡಿತ ಪ್ರದೇಶದಲ್ಲಿ ಕಂಪಲ್ಸರಿ ಇನ್‌ಷೂರೆನ್ಸ್‌ನ್ನು ಮಾಡಿದರೂ ಕೂಡ ನಮ್ಮ ರೈತರಿಗೆ ಅದರಿಂದ ಹಣ ಸಿಕ್ಕುವುದಿಲ್ಲ ಏಕೆಂದರೆ ತಾಲ್ಲೂಕು ಆವರೇಜ್ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡಿದ್ದಾರೆ, ಮತ್ತು ಹಿಂದಿನ ೫ ವರ್ಷದ ಆವರೇಜ್ ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ. 'ತ್ರೆಷೋಲ್ಡ್ ಈಲ್ಡ್' ಕನಿಷ್ಠ ಬೆಳೆ ಬಹಳ ಕಡಿಮೆ ಹಿಡಿದಿದ್ದಾರೆ. ಆ ದೃಷ್ಟಿಯಿಂದ ಉದಾಹರಣೆಗಾಗಿ ನಾನು ಹೇಳುವುದಾದರೆ ನಮ್ಮ ಜಿಲ್ಲೆಯಲ್ಲಿ ಹೊನ್ನಾವರ ತಾಲ್ಲೂಕಿನಲ್ಲಿ ೧೨ ಕ್ವಿಂಟಾಲ್ ಆವರೇಜ್ ಬರುತ್ತದೆ, ೪ ಕ್ವಿಂಟಾಲ್ ತ್ರೆಷೋಲ್ಡ್ ಬೆಳೆ ಹಿಡಿದುಕೊಂಡಿದ್ದಾರೆ. ಆದ್ದರಿಂದ ನಾನು ಮಾನ್ಯ ಬಂಗಾರಪ್ಪನವರಲ್ಲಿ ಒಂದು ವಿನಂತಿ ಮಾಡಿಕೊಳ್ಳುವುದೇನೆಂದರೆ, ಯಾವ ರೀತಿ ಸಾಲದಲ್ಲಿ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಿದ್ದೀರಿ ಅದೇರೀತಿ ಇನ್‌ಷ್ಯೂರೆನ್ಸ್ ವಿಷಯದಲ್ಲಿ ವಿನಾಯಿತಿ ಕೊಡಲಿಕ್ಕೆ ಅವರು ಕೇಂದ್ರ ಸರಕಾರವನ್ನು ಒತ್ತಾಯ ಮಾಡಬೇಕು. ಇದೇ ೨೩ನೇ ತಾರೀಖು ದೆಹಲಿಯಲ್ಲಿ ಒಂದು ಸಭೆ ನಡೆಯುತ್ತದೆ ಅಲ್ಲಿ ಇದನ್ನು ಪ್ರಸ್ತಾಪ ಮಾಡುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ ಈ ಎರಡು ಸೂಚನೆಗಳನ್ನು ನಾನು ಮಾನ್ಯ ಕಂದಾಯ ಇಲಾಖೆಯವರಿಗೆ ಮಾಡುವುದೇನೆಂದರೆ ಕ್ರಾಪ್ ಎಕ್ಸ್‌ಪೆರಿಮೆಂಟ್ ಅನ್ನು ನಮ್ಮ ರಾಜ್ಯದಲ್ಲಿ ಬಹಳಷ್ಟು ಮಾಡುವುದಿಲ್ಲ ವೆಂದು ಕೇಳಿಬರುತ್ತಿದೆ. ಕನಿಷ್ಠ ಒಂದೊಂದು ತಾಲ್ಲೂಕಿಗೆ ೧೫ ಎಕ್ಸ್‌ಪೆರಿಮೆಂಟ್‌ನ್ನಾದರೂ ಮಾಡಬೇಕು. ಆಗ ಹಳ್ಳಿಗಳ ಆವರೇಜ್‌ನ್ನು ಹಿಡಿದುಕೊಳ್ಳುವುದಕ್ಕೆ ಬರುತ್ತದೆ. ಇವತ್ತು ಒಂದು ಹಳ್ಳಿಯ ಬೆಳೆ ಪೂರ್ತಿ ನಾಶವಾದರೂ ಕೂಡ ಆ ಹಳ್ಳಿಯ ಜನರಿಗೆ ಏನೇನೂ ಪರಿಹಾರವನ್ನು ಕೊಡು ವುದಕ್ಕೆ ಯಾವ ಅಂಶಗಳು ಸಿಕ್ಕುವುದಿಲ್ಲ. ತಾಲ್ಲೂಕು ಆವರೇಜ್ ಕಡಿಮೆ ಆದರೆ ಮಾತ್ರ ಸ್ವಲ್ಪ ಪರಿಹಾರ ಸಿಕ್ಕಬಹುದು. ಆ ದೃಷ್ಟಿಯಿಂದ ಕ್ರಾಪ್ ಎಕ್ಸ್‌ಪೆರಿಮೆಂಟ್‌ನ್ನು ಹೆಚ್ಚಿಗೆ ಮಾಡಲಿಕ್ಕೆ ಸಂಖ್ಯಾಶಾಸ್ತ್ರ ವಿಭಾಗ ಬಲಪಡಿಸಬೇಕು. Department of Statistics must be augmented and streng hened. ಇಲ್ಲದಿದ್ದರೆ ನಾವು ಇನ್‌ಷೂರೆನ್ಸ್ ಮಾಡಿದರೂ ಅದರ ಲಾಭ ರೈತರಿಗೆ ಸಿಕ್ಕುವುದಿಲ್ಲ.

ಇನ್ನು ಮೂರನೆಯದಾಗಿ ಹೇಳುವುದಾದರೆ, ಫಾಡರ್ ಮೇವಿನ ವಿಚಾರದಲ್ಲಿ ಬಹಳ ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಕೆ. ಹೆಚ್. ಪಾಟೀಲ್‌ರವರು ವ್ಯವಸಾಯ ಮತ್ತು ಅರಣ್ಯ ಇಲಾಖೆಯ ಸಚಿವರಾಗಿದ್ದಾಗ ಸಿದ್ದಾಪುರ ತಾಲ್ಲೂಕಿನಲ್ಲಿ ಒಂದು ಪಿಲಟೈಸೇಷನ್‌ನ್ನು ಉದ್ಯಮದಲ್ಲಿ

ಮಾಡಿದ್ದರು. ಆದರೆ ಇವತ್ತು ಅದರ ಗತಿ ಏನಾಗಿದೆ ಎಂದರೆ ಅದು ಮುಚ್ಚಿಹೋಗಿದೆ. ಅದರ ಪ್ರಯೋಜನ ಜನರಿಗೆ ಸಿಕ್ಕುತ್ತಿಲ್ಲ. ಈ ದೃಷ್ಟಿಯಿಂದ ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯವರು ಎಲ್ಲೆಲ್ಲಿ ಮೇವಿನ ಅವಶ್ಯಕತೆ ಇದೆ ಅಲ್ಲಲ್ಲಿ 'ಪೆಲಟೈಸೇಷನ್' ಮಾಡಿ ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಪುನರಾರಂಭಿಸಬೇಕು. ಇನ್ನೂ ನಾಲ್ಕೈದು ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳ ಖಾಯಂ ಕೆಲಸಗಳನ್ನು ಮಾಡಿಸಬೇಕೆಂದು ಸೂಚಿಸಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಅದೂ ಕೂಡ ಸಾಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ತಪ್ಪಾಗಿ ಅರ್ಥಮಾಡಿಕೊಂಡಿರಿ. ೨೦೦ ಕೋಟಿ ಕೇವಲ ಎಂಪ್ಲಾಯ್‌ಮೆಂಟ್‌ಗೋಸ್ಕರ. ಅಗ್ರಿಕಲ್ಚರಲ್ ಲೇಬರ್ಸ್ ೩೬ ಲಕ್ಷ ಜನ ಯಾರಿದ್ದಾರೆ ಅವರಲ್ಲಿ ಕನಿಷ್ಟ ೧೩ ಲಕ್ಷ ಜನರಿಗಾದರೂ ಕೆಲಸವನ್ನು ಕೊಡಬೇಕಾಗಿದೆ. ಇದಕ್ಕೆ ೨೦೦ ಕೋಟಿ ರೂಪಾಯಿ ಬೇಕಾಗುತ್ತದೆ, ಖಾಯಂ ಕೆಲಸವನ್ನು ಮಾಡಿಸುವುದಕ್ಕೆ ನಾವು ಏನು ಸೂಚನೆಯನ್ನು ಕೊಟ್ಟಿದ್ದೇವೆ, ಅದಕ್ಕೆ ಕೋಟ್ಯಾಂತರ ರೂಪಾಯಿಬೇಕಾಗುತ್ತದೆ. ಇದನ್ನು ತಾವು ತಪ್ಪಾಗಿ ತಿಳಿದುಕೊಳ್ಳಬೇಡಿ.

ಶ್ರೀ ಜಿ. ಎಸ್. ಅಜ್ಜಿಬಾಳ ಹೆಗಡೆ.—I am glad that the Hon'ble ministar has given clarification ನಮ್ಮ ರಾಜ್ಯದಲ್ಲಿ ೨೦ ಪರ್ಸೆಂಟ್ ಇರಿಗೇಷನ್ ಇದೆ. ಪಂಜಾಬ್‌ನಲ್ಲಿ ೬೦ ಪರ್ಸೆಂಟ್ ಇರಿಗೇಷನ್ ಇದೆ. ಇದನ್ನು ತಾವು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದ ಇರಿಗೇಷನ್‌ನ್ನು ಇನ್ನೂ ಹೆಚ್ಚಿಗೆ ಮಾಡಬೇಕು. ಇದಕ್ಕೆ ಕೇಂದ್ರ ಸರ್ಕಾರದವರು ಸಹಾಯಧನವನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ವೇಳೆಯನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಮೊಟ್ಟಮೊದಲನೆಯದಾಗಿ ಖರ್ಗೆ ಸಮಿತಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇನೆ, ಮತ್ತು ಈ ಸಮಿತಿಯನ್ನು ರಚನೆ ಮಾಡುವುದಕ್ಕೆ ಕಾರಣಕರ್ತರಾದ ಮಾನ್ಯ ಕಂದಾಯ ಸಚಿವರನ್ನೂ ಅಭಿನಂದಿಸುತ್ತೇನೆ. ಖರ್ಗೆ ಸಮಿತಿಯವರು ಪೂರ್ತಿಯಾಗಿ ನಿಜವಾದ ಅಂಶಗಳನ್ನು ಹೊರಗೆಡಹುವುದಕ್ಕೆ ಪ್ರಯತ್ನ ಮಾಡಿದರೂ ಸಹ ಅವಧಿಯ ಅಭಾವದಿಂದಾಗಿ ಮತ್ತು ಅವರಿಗೆ ಸಿಕ್ಕಿರತಕ್ಕ ಸಹಕಾರದ ಅಭಾವದಿಂದಾಗಿ ಪೂರ್ತಿಯಾದ ವರದಿ ಬಂದಿಲ್ಲ ಎಂಬುದು ಇದರಲ್ಲಿ ಸ್ಪಷ್ಟವಾಗುತ್ತದೆ. ಆದರೂ ಅವರು ತಮಗೆ ಸಿಕ್ಕ ಅಲ್ಪ ಕಾಲದಲ್ಲೇ ಉತ್ತಮವಾದ ಸಂಗತಿಗಳನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ.

ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಮೊಟ್ಟಮೊದಲನೆಯದಾಗಿ ಧಾರವಾಡ ಜಿಲ್ಲೆಯ ಮಟ್ಟಿಗೆ ಮಾತ್ರ ವಿವರಗಳನ್ನು ಹೇಳಿ ಒಂದೆರಡು ಮಾತುಗಳನ್ನು ಜನರಲ್ ಆಗಿ ಹೇಳುತ್ತೇನೆ. ಧಾರವಾಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಒಟ್ಟು ೨೯,೪೫,೪೮೭ ಜನ ಇರತಕ್ಕ ಈ ಪ್ರದೇಶದಲ್ಲಿ ಸುಮಾರು ೨೦ ಲಕ್ಷ ಜನರು ಬರಗಾಲಕ್ಕೆ ಈಡಾಗಿದ್ದಾರೆ. ಈ ಪ್ರದೇಶದಲ್ಲಿ ಬರಗಾಲಕ್ಕೆ ಈಡಾಗಿರತಕ್ಕ ದನಗಳು ಬಹಳಷ್ಟು ಮೇವು ಇಲ್ಲದೆ ಕ್ಷೀಣವಾಗಿ ಕಟುಕರ ಮನೆಗೆ ಸೇರುವಂಥ ಪ್ರಸಂಗ ಬಂದಿದೆ. ನಾವು ಎಷ್ಟು ಹೇಳಿದರೂ ಕೂಡ ದನಗಳನ್ನೂ ಮತ್ತು ಜನಗಳನ್ನೂ ರಕ್ಷಣೆ ಮಾಡತಕ್ಕ ಕೆಲಸ ಅಷ್ಟಾಗಿ ಆಗಿಲ್ಲ. ನಾನು ಕೇವಲ ಸರ್ಕಾರವನ್ನು ಮಾತ್ರ ದೂಷಣೆ ಮಾಡಲಿಕ್ಕೆ ಇಚ್ಛೆಪಡುವುದಿಲ್ಲ. ಆದರೆ ಸರ್ಕಾರದವರು ಯುದ್ಧೋಪಾದಿಯಲ್ಲಿ ಕೆಲಸವನ್ನು ಮಾಡದಿದ್ದರೆ ನಿಜವಾಗಿಯೂ ಈ ಕಾರ್ಯ ತೃಪ್ತಿಕರವಾಗಿ ಆಗುವುದಿಲ್ಲ. ಮಳೆ ಬರುತ್ತದೆ, ಬರಗಾಲ ತಪ್ಪಿಸಲಿಕ್ಕೆ ಅನುಕೂಲವಾಗುತ್ತದೆಂದು ನೀವು ಆಶೆ ಮಾಡಿದ್ದೀರಿ. ಆದರೆ ಇನ್ನೂ ಕೂಡಾ ನಮ್ಮ ದುರ್ದೈವ ಮಳೆ ಬರಲಿಲ್ಲ. ಇವೊತ್ತು ಆ ಪಕ್ಷ, ಈ ಪಕ್ಷ ಎಂದು ನೋಡದೇನೆ ಬರಗಾಲದ ವಿಷಯದಲ್ಲಿ ಎಲ್ಲರೂ ಒಂದೇ ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕೆಂದು ಅಭಿಪ್ರಾಯವನ್ನು ಇಟ್ಟುಕೊಂಡು ಮಾಡಿ ನಮ್ಮ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯವರು ಸಹ ಒಂದು ಠರಾವನ್ನು ಮಾಡಿದರು. ಅವರು ಕೇಂದ್ರ ಸರಕಾರಕ್ಕೆ ಹೆಚ್ಚು ಹೆಚ್ಚು ಹಣವನ್ನು ರಾಜ್ಯಕ್ಕೆ ಕೊಡಬೇಕೆಂದು ಬರಗಾಲ ನಿವಾರಣೆಯನ್ನು ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮಗೆ ಬರುವುದಿಷ್ಟೇ. ಇವರು ಏನು ಕೆಲಸ ಮಾಡಲಿಕ್ಕೆ ಹತ್ತಿದ್ದಾರೆ, ಆ ಕೆಲಸ ತೃಪ್ತಿಕರವಾಗಿಲ್ಲ. ಯಾವ ಸಂಗತಿಯಲ್ಲೇ ಆಗಿರಲಿ, ಹಣದ ಕೊರತೆಯಿಂದ ಆಗಿರಬಹುದು, ಅಥವಾ ಹಣ ಇದ್ದರೂ ಅದರ ಸದ್‌ವಿನಿಯೋಗ ಅಧಿಕಾರಿಗಳ ಕಡೆಯಿಂದ ಆಗದಿರಬಹುದು. ಇದು ಒಮ್ಮೊಮ್ಮೆ ಹಾಗೆ ಆಗುತ್ತದೆ. ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ, ಆದರೆ ನೋಡಿದಾಗ ಕೆಲಸಗಳು ಇರುವುದಿಲ್ಲ. ಉದಾಹರಣೆಗೆ ಈ ಸಮಿತಿಯವರು ಬರೆದಿದ್ದಾರೆ, ಚೀಫ್ ಇಂಜಿನೀಯರ್‌ರವರು ನೀರಾವರಿ ಕೆಲಸಗಳನ್ನು ಬಂದ್ ಮಾಡಬೇಕೆಂದು ದಿನಾಂಕ ೩೧ನೇ ಜುಲೈನಲ್ಲಿ ಒಂದು ಟೆಲಿಗ್ರಾಮ್‌ನ್ನು ಕೊಟ್ಟಿದ್ದಾರೆ. ಹಾಗಾದರೆ ಈ ಚೀಫ್ ಇಂಜಿನೀಯರ್‌ರವರಿಗೆ ಕೆಲಸಗಳನ್ನು ಬಂದ್ ಮಾಡಬೇಕೆಂದು ಯಾರು ಹೇಳಿದರು ? ಕುಡಿಯುವ ನೀರಿನ ವಿಚಾರದಲ್ಲಿ ಇವರಿಗೆ ಹಣದ ಅಭಾವ ಹೇಗೆ ಆಗುತ್ತದೆ ? ನೂರು ಪರ್ಸೆಂಟ್‌ನಷ್ಟು ಹಣವನ್ನು ಕೇಂದ್ರ ಸರಕಾರದವರು ಕೊಡುವಾಗ. ಇದು ಮಂತ್ರಿಗಳ ತಪ್ಪೋ, ಅಥವಾ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರ ತಪ್ಪೋ ಎಂದು ತಿಳಿಯುವುದಿಲ್ಲ. ಆದರೆ ನಿಜವಾಗಿಯೂ ಸಂಬಂಧಪಟ್ಟ ಅಧಿಕಾರಿಗಳು ಚಾಕಚಕ್ಯತೆಯಿಂದ ಕೆಲಸ ಮಾಡದೇ ಸೋಮಾರಿಗಳಾಗಿ ತಮ್ಮ ಜವಾಬ್ದಾರಿಯನ್ನು ಹಾರಿಸಿಕೊಳ್ಳುವುದಕ್ಕಾಗಿ ಸರಕಾರವನ್ನು ಹಳಿ ತಪ್ಪಿಸುತ್ತಿದ್ದಾರೆ, ಆದುದರಿಂದ ಇದನ್ನು ತಾವು ಸರಿಮಾಡಬೇಕೆಂದೂ ಈ ಸಂದರ್ಭದಲ್ಲಿ ಕೇಳಿ ಕೊಳ್ಳುತ್ತಿದ್ದೇನೆ.

ಧಾರವಾಡ ಜಿಲ್ಲೆಯ ಮುಂಡಗೋಡ್, ರೋಣ, ಮುಂತಾದ ಕಡೆಗಳಲ್ಲಿ ಬರಗಾಲವು ತನ್ನ ಪ್ರಭಾವವನ್ನು ಬೀರಿದೆ. ಇನ್ನು ನನ್ನ ಕ್ಷೇತ್ರದಲ್ಲಿ ಅಷ್ಟೊಂದು ತೀರಾ ಭೀಕರ ಪರಿಸ್ಥಿತಿಯು ಇಲ್ಲ. ಉಳಿದ ಎಲ್ಲಾ ಕಡೆಗಳಲ್ಲಿಯೂ ಕೂಡಾ ಭೀಕರವಾದ ಬರಗಾಲ ಇದೆ ಎಂದು ಹೇಳುತ್ತಿದ್ದೇನೆ. ಎಂದೂ ಬರಗಾಲ ಕಾಣದ ಹುಲುಕೋಟಿಯಲ್ಲಿಯೂ ಇನ್ನೂ ಭಿತ್ತನೆಯಾಗಲಿಲ್ಲ. ಆದರೂ ಹುಲುಕೋಟಿ ಜನ ಬರಗಾಲ ಇದ್ದರೂ ಬದುಕುತ್ತಾರೆ ಎನ್ನುವ ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಉಳಿದ ಹಳ್ಳಿಗಳ ಜನರು ಬರಗಾಲದಿಂದ ಕಂಗಾಲಾಗಿದ್ದಾರೆ. ಕುಡಿಯುವುದಕ್ಕೆ ನೀರು ಇಲ್ಲ ಹೆಬ್ಬಳ್ಳಿ ಪ್ರದೇಶದಲ್ಲಾಗಲೀ, ಹರ್ಲಾಪುರ ಪ್ರದೇಶದಲ್ಲಾಗಲೀ, ಒಟ್ಟಿನಲ್ಲಿ ಗದಗ ತಾಲ್ಲೂಕು ಹಿಂದೆಂದೂ ಕಾಣದ ಭೀಕರ ಬರಗಾಲವನ್ನು ಕಂಡಿದೆ. ಸನ್ಮಾನ್ಯ ಸದಸ್ಯರಾದ ಖರ್ಗೆಯವರು ಬಹಳ ಉತ್ತಮವಾದ ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ಇವೊತ್ತು ನೀವು ಆಹಾರವನ್ನು ಕೊಡುತ್ತೀರಿ. ಆದರೆ ಅದನ್ನು ತೆಗೆದುಕೊಳ್ಳುದಕ್ಕೆ ಶಕ್ತಿ ಬೇಕು. ಆ ಶಕ್ತಿಯನ್ನು ನೀವು ಕೊಡಬೇಕು. ಅದನ್ನು ಕೊಡುವ ಸಲುವಾಗಿ ಜನರಿಗೆ ಕೆಲಸಬೇಕು. ಅಂತಹ ಕೆಲಸಗಳನ್ನು ಹೇಗೆ ದೊರಕಿಸಿ ಕೊಡಬೇಕೆನ್ನುವುದನ್ನು ನೀವು ಯೋಚನೆ ಮಾಡಬೇಕು, ಅಂತಹ ಯೋಜನೆಗಳನ್ನು ನೀವು ಜಾರಿಗೆ ತರಬೇಕು. ಅವು ಯಾವ ಕೆಲಸಗಳೇ ಆಗಿರಲಿ. ಅದು ಬಹುಸಂಖ್ಯಾತ ಜನರಿಗೆ ಉದ್ಯೋಗವನ್ನು ದೊರಕಿಸುವಂತಹ ಕಾರ್ಯಗಳು ಆಗಬೇಕು. ಅಂತಹವುಗಳು ನಡೆಯಬೇಕು. ಇವರ ವರದಿಯಲ್ಲಿ ೨೬.೦ ಕೋಟಿ ರೂಪಾಯಿಗಳನ್ನು ಟೆಂಪರ್‌ವರಿ ರಿಲೀಫ್‌ಗೆ ಇಟ್ಟಿದ್ದಾರೆ. ಇದು ಪರ್ಮನೆಂಟ್ ಮೇಜರ್ಸ್‌ದ್ದು ಅಲ್ಲ. ಅಂದರೆ ಎರಡು ನೂರು ಕೋಟಿ ರೂಪಾಯಿಗಳನ್ನು ಇವೊತ್ತು ರೂರಲ್ ಎಂಪ್ಲಾಯಮೆಂಟ್ ಸಲುವಾಗಿ ಕೊಡಬೇಕೆಂದು ಕೇಳಿದ್ದಾರೆ. ವರ್ಕ್ ಫಾರ್ ಫುಡ್ ಎಂದು. ವರ್ಕ್ ಫಾರ್ ಫುಡ್ ಇಲ್ಲದೇ ನೀವು ಆಹಾರ ವಿತರಣೆಯನ್ನು ಮಾಡುತ್ತೀರಿ ಎಂದರೆ ಅದು ವ್ಯಂಗ್ಯ ಆದೀತು. ಮೃಷ್ಟಾನ್ನವನ್ನು ಎದುರಿಗೆ ತೋರಿಸಿಯೂ ಕೈಗೆ ಕೊಡದಿದ್ದರೆ ಎಷ್ಟು ಅಭಾಸ ಆಗುತ್ತದೆಯೋ ಹಾಗೇನೇ ನಿಮ್ಮ ಕೆಲಸ ಆದೀತು. ಹಾಗೆ ಮಾಡಬೇಡಿ, ಮೊದಲು ಜನರಿಗೆ ಕೆಲಸವನ್ನು ಕೊಡುವುದಕ್ಕೆ ಸಕಲ ಪ್ರಯತ್ನಗಳನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೇ, ಆಹಾರಕ್ಕಿಂತ ನೀರಿನ ಅವಶ್ಯಕತೆ ಹೆಚ್ಚಿಗೆ ಇದೆ. ಹವಾ ಆದಕೂಡಲೇ ನೀರಿನ ಅವಶ್ಯಕತೆ ಮೊದಲು ಬೇಕಾದುದು. ಅದನ್ನು ಪೂರೈಸುವುದೇ ಮೊದಲ ಕರ್ತವ್ಯ ಆಗಿರಬೇಕು, ಇವೊತ್ತು ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಇರತಕ್ಕಂತಹ ಪ್ರದೇಶಗಳು ನೀರು ಇಲ್ಲದೇ, ಇರುವುದರಿಂದ ತೊಂದರೆ ಪಡುವಂತಾಗಿದೆ. ಈ ವಿಷಯದಲ್ಲಿ ಗದಗ ನಗರ ಏನು ಪಾಪ ಮಾಡಿವೆಯೋ ಗೊತ್ತಿಲ್ಲ, ಇಲ್ಲಿ ಇನ್ನೂ ನೀರಿನ ಸಮರ್ಪಕ ವ್ಯವಸ್ಥೆಯೇ ಆಗಿಲ್ಲ. ಮಾನ್ಯ ಬೊಮ್ಮಾಯಿಯವರು ತಮ್ಮ ಉತ್ತರದಲ್ಲಿ ಹೇಳಬಹುದು, ಗದಗದಲ್ಲಿ ನೀರಾವರಿಯನ್ನು ತೆಗೆದು ಕೊಂಡಿದ್ದೇವೆ, ತುಂಗಭದ್ರವನ್ನು ತೆಗೆದುಕೊಂಡಿದ್ದೇವೆ, ಒಂಬತ್ತು ಕೋಟಿ ರೂಪಾಯಿಗಳ ಒಂದು ಯೋಜನೆ ಇದೆ. ಒಂಬತ್ತು ಕೋಟಿ ರೂಪಾಯಿಗಳಲ್ಲಿ ಒಂದು ಕೋಟಿ ರೂಪಾಯಿಯನ್ನು, ಅಂದರೆ ಹೋದ ಸಾರಿ ೪ ಲಕ್ಷ ರೂಪಾಯಿ ಇತ್ತು, ಅದಕ್ಕಿಂತ ಮೊದಲು ೪ ಲಕ್ಷ ಇತ್ತು, ಈ ವರ್ಷ ಒಂದು ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿದ್ದೇವೆಂದು ಅವರು ಹೇಳಬಹುದು. ಈ ೯ ಕೋಟಿಯೊಳಗೆ

ನೀವು ಕೇವಲ ಒಂದು ಕೋಟಿ ರೂ. ಗಳ ಪ್ರಾವಿಜನ್ ಮಾಡಿಕೊಂಡು ಕುಳಿತರೆ ಕುಡಿಯುವ ನೀರಿಗೆ ನಾವು ೯ ವರ್ಷಗಳ ಕಾಲ ನಿಲ್ಲಬೇಕೇ ? ಇವೊತ್ತು ಬರಗಾಲದ ಬವಣೆಯಲ್ಲಿ ಎಲ್ಲರಿಗೂ ನೀರು ಕೊಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಗದಗದ ಜನರಿಗೆ ಕುಡಿಯುವ ನೀರಿನ ಸಲುವಾಗಿ ಲಾರಿ ಮೂಲಕ ನೀರು ಕೊಡುವಂತಹ ಕಾಲ ನಿಮಗೆ ಬಂದರೆ, ನಮ್ಮ ಪರಿಸ್ಥಿತಿ ಹೇಗೆ ಆದೀತು. ಬೋರ್ ವೆಲ್‌ಗಳನ್ನು ತೊಡಿಸಿದ್ದು ಇವೊತ್ತು ನೀರಿಲ್ಲದೇ ಹೋಗುತ್ತಿವೆ. ಅವುಗಳಲ್ಲಿ ಅಂಡರ್ ಗ್ರೌಂಡ್ ವಾಟರ್ ಕ್ಯಾಪಾಸಿಟಿ ಇಲ್ಲವೆಂದು ಹೇಳುತ್ತಿದ್ದಾರೆ. ಹಾಗಾದರೆ ಇಂತಹ ಪ್ರಸಂಗದಲ್ಲಿ ನೀವು ಏನು ಮಾಡುತ್ತೀರಿ ? ಬೆಂಕಿ ಹತ್ತಿದಾಗ ಭಾವಿ ತೆಗೆಯಲ್ಲಿಕ್ಕೆ ಹೋಗುವುದು ಬೇಡ. ಈ ವಿಷಯದಲ್ಲಿ ಮುಂಜಾಗ್ರತೆ ಇರುವುದು ಅತ್ಯಾವಶ್ಯಕ. ಈಗ ಸ್ಯಾಂಕ್ಷನ್ ಮಾಡಿದ ಸ್ಕೀಮ್ ಇದೆ. ಎಲ್ಲಾ ಒಟ್ಟು ಮೂರು ಕೋಟಿ ರೂಪಾಯಿಗಳು ಆಗುತ್ತವೆ. ಅದಕ್ಕೆ ನೀವು ಇನ್ನೊಂದು ಎರಡು ಮೂರು ಕೋಟಿ ರೂಪಾಯಿಗಳನ್ನು ಹಾಕಿದರೆ, ಅದಕ್ಕೆ ಪ್ರಾವಿಜನ್ ಮಾಡಿದರೆ ಆ ಕೆಲಸವನ್ನು ಒಂದು ವರ್ಷದಲ್ಲಿ ಮುಗಿಸಬಹುದು. ಹೆಚ್ಚು ಸುಲಭವಾದ ಕೆಲಸ ಏನೆಂದರೆ ಇವೊತ್ತು ರಿಸೀವಿಂಗ್ ಸ್ಟೇಷನ್‌ದ್ದು. ಅದು ಮುಗಿದಿದೆ. ಇವೊತ್ತು ಡಿಸ್ಟ್ರಿಬ್ಯೂಷನ್ನಿನ ಕೆಲಸ ಕೂಡ ಮುಗಿಯುತ್ತಾ ಬರುತ್ತಿದೆ, ಬರೇ ನಡುವಿನ ಪೈಪುಗಳನ್ನು ಅಲ್ಲಿ ಹಾಕತಕ್ಕಂತಹ ಕೆಲಸ ಮಾತ್ರ ಬಾಕಿ ಇದೆ. ಈ ಗದಗಕ್ಕೆ ಕುಡಿಯುವ ನೀರಿನ ಸ್ಕೀಮ್, ತುಂಗಭದ್ರ ವಾಟರ್ ಸಪ್ಲೈ ಸ್ಕೀಮ್‌ನ್ನು ಮುಗಿಸಲು ಇರುವ ಕೆಲಸ ಇಷ್ಟೆ. ಈ ಕೆಲಸವನ್ನು ಇವೊತ್ತಿನ ದಿವಸ ಬರಗಾಲ ಕಾಮಗಾರಿಯಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಮಾಡಿದರೆ ನೀವು ಉಳಿತಾಯ ಮಾಡಿದ ಹಾಗೆ ಆಗುತ್ತದೆ. ಇಲ್ಲದಿದ್ದರೆ ನೀವು ಲಾರಿಯಲ್ಲಿ ನೀರು ತಂದುಹಾಕುವುದಕ್ಕೇನೆ ನಾಲ್ಕೈದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾದೀತು ಎಂದು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂತ್ರಿವರ್ಯರು ಅನೇಕ ಸಲ ನಮ್ಮಲ್ಲಿಗೆ ಬಂದು ಹೋಗಿದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಸಭೆ ಮಾಡಿದಾಗ, ನನ್ನ ವಿರುದ್ಧ ಚುನಾವಣ ಪ್ರಚಾರ ಮಾಡಿದಾಗ ಕೂಡಾ ಗದಗ್ ಪಟ್ಟಣಕ್ಕೆ ಕುಡಿಯುವ ನೀರನ್ನು ಶೀಘ್ರವಾಗಿ ಪೂರೈಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ವಿರುದ್ಧ ಅಲ್ಲ, ಪಕ್ಷದ ವಿಚಾರದಲ್ಲಿ.

ಶ್ರೀ ಕೆ.ಎಚ್. ಪಾಟೀಲ್.—ನನ್ನ ವಿರುದ್ಧ ಅಲ್ಲ, ಪಕ್ಷದ ವಿಚಾರದಲ್ಲಿ ಕೊಟ್ಟಿದ್ದಾರೆ, ಅವರು ಕೊಟ್ಟಿದ್ದನ್ನು ಜನರು ನಂಬಿದ್ದಾರೆ. ಆ ಕೆಲಸವು ಆದಾಗ ಅವರಿಗೆ ಧನ್ಯವಾದಗಳನ್ನು ನಾನು ಕೊಡುತ್ತೇನೆ. ಆ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುದೇನೆಂದರೆ ನೀವು ಕೊಟ್ಟ ಆಶ್ವಾಸನೆಯನ್ನು ದಯವಿಟ್ಟು ಮಾಡಬೇಕು. ಒಂದು ಕೋಟಿ, ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರೆ ಅದರಿಂದ ಆಗುವುದಿಲ್ಲ. ಈ ವರ್ಷವೇ ತುಂಗಭದ್ರಾ ಯೋಜನೆಯನ್ನು ನಾವು ಮುಗಿಸುತ್ತೇವೆಂದು ನೀವು ಹೇಳಿದರೆ ನಮಗೆ ಬೇಗ ನೀರು ಬರುತ್ತದೆ ಎಂದು ನಾವು ಆಶೆ ಮಾಡುತ್ತೇವೆ. ಅದೇ ರೀತಿ ಎಲ್ಲೆಲ್ಲಿ ನೀರಾವರಿ ಕಾಮಗಾರಿಗಳು ಇವೆ ಅಂತಹ ಎಲ್ಲಾ ಕಡೆಗಳಲ್ಲಿಯೂ ಸಹಿತ ಪೂರ್ಣವಾಗಿ ಮುಗಿಸಬೇಕು. ಇವೊತ್ತು ೪೦ ಕೋಟಿ ರೂಪಾಯಿಗಳನ್ನು ನೀರಿನ ಸಲುವಾಗಿ ಪ್ರಾವಿಜನ್ ಮಾಡಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ಕೇಂದ್ರ ಸರಕಾರವನ್ನು ಕೇಳಿ ಎಂದು ಹೇಳಿದ್ದಾರೆ. ಅದು ಬೋರ್‌ವೆಲ್ ತೆಗೆಯುವುದರ ಸಲುವಾಗಿ ಎಲ್ಲಾ ಕಡೆಗೆ ಕೂಡಿ ಆಗಬೇಕೆಂದು ಹೇಳಿದ್ದಾರೆ. ಹಾಗೆಯೇ ೨೦ ಕೋಟಿ ರೂಪಾಯಿಗಳನ್ನು ದನಗಳ ಫಾಡರ್ ಸಲುವಾಗಿ ಕೊಡಬೇಕೆಂದು ಹೇಳಿದ್ದಾರೆ. ಸಮಿತಿಯವರ ಸಲಹೆಯನ್ನು ಈ ವಿಚಾರದಲ್ಲಿ ನೋಡಬಹುದು. ಇವೊತ್ತು ಅನೇಕ ಕಡೆಗಳಲ್ಲಿ ಕ್ಯಾಟಲ್ ಫೀಡ್ ಪ್ರೊಸೆಸಿಂಗ್ ಸೊಸೈಟಿಗಳು ಇದ್ದಾವೆ. ಅವುಗಳಿಗೆ ಸಬ್ಸಿಡಿಯನ್ನು ಕೊಡುವುದು ಬಿಟ್ಟು ಉಳಿದ ಯಾರೋ ಖಾಸಗಿಯ ವ್ಯವಸ್ಥಾಪಕರಿಂದ ತೆಗೆದುಕೊಳ್ಳುವ ಫೀಡಿಗೆ ಸಬ್ಸಿಡಿ ಕೊಡುವ ಯೋಜನೆ ಇದೆ. ಅವುಗಳನ್ನು ಬಂದ್ ಮಾಡಿ ಸಹಕಾರಿ ಸಂಘಗಳ ಮುಖಾಂತರವಾಗಿ, ಇಲ್ಲವೇ ಸರಕಾರದ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರವಾಗಿ ನಡೆಯತಕ್ಕಂತಹ ಕ್ಯಾಟಲ್ ಫೀಡ್‌ಗಳನ್ನು ತೆಗೆದುಕೊಂಡು ಅಂತಹವುಗಳಿಗೆ ಪ್ರೋತ್ಸಾಹವನ್ನು ಕೊಡಬೇಕೆಂಬ ಮಾತನ್ನು ಹೇಳಬಯಸುತ್ತೇನೆ ಮತ್ತು ಎಲ್ಲಾ ಕಡೆಗಳಲ್ಲಿಯೂ ಹಂಚಿಕೆಯ ವಿಚಾರದಲ್ಲಿ ಬಹಳಷ್ಟು ಲಕ್ಷ ತೆಗೆದುಕೊಳ್ಳಬೇಕಾಗುತ್ತದೆ. ಅದು ಆಹಾರದ ಹಂಚಿಕೆಯ ವಿಚಾರದಲ್ಲಾಗಲೀ, ನೀರು ಕೊಡುವ ವಿಚಾರದಲ್ಲಾಗಲೀ ಯಾವುದೇ ವಿಚಾರದಲ್ಲಿಯೇ ಆದರೂ ಕೂಡಾ ವಿತರಣಾ ವ್ಯವಸ್ಥೆಯನ್ನು ಯಾರ ಕೈಯಲ್ಲಿ ಕೊಡಬೇಕೆನ್ನುವುದರ ಬಗ್ಗೆ ಚಿಂತನೆ ಮಾಡಬೇಕು. ಅದರಲ್ಲಿ ರಾಜಕೀಯ ಬಾರದಿರಲಿ ಎಂದು ಹೇಳ ಬಯಸುತ್ತೇನೆ. ಕೆಲವು ಸಂದರ್ಭಗಳಲ್ಲಿ ಯಾರಿಗೆ ಆಹಾರವನ್ನು ಕೊಡಬೇಕೆಂದು ಮಾಡುವಾಗ ಅದರಲ್ಲಿನ ಯುಕ್ತಾಯುಕ್ತತೆಯನ್ನು ನೋಡಬೇಕಾಗು

ತ್ತದೆ. ಉದಾಹರಣೆಗೆ ನಾನು ಚಿತ್ರದುರ್ಗಕ್ಕೆ ಹೋದಾಗ ನೋಡಿದ್ದೇನೆ. ಅಲ್ಲಿನ ಜನರು ಒಂದು ಕೆ.ಜಿ. ಅಕ್ಕಿಗೆ ೧೦ ಮೈಲಿಗಳ ದೂರದಿಂದ ಬರುತ್ತಿದ್ದಾರೆ. ಇದನ್ನು ನೀವು ಮಾಡಿದ್ದೀರಿ ಎಂದು ನಾನು ಹೇಳುತ್ತಿಲ್ಲ, ಇದು ಅನೇಕ ದಿವಸಗಳಿಂದ ನಡೆದುಕೊಂಡು ಬಂದಿದೆ. ಆ ಪದ್ಧತಿ ಏನಿದೆ ಅದನ್ನು ಕೂಡಲೇ ನಿಲ್ಲಿಸಬೇಕು. ಹತ್ತಿರದಲ್ಲಿಯೇ ಆಹಾರ ವಿತರಣಾ ವ್ಯವಸ್ಥೆಯನ್ನು ಮಾಡಬೇಕು. ಹಸಿದ ಹೊಟ್ಟೆಗೆ ನಾವು ಕೂಳು ಕೊಡುವಾಗ ಹಸಿದವನು ಇನ್ನಷ್ಟು ಕಂಗಾಲು ಆಗುವ ಹಾಗೆ ಮಾಡ ಬಾರದು. ಆದುದರಿಂದ ಎಲ್ಲಾ ರೀತಿಯಿಂದಲೂ ಜನರಿಗೆ ಅನುಕೂಲ ಆಗುವ ಹಾಗೆ ವಿತರಣಾ ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ಸವಿನಯದಿಂದ ಕೇಳಿಕೊಂಡು, ಹೆಚ್ಚು ಮಾತ ನಾಡದೆ, ಎಲ್ಲಾ ಕಡೆಗಳಲ್ಲಿಯೂ ಭೀಕರವಾದಂತಹ ಬರಗಾಲ ಪರಿಸ್ಥಿತಿ ಇರುವಾಗ ಅದನ್ನು ಎದುರಿಸಲು ಸರಕಾರದವರಿಗೆ ಎಷ್ಟು ಸಹಾಯವನ್ನು ಮಾಡಲಿಕ್ಕೆ ಸಾಧ್ಯವೋ ಅಷ್ಟನ್ನು ನಮ್ಮ ಪಕ್ಷದವರು ಮಾಡು ತ್ತಾರೆ ಎನ್ನುವ ಭರವಸೆಯನ್ನು ಕೊಡುತ್ತಾ, ಕೇಂದ್ರ ಸರ್ಕಾರದವರು ನಿಮಗೆ ಕೊಡತಕ್ಕಂತಹ ಹಣ ವನ್ನು ಸರಿಯಾದ ರೀತಿಯಲ್ಲಿ ಜನರ ಕಲ್ಯಾಣಕ್ಕಾಗಿ ವಿನಿಯೋಗಿಸಿ, ಎಲ್ಲಿಯೂ ಕೂಡಾ ಈ ವಿಷಯ ದಲ್ಲಿ ಅಪವಾದಕ್ಕೆ ಗುರಿಯಾಗುವಂತಹ ಕೆಲಸವನ್ನು ಮಾಡದೇ, ತಾವು ಸತ್ಕೀರ್ತಿಗೆ ಪಾತ್ರರಾಗಬೇಕು ಮತ್ತು ಜನರನ್ನು ಉಳಿಸಬೇಕು, ಹಾಗೆಯೇ ಇಂತಹ ತೀವ್ರ ಕಷ್ಟಕರವಾದ ಕಾಲದಲ್ಲಿ ಇದನ್ನು ಎದುರಿಸಲು ದೇವರು ನಿಮಗೆ ಶಕ್ತಿಯನ್ನು ಕೊಡಲಿ ಎಂದು ಹಾರೈಸುತ್ತೇನೆ.

† ಶ್ರೀ ಸಿ.ಎಮ್. ಉದಾಸಿ (ಹಾನಗಲ್).—ಸನ್ಮಾನ್ಯ ಸಭಾಧ್ಯಕ್ಷರೇ, ಸದನದಲ್ಲಿ ಬರಗಾಲದ ಬಗ್ಗೆ ಚರ್ಚೆ ನಡೆಯುತ್ತಾ ಇದೆ, ಎಲ್ಲರೂ ತಮ್ಮ ಚಿಂತನೆಯನ್ನು ಈ ಕುರಿತಾಗಿ ವ್ಯಕ್ತಪಡಿಸಿದ್ದಾರೆ. ಈ ವರ್ಷ ಅತೀ ಕಡಿಮೆ ಮಳೆಯಾದುದರಿಂದ ಮುಂಬರುವ ದಿನಗಳಲ್ಲಿ ನಾವು ಬಹಳ ಗಂಭೀರವಾದ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಕುಡಿಯುವ ನೀರಿಗಾಗಿ ಬರವನ್ನು ಎದುರಿಸಬೇಕಾಗ ಬಹುದು, ವಿದ್ಯುಚ್ಛಕ್ತಿಗಾಗಿ, ಆಹಾರಕ್ಕಾಗಿ, ಹಾಗೆಯೇ ಇತರ ವಿಷಯಗಳಿಗಾಗಿ ನಾವು ಬರವನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಾಗ ನಮ್ಮ ಮುಂದಿರುವ ಪರಿಸ್ಥಿತಿಯ ಗಂಭೀರತೆಯನ್ನು ಕಲ್ಪಿಸಿ ಕೊಳ್ಳಬಹುದಾಗಿದೆ. ನೀರಾವರಿ ಪಂಪು ಸೆಟ್ಟುಗಳಿಂದ ಹಿಡಿದು, ಅನೇಕ ಉದ್ದಿಮೆಗಳ ಬಗ್ಗೆ ಅತ್ಯವಶ್ಯಕವಾಗಿ ಬೇಕಾಗುವ ವಿದ್ಯುಚ್ಛಕ್ತಿಯ ಬಗ್ಗೆ ನಾವು ಚಿಂತನೆ ಮಾಡಬೇಕಾಗುತ್ತದೆ. ನೀರಾವರಿಗೆ ಬೇಕಾಗುವ ವಿದ್ಯುಚ್ಛಕ್ತಿಯ ಕೊರತೆಯನ್ನು ಮೊದಲು ನೀಗಿಸಬೇಕು. ಅನಂತರ ಉದ್ದಿಮೆಗಳ ಪೂರೈಕೆಗೆ ಗಮನ ಕೊಡಬೇಕು ಎಂದು ಹೇಳುತ್ತೇನೆ. ಅಲ್ಯೂಮಿನಿಯಂ ಉತ್ಪಾದನೆ ಮಾಡ ಬೇಕಾದರೆ ಒಂದು ಟನ್‌ಗೆ ೨೦ ಸಾವಿರ ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಖರ್ಚು ಮಾಡ ತಕ್ಕಂತಹ ಪರಿಸ್ಥಿತಿ ಇರುವಾಗ ಒಂದು ಟನ್ ಕಾಸ್ಟಿಂಗ್ ಸೋಡಾ ತಯಾರು ಮಾಡಲು ೪ ಸಾವಿರ ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿ ಬೇಕಾಗಿರುವಾಗ, ತುರ್ತುಪರಿಸ್ಥಿತಿಯ ರೀತಿಯಲ್ಲಿ ಇದನ್ನು ಗಂಭೀರ ವಾಗಿ ಆಲೋಚನೆ ಮಾಡಬೇಕು. ಕುಡಿಯುವ ನೀರಿನ ವಿಚಾರದಲ್ಲಿ ಅರ್ಧಕ್ಕಿಂತ ಹೆಚ್ಚು ಕೊಳವೆ ಭಾವಿಗಳಲ್ಲಿ ನೀರು ಕಡಿಮೆಯಾಗಿದೆ. ಆದುದರಿಂದ ಕೂಡಲೇ ಫಾಸ್ಟರ್ ಬೋರ್‌ವೆಲ್‌ಗಳನ್ನು ತರಿಸಿ ಎಲ್ಲಾ ಕಡೆಗಳಲ್ಲಿಯೂ ಅತಿ ಹೆಚ್ಚಿನ ಕೊಳವೆ ಬಾವಿಗಳನ್ನು ತೆಗೆಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಹಾನಗಲ್ ತಾಲ್ಲೂಕು ವಿಚಾರದಲ್ಲಿ ಹೇಳುವುದಾದರೆ, ಕಳೆದ ೨೦ ವರ್ಷಗಳಿಗಿಂತ ಈ ವರ್ಷ ಮಳೆ ಬಹಳ ಕಡಿಮೆಯಾಗಿದೆ. ಇಲ್ಲಿನ ತೆಂಗಿನ, ಅಡಿಕೆಯ ತೋಟಗಳಿಗೆ ನೀರು ಇಲ್ಲದೆ ಬೆಳೆಗಾರರಿಗೆ ಬಹಳ ಕಷ್ಟವಾಗಿದೆ. ಇದರಿಂದಾಗಿ ಜೀವನ ನಿರ್ವಹಣೆಗಾಗಿ ಅನೇಕ ಜನರು ಕೆಲಸಕ್ಕಾಗಿ ಚಿಕ್ಕಮಗಳೂರು ಜಿಲ್ಲೆಗೆ ಹೋಗುತ್ತಿದ್ದಾರೆ. ಜನರ ಪರಿಸ್ಥಿತಿ ತುಂಬಾ ಕಷ್ಟವಾಗಿದೆ. ಆದುದರಿಂದ ಅಲ್ಲಿ ಕೂಡಲೇ ಕೆಲಸಕಾರ್ಯಗಳನ್ನು ತ್ವರಿತ ಗತಿಯಲ್ಲಿ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿಂದ ಕೇವಲ ೧೭ ಮೈಲಿಗಳ ದೂರದಲ್ಲಿ ವರದಾ ನದಿ ಇದ್ದರೂ ಸಹಿತ ನಮಗೆ ನೀರಾವರಿ ಸೌಲಭ್ಯ ಮಾಡಲು ಅನುಕೂಲತೆಗಳು ಇದ್ದರೂ ಸಹಿತ, ಅದನ್ನು ಇಲ್ಲಿಯ ತನಕ ಮಾಡದಿರುವುದರಿಂದ ನಾವು ಗಂಭೀರ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ಆದುದರಿಂದ ಆ ತಾಲ್ಲೂಕಿಗೆ ಆಗಬೇಕಾದಂತಹ ನೀರಾವರಿ ಸೌಲಭ್ಯಗಳ ಬಗ್ಗೆ ಸರಕಾರದವರ ಹೆಚ್ಚು ಗಮನ ಹರಿಸಬೇಕಾದುದು ಅತ್ಯವಶ್ಯಕವಾಗಿದೆ ಮತ್ತು ವಿಶ್ವ ಬ್ಯಾಂಕ್ ನೆರವಿನಿಂದ ಧರ್ಮಾ ಪ್ರಾಜೆಕ್ಟನ್ನು ಬದಲಾವಣೆ ಮಾಡಿದರೆ ಅದರಿಂದ ಬಹಳಷ್ಟು ಜನರಿಗೆ ಕೆಲಸ ಸಿಗುವುದರ ಜೊತೆಗೆ ಯಾವಾಗಲೂ ಬರಗಾಲವನ್ನು ಎದುರಿಸಬೇಕಾದ ಪರಿಸ್ಥಿತಿಯಲ್ಲಿ ನೀರಿನ ಸದುಪಯೋಗ ಮಾಡುವ ಜೊತೆಯಲ್ಲಿ ಎಲ್ಲಾ ಜನರಿಗೂ ಅನುಕೂಲ ಮಾಡಿ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಡುವ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ಪ್ರಾರ್ಥಿಸಿಕೊಂಡು, ಈ ಕುರಿತಾಗಿ ಸರಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಸಲ †ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಜೇವರ್ಗಿ).—ಮಾನ್ಯ ಉಪಾಧ್ಯಕ್ಷರೇ, ಹೋದ ಮಾ ದನದ ಪ್ರಾರಂಭದಲ್ಲಿ ಬರಗಾಲದ ವಿಷಯದಲ್ಲಿ ಚರ್ಚೆಯಾಗಬೇಕೆಂದು ನಾವು ಒತ್ತಾಯ ಯ ಡಿದ್ದೆವು. ಚರ್ಚೆ ಕೂಡಾ ಆಯಿತು. ಅದು ಆದಮೇಲೆ ಅದಕ್ಕಾಗಿ ಸದನದ ಒಂದು ಸಮಿತಿ ಮಾಗಬೇಕು, ಅವರು ಖುದ್ದಾಗಿ ಹೋಗಿ ಪರಿಸ್ಥಿತಿಯನ್ನು ನೋಡತಕ್ಕಂತಹ ಒಂದು ಅವಕಾಶ ಅನ್ನು ಕಲ್ಪಿಸಿಕೊಡಬೇಕೆಂದು ಹೇಳಿದ ನಮ್ಮ ವಾದವನ್ನು ಕೂಡಾ ಸರಕಾರವೂ ಒಪ್ಪಿಕೊಂಡಿತು. ಮನಂತರ ಮಾನ್ಯ ಖರ್ಗೆಯವರ ನೇತೃತ್ವದಲ್ಲಿ ೧೫ ಜನ ಸದಸ್ಯರು ಸಮಿತಿಯೊಂದು ಕೂಡಾ ಅಧ್ಯಯನ ಮಾಡಿ ಬಂದಿದೆ. ಅವರು ಒಳ್ಳೆಯ ವರದಿಯನ್ನೂ ಕೊಟ್ಟಿದ್ದಾರೆ. ತುಂಬಾ ಒಳ್ಳೆಯ ವರದಿಯು ಇದಾಗಿದ್ದು, ಬಹಳ ಕಡಿಮೆ ಸಮಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಹೋಗಿ ಭೇಟಿ ನೀಡಿ, ಸಮಗ್ರ ಪರಿಶೀಲನೆ ಮಾಡಿ ತಮ್ಮ ಒಂದು ಅತ್ಯುತ್ತಮವಾದ ಅಭಿಪ್ರಾಯವನ್ನು ವರದಿಯಲ್ಲಿ ಕೊಡಿದ್ದಾರೆ. ಯಾವ ರೀತಿಯಲ್ಲಿ ಕೆಲಸ ಆಗಬೇಕಾಗಿದೆ, ಎಷ್ಟರಮಟ್ಟಿಗೆ ಕೆಲಸಗಳು ಆಗಿವೆ ಎನ್ನತಕ್ಕಂತಹ ವಿಚಾರಗಳಲ್ಲಿಯೂ ಕೂಡಾ ತುಂಬಾ ಸ್ಪಷ್ಟವಾದ ವರದಿಯನ್ನು ಕೊಟ್ಟಿದ್ದಾರೆ. ನಾವೂ ಕೂಡಾ ಸದನದಲ್ಲಿ ಆ ಕುರಿತು ಪ್ರಸ್ತಾಪ ಮಾಡಿದ್ದೇವೆ. ಯಾವ ರೀತಿಯಾಗಿ ಜನರು ಈ ಬರಗಾಲದಿಂದ ಕಷ್ಟಕ್ಕೆ ಒಳಗಾಗಿದ್ದಾರೆ, ಎಷ್ಟು ಕಷ್ಟದಲ್ಲಿದ್ದಾರೆ, ಆದರೂ ಕೂಡ ಸರಕಾರದವರು ಏನೂ ಕ್ರಮ ತೆಗೆದುಕೊಳ್ಳುತ್ತಾ ಇಲ್ಲ ಎಂದು ಕೂಡಾ ಹೇಳಿದ್ದಾರೆ. ಆ ಸಮಿತಿಯಲ್ಲಿ ಸದನದ ಎಲ್ಲಾ ಪಕ್ಷದ ಸದಸ್ಯರುಗಳೂ ಕೂಡಾ ಇದ್ದರು, ಎಲ್ಲರೂ ಕೂಡಾ ಏನೇನು ಸಲಹೆಗಳನ್ನು ನೀಡಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರು ಇಲ್ಲಿ ಇಲ್ಲ. ಇವೊತ್ತು ಏನಾಗಿದೆ ಎಂದರೆ ಸಮಿತಿಯ ಅಭಿಪ್ರಾಯದಲ್ಲಿ ಒಟ್ಟು ೧೩ ಲಕ್ಷ ಜನರಿಗೆ ಕೆಲಸ ಬೇಕಾಗಿದೆ ಎನ್ನತಕ್ಕಂತಾದ್ದು ಗಮನಕ್ಕೆ ಬಂದಿದೆ. ಈಗಾಗಲೇ ಮೂರು ಲಕ್ಷ ಜನರಿಗೆ ಕೆಲಸ ಕೊಡತಕ್ಕಂತಾದ್ದು ಆಗಿದೆ ಎಂದು ಕಾಣುತ್ತದೆ. ಇದರಲ್ಲಿ ಎಲ್ಲಾ ಸಣ್ಣಪುಟ್ಟ ಕೆಲಸಗಳು ಸೇರಿವೆ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಈಗಾಗಲೇ ಹೇಳಿದ್ದಾರೆ, ನಮ್ಮ ಹತ್ತಿರ ಹಣ ಇಲ್ಲ, ಆದುದರಿಂದ ಯಾವ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಿದ್ದಾರೆ. ಸಮಿತಿಯವರು ಕಡಿಮೆ ಎಂದರೆ ೧೦ ಲಕ್ಷ ಜನರಿಗೆ ಕೆಲಸವನ್ನು ಒದಗಿಸಬೇಕೆಂದು ವ್ಯಕ್ತಪಡಿಸಿದ್ದಾರೆ. ಮಳೆ ಬಾರದಿದ್ದುದರಿಂದ ಕೃಷಿ ಕಾರ್ಮಿಕರು ಕೆಲಸವಿಲ್ಲದೆ ಕಂಗಾಲಾಗಿದ್ದಾರೆ, ಇದಕ್ಕೆಲ್ಲಾ ೨೦೦ ಕೋಟಿ ರೂಪಾಯಿಗಳು ಬೇಕಾಗಿದೆ ಎಂದು ಹೇಳಿದ್ದಾರೆ. ಫಾಡರ್‌ಗೆ ೨೦ ಕೋಟಿ ರೂಪಾಯಿಗಳು ಬೇಕಾಗಿದೆ ಎಂದು ಹೇಳಿದ್ದಾರೆ, ೪೦ ಕೋಟಿ ರೂಪಾಯಿಗಳು ನೀರಿಗಾಗಿ ಬೇಕಾಗುತ್ತದೆಂದು ಹೇಳಿದ್ದಾರೆ. ಇವರ ಶಿಫಾರಸ್ಸನ್ನು ಸರಕಾರವು ಒಪ್ಪಿಕೊಳ್ಳಬೇಕು. ಹೆಚ್ಚಿನ ರೀತಿಯಲ್ಲಿ ಕೆಲಸವನ್ನು ಮಾಡಬೇಕು, ಜನರ ಕಷ್ಟವನ್ನು ನೀಗಿಸಬೇಕು. ಈ ವಿಷಯದಲ್ಲಿ ಸರಕಾರವು ನಿರ್ದಿಷ್ಟವಾದ ನಿಲುವನ್ನು ಹೊಂದಬೇಕು. ಇದುವರೆಗೆ ೫ ತಿಂಗಳಲ್ಲಿ ಕೇವಲ ೩೬ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಹೆಚ್ಚಿಗೆ ಮಾಡಿಲ್ಲ, ಒಂದೊಂದು ಜಿಲ್ಲೆಯಲ್ಲೂ ೨೫ ಸಾವಿರಕ್ಕಿಂತ ಹೆಚ್ಚಿಗೆ ಜನರು ಕೆಲಸ ಮಾಡುತ್ತಿಲ್ಲ ಎಂದು ಹೇಳಿದಾರೆ. ಈ ವಿಷಯದಲ್ಲಿ ಸರಕಾರದವರು ಚಿಂತನೆ ಮಾಡಬೇಕು. ನಮ್ಮ ಜೇವರ್ಗಿ ತಾಲ್ಲೂಕಿನಲ್ಲಿ ಎರಡೂವರೆ ಸಾವಿರ ಜನರಿಗೆ ಕೆಲಸ ಕೊಡಬೇಕೆಂದು ಮಾಡಿದ್ದಾರೆ. ಈಗ ಏನು ಮಾಡಿದ್ದಾರೋ ಗೊತ್ತಿಲ್ಲ. ಇವೊತ್ತು ಮಾನ್ಯ ದೇವೇಗೌಡರು ಮನಸ್ಸು ಮಾಡಿದರೆ ಕೆಲಸವನ್ನು ಮಾಡಬಹುದು. ಅವರು ಈ ವಿಷಯದಲ್ಲಿ ಹಿಂದುಮುಂದು ನೋಡಬಾರದು. ತಾವುಗಳು ಜನರ ಬೆಂಬಲವನ್ನು ಪಡೆದು ಅಧಿಕಾರದಲ್ಲಿದ್ದೀರಿ, ಅದಕ್ಕೆ ಎಲ್ಲಾ ವಿಷಯದಲ್ಲಿಯೂ ನಾವು ಪ್ರಜಾಪ್ರಭುತ್ವಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ನೀವು ಚೆನ್ನಾಗಿ ಆಡಳಿತ ನಿರ್ವಹಣೆ ಮಾಡಬೇಕೆಂದು ಜನರು ಬಯಸುತ್ತಾರೆ. ಆದರೆ ನಿಮ್ಮ ಸರಕಾರ ಬಂದಮೇಲೆ ಜನರು ತೊಂದರೆಗೆ ಒಳಗಾಗಿದ್ದಾರೆ. ೧೯೭೩-೭೪ರಲ್ಲಿ ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಬರಗಾಲ ಬಂದಾಗ ಯಾವ ರೀತಿಯಲ್ಲಿ ಯುದ್ಧೋಪಾದಿಯಲ್ಲಿ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಂಡಿದ್ದರೋ, ಎಷ್ಟು ಹಣವನ್ನು ಖರ್ಚುಮಾಡಿದ್ದಾರೋ ಅದನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತವೆ. ಆದರೆ ಇವೊತ್ತು ನೀವು ಯಾವಾಗಲೂ ಕೇಂದ್ರಸರಕಾರವನ್ನು ದೂರತಕ್ಕಂತಹದ್ದನ್ನು ಮಾಡುತ್ತೀರಿ. ಆದರೆ ಜನರ ತೊಂದರೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಗಳನ್ನು ನೀವು ಅಷ್ಟು ನಿಗಾ ವಹಿಸಿ ಗಮನಿಸುತ್ತಿಲ್ಲ. ಹಾಗೆಯೇ ಡಿ.ಸಿ.ಯವರಿಗೆ ಹೆಚ್ಚಿನ ಪವರ್ಸ್‌ಗಳನ್ನು ಕೊಡಬೇಕು. ಅವರು ಫ್ರೀ ಹ್ಯಾಂಡ್ ಆಗಿರಬೇಕಾಗುತ್ತದೆ. ಬೋರ್‌ವೆಲ್‌ಗಳನ್ನು ಹಾಕುವುದನ್ನು ನಿಲ್ಲಿಸುವ ಬಗ್ಗೆ ಅದೇಶ ಕೊಟ್ಟಿದ್ದಾರೆ ಎಂದು ತಿಳಿದು ಬಂದಿತ್ತು. ಎಲ್ಲಾ ಕಡೆಗಳಿಗೂ ನೀರನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ, ಮತ್ತೆ ಹೀಗೆ ಏಕೆ ಮಾಡುತ್ತಿದ್ದೀರಿ ? ನೀರಾವರಿ ವಿಷಯದಲ್ಲಿ ಹೆಚ್ಚು ಕಾಳಜಿ ವಹಿಸಬೇಕಾಗಿದೆ. ಗುಲ್ಬರ್ಗವಲ್ಲಿ ಡಿ.ಸಿ.ಯವರಿಗೆ ಕೇಳಿದಾಗ ಎಷ್ಟು ಬೋರ್‌ವೆಲ್ ಬೇಕಾಗಿದೆ ಅಷ್ಟು ರಿಗ್‌ಗಳು ನಮ್ಮ ಹತ್ತಿರ ಇಲ್ಲ, ನಮ್ಮಲ್ಲಿ ೧೧-೧೨ ಇದೆ, ನಮಗೆ ೨೦ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಅಲ್ಲಿನ ಪರಿಸ್ಥಿತಿಯನ್ನು ನೋಡಲು ರೆವಿನ್ಯೂ ಮಂತ್ರಿಗಳೇ ಖುದ್ದಾಗಿ ಹೋಗಬೇಕು. ಅಲ್ಲಿನ ಪರಿಸ್ಥಿತಿಗೆ ಸಮನಾಗಿ ಕಾಮಗಾರಿಗಳನ್ನು ಒದಗಿಸಿಕೊಡಬೇಕಾಗುತ್ತದೆ ಒಂದು ತಾಲ್ಲೂಕಿನಲ್ಲಿ ೫೦ ಸಾವಿರ ಜನರಿಗಾದರೂ ಕೂಲಿ ಕೊಡತಕ್ಕಂತಹ ವ್ಯವಸ್ಥೆಯನ್ನು ಸರಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

೧-೩೦ ಪಿ. ಎಂ.

ಫಾಡರ್ ಬಗ್ಗೆ ಕೂಡ ಸಮಿತಿಯು ವರದಿಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಫಾಡರ್ ಬ್ಯಾಂಕ್ಸ್ ಅನ್ನು ರೆವಿನ್ಯೂ ಸರ್ಕಲ್ ವೈಜ್ ಮಾಡಬೇಕೆಂದು ಸಹ ಸಮಿತಿಯವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಯಾವ ರೀತಿಯಲ್ಲಿ ಈ ಫಾಡರ್ ಕೊಡುವುದರಲ್ಲಿ ಅನ್ಯಾಯವಾಗುತ್ತಿದೆ ಎಂಬುದನ್ನು ಸಹ ತಿಳಿಸಿದ್ದಾರೆ. ಇವತ್ತು ಏನಪ್ಪ ಅಂದ್ರೆ ಒಂದು ತಾಲ್ಲೂಕಿನಲ್ಲಿ ತಹಶೀಲ್ದಾರ್‌ರವರು ಇರುತ್ತಾರೆ. ಸರ್ಕಾರದ ಕಾರ್ಯಕ್ರಮಗಳು ಏನೇನು ಇವೆ ಆ ಪ್ರಕಾರವಾಗಿ ಜನರಿಗೆ ಅನುಕೂಲ ಮಾಡಿಕೊಡುವಂತಹುದು ಅವರ ಕರ್ತವ್ಯ. ಆದರೂ ಸಹ ಸಮಿತಿಯವರ ಗಮನಕ್ಕೆ ಸರ್ಕಾರದ ಆಜ್ಞೆಗಳೇ ಅಧಿಕಾರಿಗಳ ಗಮನಕ್ಕೆ ಬಂದಿಲ್ಲವೆಂದು ತಿಳಿದುಬಂದಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಎಲ್ಲಾ ಅಧಿಕಾರವನ್ನು ತಾವು ಜಿಲ್ಲಾಧಿಕಾರಿಗಳಿಗೆ ಕೊಡಿ. ನಾನು ಉದಾಹರಣೆಗೆ ಹೇಳುವುದಾದರೆ ಗುಲ್ಬರ್ಗ ಜಿಲ್ಲೆಯಲ್ಲಿ ಇದುವರೆವಿಗೂ ಕೂಡ ಬರಗಾಲ ಕಾಮಗಾರಿಗಳು ಪ್ರಾರಂಭವಾಗಿಲ್ಲ. ಎನ್.ಆರ್.ಇ.ಪಿ. ಫಂಡ್‌ನಲ್ಲೂ ಕೂಡ ಕಾಮಗಾರಿಗಳನ್ನು ತೆಗೆದುಕೊಂಡಿಲ್ಲ. ಮಾನ್ಯ ರೆವಿನ್ಯೂ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ ಸುಮಾರು ೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಆದರೆ ಅಲ್ಲಿ ಹಣ ಇಲ್ಲವೆಂದು ಜಿಲ್ಲಾಧಿಕಾರಿಗಳು ಹೇಳುತ್ತಾರೆ. ಬಡ್ಜೆಟ್‌ನಲ್ಲಿ ತಾವು ಬೇರೆ ಬೇರೆ ಕಾಮಗಾರಿಗಳಿಗೆ ಹಣವನ್ನು ಒದಗಿಸಿದ್ದೀರೆ ವಿನಹ: ಈ ಕೆಲಸಗಳಿಗೆ ಮೂರನೇ ಒಂದು ಭಾಗದಷ್ಟು ಹಣವನ್ನು ಸಹ ಖರ್ಚು ಮಾಡುತ್ತಿಲ್ಲ. ತಾವು ಎನ್.ಆರ್.ಇ.ಪಿ. ವರ್ಕ್ಸ್‌ನಲ್ಲಿ ಒಂದು ಶಾಲೆಗೆ ಸುಮಾರು ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತೀರಿ. ಈ ಹಣ ಸಾಕಾಗುವುದಿಲ್ಲ. ಈ ವಿಷಯವನ್ನು ಸಹ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ನಡೆಸಬೇಕಾಗುತ್ತದೆ. ರಾಜಕೀಯ ಮಾಡುವುದು ಅಲ್ಲ. ನಾನು ಆರೋಪ ಮಾಡುತ್ತಿಲ್ಲ. ಈ ಸಮಾಜದಲ್ಲಿ ಯಾರು ಬಡವರಿದ್ದಾರೆ, ಯಾರು ಅಸಮರ್ಥರಿದ್ದಾರೋ ಅಂತಹ ಜನರಿಗೆ ನಾವು ಸಹಾಯ ಮಾಡಬೇಕು. ಆ ಜನರ ಕೂಗು ನಿಮಗೆ ಕೇಳಬೇಕು. ಸರ್ಕಾರಿ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು. ಆ ರೀತಿಯ ಒಂದು ಕೆಲಸವನ್ನು ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಮಾಡಬೇಕು. ಸ್ವಾಮಿ ಇವತ್ತು ನಮ್ಮಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಇದೆ. ಈ ಒಂದು ಯೋಜನೆ ವಿಶ್ವಬ್ಯಾಂಕಿನ ನೆರವಿನಿಂದ ನಡೆಯುವಂತಹ ಯೋಜನೆ. ಇದನ್ನು ಮಾನ್ಯ ದೇವೇಗೌಡರು ಕೈ ಬಿಟ್ಟಂತೆ ಕಾಣುತ್ತದೆ. ಆದರೆ ಹೇಮಾವತಿ ಪ್ರಾಜೆಕ್ಟನ್ನು ಕೈಗೆತ್ತಿಕೊಂಡಿದ್ದಾರೆ. ಬಹಳ ಸಂತೋಷ. ಆದರೆ ನಮ್ಮ ಬೇಡಿಕೆಯಾದರೂ ಏನೆಂದರೆ ಈ ಒಂದು ಯೋಜನೆಗೆ ಇನ್ನು ಒಂದು ೫೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಈ ಕೃಷ್ಣಾ ಮೇಲ್ದಂಡೆ ಯೋಜನೆ ಪೂರ್ಣಗೊಳ್ಳುತ್ತದೆ. ಮಾನ್ಯ ಖರ್ಗೆಯವರು ಸಹ ತಮ್ಮ ವರದಿಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ಇನ್ನು ಸುಮಾರು ಒಂದು ಕೋಟಿ ರೂಪಾಯಿಗಳನ್ನಾದರೂ ಕೊಟ್ಟರೆ ಈ ಯೋಜನೆ ಪೂರ್ಣಗೊಂಡು ರಾಯಚೂರು, ಬಿಜಾಪುರ, ಗುಲ್ಬರ್ಗ, ಜೇವರ್ಗಿ, ಶಹಪುರ ಇತ್ಯಾದಿ ತಾಲ್ಲೂಕುಗಳಿಗೆ ಸಹಾಯವಾಗುತ್ತದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಕೃಷ್ಣಾ ಮೇಲ್ದಂಡೆ ಯೋಜನೆಗೆ ೧೦೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್‌ಗೆ ಅನುಕೂಲವಾಗತಕ್ಕ ಥ ಕಾರಂಜ, ಮುಲ್ಲಾಮರಿ ಯೋಜನೆಗಳಿಗೂ ಸರ್ಕಾರದವರು ಹಣ ಕೊಟ್ಟಿಲ್ಲ. ಆದರೂ ಸರ್ಕಾರದವರು ಕೃಷ್ಣಾ ಮೇಲ್ದಂಡೆ ಯೋಜನೆಗೆ ಹೆಚ್ಚಿನ ಹಣ ಒದಗಿಸಿಕೊಟ್ಟು ಸಹಾಯ ಮಾಡಿದರೆ ಎಲ್ಲಿ ಬರಗಾಲ ಪರಿಸ್ಥಿತಿ ಬರುತ್ತದೆಯೋ, ಎಲ್ಲಿ ರೈನ್‌ಫಾಲ್

ಕಡಿಮೆಯಾಗುತ್ತದೆಯೋ ಆ ಭಾಗದ ಜನರಿಗೆ ಅನುಕೂಲವಾಗುತ್ತದೆ. ಈ ಕೆಲಸವನ್ನು ಸರ್ಕಾರದವರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ನಮ್ಮ ಗುಲ್ಬರ್ಗಾ ನಗರದಲ್ಲಿ ಕೂಡ ಕುಡಿಯುವ ನೀರಿಗೆ ತೊಂದರೆ ಇದೆ. ಸುಮಾರು ನಾಲ್ಕೂವರೆ ಲಕ್ಷ ಜನಸಂಖ್ಯೆ ಇರುವಂತಹ ಈ ನಗರದಲ್ಲಿ ಕೂಡ ಕುಡಿಯುವ ನೀರಿಗೆ ತೊಂದರೆ ಪಡುತ್ತಿದ್ದಾರೆ. ಈ ಯೋಜನೆಗೆ ಸರ್ಕಾರದವರು ಹಣವನ್ನು ಒದಗಿಸಿಕೊಟ್ಟು ನೀರಿನ ವ್ಯವಸ್ಥೆಯನ್ನು ಮಾಡಬೇಕು. ಡಿಸ್ಟ್ರಿಕ್ ಹೆಡ್‌ಕ್ವಾಟ್ರಸ್‌ಗಳಲ್ಲಿ ಮತ್ತು ಡಿವಿಜನಲ್ ಹೆಡ್ ಕ್ವಾಟ್ರಸ್‌ಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿಸಿಕೊಟ್ಟು ಇದರ ಜೊತೆಗೆ ಕರ್ನಾಟಕ ಅರ್ಬನ್ ವಾಟರ್ ಸಪ್ಲೈ ಇಲಾಖೆಯವರಿಗೂ ಕೂಡ ಸರ್ಕಾರದವರು ಹೆಚ್ಚು ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಬೇರೆ ಬೇರೆ ಹಳ್ಳಿಗಳಲ್ಲಿರತಕ್ಕಂತ ಲಂಬಾಣಿ ಹರಿಜನರಿಗೆ ಸರ್ಕಾರದವರು ಬೋರ್ ವೆಲ್‌ಗಳನ್ನು ಒದಗಿಸಿಕೊಟ್ಟಿಲ್ಲ. ಅವರಿಗೆ ಬೋರ್ ವೆಲ್‌ಗಳನ್ನು ಒದಗಿಸಿಕೊಡಬೇಕು. ಬೋರ್ ವೆಲ್‌ಗಳನ್ನು ಹಾಕುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಪವರ್ಸ್ ಕೊಡಬೇಕು. ಮತ್ತೆ ಮಾನ್ಯ ರೆವಿನ್ಯೂ ಮಂತ್ರಿಗಳು ವಿಜಿಟ್ ಕೊಡಬೇಕು. ರಾಜ್ಯದ ಎಲ್ಲಾ ಕಡೆ ವಿಜಿಟ್ ಕೊಟ್ಟು ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ನಡೆಸಬೇಕು. ಇದರಿಂದ ಶಾಸಕರಿಗೂ ಅನುಕೂಲವಾಗುತ್ತದೆಂದು ಹೇಳಿ ಇದುವರೆವಿಗೂ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ).—ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ಬರಗಾಲ ಪರಿಸ್ಥಿತಿಯ ಬಗ್ಗೆ......

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ತಮ್ಮ ಸ್ಥಳದಲ್ಲಿ ನಿಂತು ಮಾತನಾಡುತ್ತಿಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ......

ಉಪಾಧ್ಯಕ್ಷರು.—ಶಿವನಂಜಪ್ಪನವರೆ ತಾವು ಮಾತನಾಡಿ.

ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಸನ್ಮಾನ್ಯ ಅಧ್ಯಕ್ಷರೇ, ನಾನು ಸಮಿತಿಯ ಸದಸ್ಯನಾಗಿದ್ದೆ. ಅನೇಕ ವಿಚಾರಗಳನ್ನು ಬಹಳ ಗಹನವಾಗಿ ಯೋಚನೆ ಮಾಡಿ ನಾವು ಒಂದು ವರದಿಯನ್ನು ಕೊಟ್ಟಿದ್ದೇವೆ. ನಾನು ಈ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ತಾವು ತುಮಕೂರು ಜಿಲ್ಲೆಯಿಂದ ಅದೂ ತುಮಕೂರು ನಗರದಿಂದ ಪ್ರತಿನಿಧಿಸಿ ಬಂದಿದ್ದೀರಿ, ತಾವು ಉಪಾಧ್ಯಕ್ಷರಾಗಿರುವುದರಿಂದ ತಾವು ಮಾತನಾಡುವುದಕ್ಕೆ ಬರುವುದಿಲ್ಲ. ನಿಮ್ಮ ಪರವಾಗಿ ನಾನು ತುಮಕೂರು ನಗರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ನಾನು ಗುಬ್ಬಿ ಕ್ಷೇತ್ರದಿಂದ ಚುನಾಯಿತನಾಗಿ ಬಂದಿದ್ದರೂ ಸಹ ತುಮಕೂರು ನಗರದಲ್ಲಿ ವಾಸವಾಗಿದ್ದೇನೆ. ಆದ್ದರಿಂದ ಆ ಬಗ್ಗೆ ನನಗೂ ಸಹ ಸ್ವಲ್ಪ ಮಟ್ಟಿಗೆ ಜವಾಬ್ದಾರಿ ಇದೆ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರು ಸಮಿತಿಯಲ್ಲಿದ್ದರು.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ತುಮಕೂರು ನಗರಕ್ಕೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತಾರೆ ಅಷ್ಟೇ.

ಶ್ರೀ ಜಿ. ಎಸ್. ಶಿವನಂಜಪ್ಪ.—ತಮಗೂ ಅವಕಾಶ ಕೊಡುತ್ತಾರೆ. ತುಮಕೂರು ನಗರಕ್ಕೆ ನೀರು ಸರಬರಾಜು ಮಾಡತಕ್ಕಂಥದ್ದು ಮೈದಾಳ ಕೆರೆಯಿಂದ. ಆದರೆ ಇವತ್ತಿನ ದಿವಸ ಈ ಮೈದಾಳ ಕೆರೆಯಲ್ಲಿ ಸುಮಾರು ೨-೩ ಅಡಿ ಮಾತ್ರ ನೀರು ಇದೆ. ಈ ತುಮಕೂರು ನಗರದಲ್ಲಿ ಸುಮಾರು ಎರಡು ಮೂರು ಲಕ್ಷ ಜನಸಂಖ್ಯೆ ಇದ್ದಾರೆ. ಈ ನಗರದಲ್ಲಿ ವಾಸ ಮಾಡುವಂತಹ ನಗರವಾಸಿಗಳು ನೀರಿಗೆ ಬಹಳ ಕಷ್ಟ ಪಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ಕೂಡಲೇ ಸುಮಾರು ೫೦ ಬೋರ್ ವೆಲ್‌ಗಳನ್ನು ಹಾಕಿ ಅಲ್ಲಿನ ಜನರಿಗೆ ನೀರನ್ನು ಒದಗಿಸಿಕೊಡುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಇನ್ನೆರಡು ದಿವಸಗಳಲ್ಲಿ ಆ ಕೆರೆ ಒಣಗಿ ಹೋಗುವಂತಹ ಪರಿಸ್ಥಿತಿಯಲ್ಲಿ ಇದೆ. ಆದ್ದರಿಂದ ಸರ್ಕಾರದವರು ೫೦ ಬೋರ್ ವೆಲ್‌ಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ತೇನೆ. ಇನ್ನು ಈ ಮೈದಾಳ ಕೆರೆಯ ಆಸರೆಯಲ್ಲಿ ಸುಮಾರು ೮೦೦ ಎಕರೆಯಷ್ಟು ಅಡಿಕೆ ಮತ್ತು ತೆಂಗಿನ ತೋಟಗಳು ಇವೆ. ಈ ಕೆರೆಯು ಒಣಗಿ ಹೋಗುವಂತಹ ಸಂದರ್ಭ ಬಂದಿರುವುದರಿಂದ ಸುಮಾರು ೮೦೦ ಎಕರೆಯ ರೈತರಿಗೆ ಬಹಳ ತೊಂದರೆಯಾಗುವಂತಹ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದವರು ಕಮ್ಯೂನಿಟಿ ಇರಿಗೇಷನ್ ಬೋರ್ ವೆಲ್ಸ್ ಅನ್ನು ಹಾಕಿಸಿ ಕೊಟ್ಟು ಕೋಟ್ಯಾಂತರ ರೂಪಾಯಿಗಳ ಆಸ್ತಿಯನ್ನು ಉಳಿಸಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನು ನನ್ನ ಸ್ವಂತ ಕ್ಷೇತ್ರವಾದ ಗುಬ್ಬಿ ಬಗ್ಗೆ ಮತ್ತು ಗುಬ್ಬಿ ನಗರದ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ನಮ್ಮ ಗುಬ್ಬಿ ನಗರದಲ್ಲಿ ಸುಮಾರು ೧೭ ಸಾವಿರ ಜನಸಂಖ್ಯೆ ಇದೆ. ಇಲ್ಲಿ ಜನ ಎರಡು ದಿವಸಗಳಿಗೆ ಒಂದು ಸಾರಿ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ. ಗುಬ್ಬಿ ನಗರಕ್ಕೆ ಸುಮಾರು ೭ ಬೋರ್ ವೆಲ್‌ಗಳನ್ನು ಮಂಜೂರು ಮಾಡಿದ್ದಾರೆ. ಇದರಲ್ಲಿ ಒಂದಕ್ಕೆ ಮಾತ್ರ ಪಂಪ್ ಹಾರ್ನೆಸ್ ಮಾಡಿದ್ದಾರೆ. ಆದ್ದರಿಂದ ಕೊನೆಯ ಪಕ್ಷ ಇನ್ನೊಂದು ಪಂಪ್‌ಗಾದರೂ ಹಾರ್ನೆಸ್ ಮಾಡಿಕೊಟ್ಟರೆ ಅಲ್ಲಿನ ಜನರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಾದಂಥ ಶ್ರೀಮಾನ್ ಬೊಮ್ಮಾಯಿಯವರಿಗೆ ನಾನು ಕಂಗ್ರಾಜ್ಯುಲೇಶನ್ಸ್ ಹೇಳಹೇಕು, ಏಕೆಂದರೆ ತುಮಕೂರು ಜಿಲ್ಲಾಧಿಕಾರಿಯವರು ನನಗೆ ಒಂದು ಪತ್ರ ಬರೆದು ಹೇಳಿದ್ದಾರೆ ನೀವು ಎಲ್ಲೆಲ್ಲಿ ಜಾಗಗಳನ್ನು ಗುರುತು ಮಾಡಿ ಕೊಡುತ್ತೀರೋ ಅಲ್ಲಿ ನಾವು ಬೋರ್ ವೆಲ್ಸ್‌ಗಳನ್ನು ತೆಗೆಯುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು. ಬಹುಶಃ ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆ ಒಂದು ಪವರ್ಸ್ ಕೊಟ್ಟಿರಬಹುದೆಂದು ಕಾಣುತ್ತದೆ. ಆದ್ದರಿಂದ ನಾನು ಅವರಿಗೆ ಕಂಗ್ರಾಜ್ಯುಲೇಶನ್ ಹೇಳಬೇಕು. ಆಹಾರ ಕೊಡುತ್ತೀರಿ. ನಿಜ, ಸರಕಾರದ ಹತ್ತಿರ ಆಹಾರ ಇದೆ, ಅದನ್ನು ಸರಿಯಾಗಿ ವಿತರಣೆ ಮಾಡತಕ್ಕ ವ್ಯವಸ್ಥೆ ಮಾಡಿ. ಮತ್ತು ಮೇವಿನ ಬಗ್ಗೆ ನಾವೂ, ನೀವೂ ಎಲ್ಲಾ ಹೇಳುತ್ತಿದ್ದೇವೆ. ಆ ಕಡೆಯ ಸದಸ್ಯರು, ಈ ಕಡೆಯ ಸದಸ್ಯರು, ಬಹುತೇಕ ಜನ ಹಳ್ಳಿಗಾಡಿನಿಂದ ಬಂದಿರತಕ್ಕವರಾಗಿದ್ದಾರೆ. ರೈತರು ನೂರಕ್ಕೆ ಎಂಬತ್ತರಷ್ಟಿರುವ ಈ ದೇಶದಲ್ಲಿ ನಾವು ಆ ಜನಕ್ಕೆ ಏನು ಅನುಕೂಲ ಮಾಡಿಕೊಟ್ಟಿದ್ದೇವೆ? ಪ್ರತಿಯೊಬ್ಬರಿಗೂ ಆಹಾರ ಸಿಗಬೇಕು, ಜನಗಳು ಉಪವಾಸ ಬೀಳಬಾರದು, ಪ್ರತಿಯೊಬ್ಬರಿಗೂ ಅನ್ನ ಸಿಗತಕ್ಕಂಥ ವ್ಯವಸ್ಥೆ ಮಾಡಬೇಕು. ಆದರೆ ಏನು ರೈತ ಈ ದೇಶದ ಬೆನ್ನೆಲುಬಾಗಿದ್ದಾನೆ. ಗೋ ಸಂಪತ್ತೇ ರೈತನ ಆಧಾರವಾಗಿದೆ. ಈ ಗೋ ಸಂಪತ್ತು ಇವತ್ತಿನ ದಿವಸ ಪೂರ್ಣವಾಗಿ ರೈತನ ಕೈಬಿಡತಕ್ಕ ಪರಿಸ್ಥಿತಿ ಇದೆ. ಇವತ್ತು ನ್ಯಾಷನಲ್ ಹೈವೇ ನಂಬರ್ ನಾಲ್ಕರಲ್ಲಿ ನೋಡುವುದಾದರೆ, ಎರಡುಸಾವಿರ ಮೂರು ಸಾವಿರ ಗೋವುಗಳು ಬರುತ್ತಿವೆ. ಗೋವುಗಳ ಒಂದು ಗೋಳು ಸರಕಾರಕ್ಕೆ ತಟ್ಟಬಾರದು. ಅದು ತಟ್ಟಿದರೆ ನಿಜವಾಗಿಯೂ ಇನ್ನೂ ಭೀಕರವಾಗಿರತಕ್ಕ ಪರಿಸ್ಥಿತಿಯನ್ನು ನೀವು ಎದುರಿಸಬೇಕಾಗುತ್ತದೆ, ಎಂಬ ವಿಚಾರವನ್ನು ಹೇಳಬೇಕಾಗಿದೆ. ನಾವು ಹೋದಕಡೆ, ಯಾವ ಜಿಲ್ಲೆಯಲ್ಲಿ ನೋಡಿದರೂ ಕೂಡಾ ಗೋವುಗಳಿಗೆ ಮೇವು ಸಿಗುತ್ತಿಲ್ಲ. ಅದಕ್ಕೆ ಏನಾದರೂ ಒಂದು ಏರ್ಪಾಡು ಮಾಡಬೇಕಾಗುತ್ತದೆ. ಸರಕಾರದ ಫಾರಂಗಳು ಇವೆ ಅಲ್ಲಿ ನೀರಾವರಿ ವ್ಯವಸ್ಥೆ ಮಾಡಿ ಯಾವಾಗಲೂ ಕೂಡಾ ಮೇವನ್ನು ಬೆಳೆಯುತಕ್ಕಂಥ ಒಂದು ಏರ್ಪಾಡು ಮಾಡಿ ಮೇವನ್ನು ಶೇಖರಣೆ ಮಾಡತಕ್ಕ ಅವಕಾಶವನ್ನು ಈಗಿನಿಂದಲೇ ಕಲ್ಪನೆ ಮಾಡಬೇಕಾಗುತ್ತದೆ. ಅದನ್ನು ಕಲ್ಪಿಸದೇ ಹೋದರೆ ಬಹಳ ತೊಂದರೆಯಾಗುತ್ತದೆ. ಫಾಡರ್ ಬ್ಯಾಂಕ್‌ಗಳು ಎಂದು ಏನು ಹೇಳುತ್ತಿದ್ದೀರಿ, ಅಲ್ಲಿ ಫಾಡರ್ ಸಿಗುತ್ತಿಲ್ಲ. ಎಲ್ಲಿ ಹೋದರೂ ಸಹ ಸಿಗುತ್ತಿಲ್ಲ. ಉದ್ಯೋಗಾದಿಯಲ್ಲಿ, ವಾರ್ ಫುಟಿಂಗ್‌ನಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತಿದ್ದೇವೆ ಎಂದು ಏನು ಹೇಳುತ್ತಿದ್ದೀರಿ, ಆ ಪ್ರಕಾರ ಇದಕ್ಕೆ ಗಮನಕೊಟ್ಟು ಮೇವನ್ನು ಸಪ್ಲೈ ಮಾಡತಕ್ಕ ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್).—ಮಾನ್ಯ ಅಧ್ಯಕ್ಷರೇ, ಬರಗಾಲದ ಬಗ್ಗೆ ಈ ವರದಿಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ನಾನೂ ಕೂಡಾ ಅಭಿನಂದಿಸುತ್ತೇನೆ. ಆದರೆ ಬೀದರ್ ಜಿಲ್ಲೆ ಎಂದರೆ, ಅದು ಎಲ್ಲಕ್ಕಿಂತ ಕೊನೆಗೆ ಇದೆ. ಕರ್ನಾಟಕದ ಮೇಲಿದ್ದು, ಶೋಭಾಯಮಾನವಾಗಿರತಕ್ಕ ಜಿಲ್ಲೆ ಇದು. ಇದನ್ನು ಅವರು ನೋಡಲಿಲ್ಲ. ಈ ವರದಿಯಲ್ಲಿ ನೋಡಿದಾಗ ಅದರಲ್ಲಿ ಔರಾದ್‌ನ ಹೆಸರೂ ಇಲ್ಲ, ಔರಾದ್‌ನಲ್ಲಿ ಕುಡಿಯುವ ನೀರಿನ ಕಷ್ಟ ಎಷ್ಟಿದೆ ಎಂಬುದು ವರದಿಯಲ್ಲಿ ಎಲ್ಲೂ ಬಂದಿಲ್ಲ. ಅಲ್ಲಿ ಕುಡಿಯುವ ನೀರಿನ ಕಷ್ಟ ಹೇಳುವುದಕ್ಕೇ ಸಾಧ್ಯವಿಲ್ಲ. ಎಲ್ಲೆಲ್ಲೂ ಇರದಂಥ ಬರಗಾಲ ಇಲ್ಲಿ ಇದೆ. ಕಳೆದ ಬೇಸಿಗೆಯಲ್ಲಿ ಎಂಟು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಂಡಿಗಳ ಮೂಲಕ, ಟ್ರ್ಯಾಕ್ಟರ್ಸ್ ಮೂಲಕ ನೀರನ್ನು ಕಳುಹಿಸಿದ್ದರು. ಎಂಟು

ಲಕ್ಷ ರೂಪಾಯಿ ಖರ್ಚು ಮಾಡಿ ಈ ರೀತಿ ನೀರು ಸರಬರಾಜು ಮಾಡುವುದಕ್ಕಿಂತ, ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಮಾಡಿ, ಐದು ಆರು ಊರಿಗೆ ಒಂದೊಂದು ಈ ರೀತಿಯ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಮಾಡಿದರೆ ಎಲ್ಲಾ ಊರಿಗೂ ನೀರಿನ ಅನುಕೂಲ ಮಾಡುವ ರಚನಾತ್ಮಕ ಕಾರ್ಯ ಮಾಡಿದರೆ, ಹತ್ತು ಇಪ್ಪತ್ತು ಲಕ್ಷ ಬಾಡಿಗೆ ಕೊಡುವುದು ತಪ್ಪುತ್ತದೆ. ಔರಾದ್ ತಾಲ್ಲೂಕಿನಲ್ಲಿ ತಾಂಡಾಗಳು ಹಾಗೂ ಹರಿಜನ ವಾಡಾಗಳು ಜಾಸ್ತಿ ಇವೆ. ಆದಕಾರಣ ಈ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಬೇಗ ಮಾಡತಕ್ಕಂಥ ಯೋಜನೆ ಮಾಡಬೇಕು. ಮಾನ್ಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು ಎಂಬ ಮಾತನ್ನು ಹೇಳುತ್ತಾ, ಈ ವರದಿಯಲ್ಲಿ ೨೯ನೇ ಪೇಜ್ ನೋಡಿದೆ, ಅದರಲ್ಲಿ "......and Shri Basavaraj Patil Anwari also represented that his constituency, Humnabad is also partly affected which it adjacent to Basavakalyan Taluk......" ಆದರೆ ಬಸವರಾಜ್ ಪಾಟೀಲ್ ಅನ್ವರಿಯವರು ಹುಮ್ನಾಬಾದ್ ಕ್ಷೇತ್ರದವರಲ್ಲ. ಅವರು ಹುಮ್ನಾಬಾದ್‌ಗೆ ಯಾವಾಗ ಹೋದರು ಎಂದು ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಹುಮ್ನಾಬಾದ್‌ನಲ್ಲಿ ಬಸವರಾಜ್ ಪಾಟೀಲ್ ಎಂಬುವವರು ಇದ್ದಾರೆ. ಬಸವರಾಜ್ ಪಾಟೀಲ್ ಅನ್ವರಿ ಎಂಬುವವರೂ ಮೆಂಬರ್ ಇದ್ದಾರೆ. ಅದು ಬಸವರಾಜ್ ಪಾಟೀಲ್ ಅನ್ವರಿ ಎಂದು ಟೈಪಿಂಗ್ ಮಿಸ್ಟೇಕ್ ಆಗಿದೆ ಅಷ್ಟೆ.

ಶ್ರೀ ಎಸ್. ಗುರುಪಾದಪ್ಪ.—ಇನ್ನು ಅನೇಕ ವಿಚಾರಗಳನ್ನು ಇದರಲ್ಲಿ ಸೇರಿಸದೆ ರಿಪೋರ್ಟ್‌ನ್ನು ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಯಾರು ಬಂದಿದ್ದರು ಅವರ ಹೆಸರನ್ನು ತೋರಿಸಿದ್ದೇವೆ. ತಾವು ಬಂದಿದ್ದರೆ ತಮ್ಮನ್ನೂ ಸೇರಿಸುತ್ತಿದ್ದೆವು. ನಿಮಗೆಲ್ಲಾ ನೋಟೀಸ್ ಕಳುಹಿಸಿದ್ದೇವೆ. ಸ್ಥಳಕ್ಕೆ ನಾವು ಹೋಗಿದ್ದೆವು. ನಮಗಿದ್ದಂಥ ಸಮಯದಲ್ಲಿ, ಮಾನ್ಯ ಅಧ್ಯಕ್ಷರು ಕೊಟ್ಟಂಥ ಸಮಯದಲ್ಲಿ ಎಲ್ಲೆಲ್ಲಿ ಹೋಗಬೇಕು, ಎಷ್ಟರಮಟ್ಟಿಗೆ ಮಾಡಬೇಕು, ಅಷ್ಟು ಮಾಡಿದ್ದೇವೆ. ನಿಮಗೆಲ್ಲಾ ನೋಟೀಸ್ ಹೋಗಿತ್ತು. ಏನು ಅನಾನುಕೂಲವಿತ್ತೋ ಗೊತ್ತಿಲ್ಲ ತಾವು ಬರಲಿಲ್ಲ.

ಶ್ರೀ ಎಸ್. ಗುರುಪಾದಪ್ಪ.—ನಾನೂ ಸಹ ಬಹಳ ಚೆನ್ನಾಗಿ ಬರೆದಿದ್ದೀರಿ ಎಂದು ಹೇಳುತ್ತಿದ್ದೇನೆ. ತಮ್ಮ ಮೇಲೆ ಅಪಾದನೆ ಮಾಡುತ್ತಿಲ್ಲ. ನಮ್ಮ ತಾಲ್ಲೂಕು ಎಲ್ಲಕ್ಕಿಂತ ಮೇಲಿದೆ, ಆದರೆ ಅದು ಕೊನೆಗೆ ಹೇಗೆ ಬಂತು ಅದನ್ನು ಕಡೆಗಣಿಸಬೇಡಿ ಎಂದು ಹೇಳಿ, ನಮ್ಮ ತಾಲ್ಲೂಕಿಗೆ ನೀರಿನ ವ್ಯವಸ್ಥೆ ಮಾಡಬೇಕೆಂದು ಹೇಳಿ, ಎರಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೇ, ನೇರವಾಗಿ ಬರಗಾಲದ ಬಗ್ಗೆ ಅತ್ಯಂತ ವಿಷಾದದಿಂದ ಒಂದು ಮಾತನ್ನು ಹೇಳಬೇಕಾಗಿದೆ. ಈ ಸದನದಲ್ಲಿ ರಾಜ್ಯದಲ್ಲಿರುವ ರೈತರ ಬಗ್ಗೆ ಕಳಕಳಿಯನ್ನು ಹೊಂದಿ, ಅವರ ಬಗ್ಗೆ ನಾವು ಹೋರಾಟ ಮಾಡತಕ್ಕ ಸಂದರ್ಭ ಗೊತ್ತಿದ್ದರೂ ಸಹ, ನಮ್ಮ ಬಿ. ಜೆ. ಪಿ. ಅಧ್ಯಕ್ಷರಾದ ಮಾನ್ಯ ಶಿವಪ್ಪನವರು ಹೇಳುವಂತೆ ನಮ್ಮ ಮಾನ್ಯ ಸಚಿವರಾದ ಬೊಮ್ಮಾಯಿಯವರಾಗಲೀ, ಅಥವಾ ನಮ್ಮ ಮಾನ್ಯ ಇತರ ಸದಸ್ಯರಾಗಲೀ, ಬಗ್ಗರಣೆಗೆ ಯಾವರೀತಿ ಕರಿಬೇವಿನ ಸೊಪ್ಪನ್ನು ಉಪಯೋಗಿಸಿ, ಊಟವಾದ ಮೇಲೆ ಅದನ್ನು ಯಾವ ರೀತಿ ಮೂಗ್ಗುಲಲ್ಲಿ ಇಡುತ್ತಾರೆ, ಆ ರೀತಿ ನಮ್ಮನ್ನು ಉಪಯೋಗ ಮಾಡಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಈ ಶಾಸನಸಭೆಯ ಸಮಿತಿಯನ್ನು ಮಾಡುವ ಸಂದರ್ಭದಲ್ಲಿ, ವಿಧಾನಸಭಾ ಸದಸ್ಯರ ಪ್ರಾಮುಖ್ಯತೆ ಗೊತ್ತಿದ್ದಂಥ ಹಿರಿಯ ಮಾನ್ಯ ಮಂತ್ರಿಗಳಾದ ಬೊಮ್ಮಾಯಿಯವರು ಭಾರತೀಯ ಜನತಾ ಪಕ್ಷದ ಒಬ್ಬ ಸದಸ್ಯನಿಗೂ ಇದರಲ್ಲಿ ಅವಕಾಶ ಮಾಡಿಕೊಡಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ವಿಧಾನ ಪರಿಷತ್ತಿನಿಂದ ಮಾನ್ಯ ನರಹರಿ ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ಒಬ್ಬ ಶಾಸಕನಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕಾಗಿದೆ. ರೈತರ ಬಗ್ಗೆ ನಮಗೆ ಚೆನ್ನಾಗಿ ಗೊತ್ತಿದ್ದರೂ ಸಹ, ಈ ಸಮಿತಿಯಲ್ಲಿ ನಮ್ಮ ಹೆಸರನ್ನು ಸೇರಿಸದೆ, ನಮ್ಮ ಹೆಸರು ಬರಬಾರದು, ನಾವು ರಾಜ್ಯದಲ್ಲಿ ಪ್ರವೇಶ ಮಾಡಬಾರದು ಎನ್ನುವ ದೃಷ್ಟಿ ಇಟ್ಟುಕೊಂಡೋ ಅಥವಾ ಬೇರೆ ಯಾವ ಕಾರಣಕ್ಕಾಗಿ ಅವಕಾಶ ಮಾಡಿಕೊಡಲಿಲ್ಲವೋ ಗೊತ್ತಿಲ್ಲ. ಅದರ ಜೊತೆಗೆ ಇನ್ನೊಂದು ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಶಿವಮೊಗ್ಗ ಜಿಲ್ಲೆಯ ಪರವಾಗಿ ಒಬ್ಬ ಶಾಸಕನೂ ಸಹ ಈ ಸಮಿತಿಯಲ್ಲಿ ಇಲ್ಲ. ಶಿವಮೊಗ್ಗ ಜಿಲ್ಲೆಯ ಬಗ್ಗೆ ರಿಪೋರ್ಟನ್ನು ನಮ್ಮ ಸಮಿತಿಯವರು ಕೊಟ್ಟಿದ್ದಾರೆ. ಅವರು ಕೆಲವು ಗ್ರಾಮಗಳಿಗೆ ಹಾಗೂ ಕೆಲವು ತಾಲ್ಲೂಕುಗಳಿಗೆ ಭೇಟಿ ನೀಡಿ. ಅಲ್ಲಿ ಕಂಡಂಥ ಮಾಹಿತಿಯ ಜೊತೆಗೆ ಅಧಿಕಾರಿಗಳು ಕೊಟ್ಟಂಥ ಮಾಹಿತಿಯನ್ನು ಸೇರಿಸಿ ವರದಿಯನ್ನು ಕೊಟ್ಟಿದ್ದಾರೆ ಎಂದು ನಾನು ಭಾವಿಸಿದ್ದೇನೆ. ಈ ವರದಿಯ ೭೧ನೇ ಪುಟದಲ್ಲಿ ನಾಲ್ಕು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಎಂಟು ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿವೆ. ಶಿಕಾರಿಪುರ ತಾಲ್ಲೂಕಿನ ೧೨೪ ಗ್ರಾಮಗಳು, ಬರಗಾಲಕ್ಕೆ ತುತ್ತಾಗಿವೆ. ಆದರೆ ಇಡೀ ಜಿಲ್ಲೆಯಲ್ಲಿ ೧೯೯ ಗ್ರಾಮಗಳಲ್ಲಿ ೧೪೪ ವಿಲೇಜ್‌ಗಳು ಬರಗಾಲಕ್ಕೆ ತುತ್ತಾಗಿವೆ ಎಂಬ ಮಾತನ್ನು ಸಮಿತಿಯ ಸದಸ್ಯರು ವರದಿಯಲ್ಲಿ ಕೊಟ್ಟಿದ್ದಾರೆ. ಇದನ್ನು ನೋಡಿದಾಗ ನನಗೆ ಆಶ್ಚರ್ಯವಾಯಿತು. ಈ ಸಮಿತಿಯಲ್ಲಿ ಶಿವಮೊಗ್ಗ ಜಿಲ್ಲೆಯ ಶಾಸಕರುಗಳು ಇದ್ದಿದ್ದರೆ, ಅಧಿಕಾರಿಗಳು ಈ ರೀತಿ ತಪ್ಪು ಮಾಹಿತಿಯನ್ನು ಕೊಡದಂತೆ ತಡೆಯಬಹುದಾಗಿತ್ತು, ಎಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಆದಕಾರಣ ಮಾನ್ಯ ಮಂತ್ರಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಸಂಚಾರ ಮಾಡಿ, ಅಲ್ಲಿ ಯಾವ ಯಾವ ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂಬುದರ ಬಗ್ಗೆ ಸರಿಯಾದ ಮಾಹಿತಿಯನ್ನು ಪಡೆದುಕೊಂಡು, ಅದರ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ವರದಿಯ ಆಧಾರದ ಮೇಲೆ ಹಣ ಕೊಡುವ ಪ್ರಯತ್ನ ಮಾಡಿದರೆ, ಬರಗಾಲಕ್ಕೆ ತುತ್ತಾಗಿರತಕ್ಕ ಶಿವಮೊಗ್ಗ ಜಿಲ್ಲೆಯ ರೈತರ ಸ್ಥಿತಿ ಏನಾಗುತ್ತದೆ ಎಂಬುದರ ಬಗ್ಗೆ ಯೋಚನೆ ಮಾಡಬೇಕು. ಆದಕಾರಣ ಸರಿಯಾದ ಮಾಹಿತಿ ತರಿಸಿಕೊಂಡು ಶಿವಮೊಗ್ಗ ಜಿಲ್ಲೆಗೆ ಪರಿಹಾರ ಒದಗಿಸಬೇಕು ಹಾಗೂ ಇದರ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಬರಗಾಲ ಕಾಮಗಾರಿಯನ್ನು ಕೈಗೊಳ್ಳುವ ವ್ಯವಸ್ಥೆ ಮಾಡುವುದು ಒಂದು ಕಡೆಯಾದರೆ, ಇನ್ನೊಂದು ಕಡೆ, ರಾಜ್ಯ ವಿಚಿತ್ರವಾದ ಬರಗಾಲಕ್ಕೆ ತುತ್ತಾಗಿರುವ ಈ ಸಂದರ್ಭದಲ್ಲಿ, ಯಾವ ರೈತ ತನ್ನಲ್ಲಿರುವ ಹಣವನ್ನೆಲ್ಲಾ ಖರ್ಚು ಮಾಡಿ, ಬೆಳೆ ಬರುತ್ತದೆಂದು, ಜಮೀನನ್ನು ಉತ್ತು ಬಿತ್ತು, ಬಿತ್ತನೆ ಬೀಜ ಹಾಳುಮಾಡಿಕೊಂಡು, ಅದಕ್ಕೆ ಹಾಕಿದ ಗೊಬ್ಬರವನ್ನು ಹಾಳುಮಾಡಿಕೊಂಡು, ಮತ್ತೊಮ್ಮೆ ಸಾಲಗಾರನಾಗುವ ಪರಿಸ್ಥಿತಿ ಬಂದಿದೆ. ಅಂತಹ ರೈತನಿಗೆ ತಾವು ಪರಿಹಾರ ಒದಗಿಸುವ ಪ್ರಯತ್ನ ಮಾಡದಿದ್ದರೆ, ಸಣ್ಣ ರೈತರಿಗೆ ಪರಿಹಾರ ಒದಗಿಸುವ ಪ್ರಯತ್ನ ಮಾಡದಿದ್ದರೆ, ವಿಚಿತ್ರವಾದ ಪರಿಸ್ಥಿತಿ ಉಂಟಾಗುತ್ತದೆ. ಇನ್ನೇನು ವಿಧಾನಸಭೆ ಕಾರ್ಯಕಲಾಪಗಳು ಮುಗಿಯುತ್ತಿವೆ. ಸಹಜವಾಗಿಯೇ ವಿಧಾನಸಭೆ ನಡೆಯುವಂತಹ ಸಂದರ್ಭದಲ್ಲಿ ಮಾತ್ರ ರಾಜ್ಯದ ಜನಗಳ ಬಗ್ಗೆ ಅಧಿಕಾರಿಗಳು ಕಾಳಜಿ ತೋರಿಸುತ್ತಾರೆ, ಅವರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡುತ್ತಾರೆ. ಆದರೆ ವಿಧಾನಸಭೆ ಮುಗಿದ ನಂತರ, ಅಧಿಕಾರಿಗಳು ನೇರವಾಗಿ ಹೇಳುತ್ತಾರೆ, ದುಡ್ಡಿಲ್ಲ, ಸರಕಾರ ಸೂಚನೆ ಕೊಡಬಹುದು, ಆದರೆ ದುಡ್ಡಿಲ್ಲದೆ ಏನು ಮಾಡಬೇಕು, ಎಂಬ ಮಾತನ್ನು ಹೇಳುತ್ತಾರೆ. ಆದುದರಿಂದ ಜನತೆಯ ದೃಷ್ಟಿಯಿಂದ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಬರುವಂತಹ ೧೫–೨೦ ದಿವಸಗಳಲ್ಲಿ ಏನು ವಿಚಿತ್ರವಾದ ಬರಗಾಲ ಬರುತ್ತಿದೆ, ಈ ಬಗ್ಗೆ ಸರಿಯಾದ ಕಾಮಗಾರಿಗಳನ್ನು ತೆಗೆದುಕೊಂಡು, ಕುಡಿಯುವ ನೀರಿನ ವ್ಯವಸ್ಥೆ ಮಾಡಿ, ಗಂಜಿ ವ್ಯವಸ್ಥೆ ಮಾಡಿ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಮಾಡಿ, ಇದನ್ನು ಮಾಡದೇಹೋದರೆ, ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಚಳುವಳಿ ಪ್ರಾರಂಭವಾಗಬಹುದು. ಜನತೆಯ ಬದುಕಿಗೋಸ್ಕರ, ಅವರ ಉಳಿವಿಗೋಸ್ಕರ ಚಳುವಳಿ ಆಗಬಹುದು. ಆದುದರಿಂದ ನಾನು ನಮ್ರತೆಯಿಂದ ವಿನಂತಿ ಮಾಡುತ್ತೇನೆ, ದಯವಿಟ್ಟು ಮುಂದೆ ಬರುವಂತಹ ದಿವಸಗಳಲ್ಲಿ ಇಡೀ ರಾಜ್ಯದಲ್ಲಿ ತಾವು ಪ್ರವಾಸ ಮಾಡಬೇಕು. ಜನಗಳಿಗೆ ಬೇಕಾದಂಥ ಸೌಲಭ್ಯ ಒದಗಿಸುವ ಪ್ರಯತ್ನ ಮಾಡಬೇಕು. ಶಿಕಾರಿಪುರ ತಾಲ್ಲೂಕು ಇರಬಹುದು ಅಥವಾ ಬೇರೆ ತಾಲ್ಲೂಕು ಇರಬಹುದು. ನಮ್ಮ ತಾಲ್ಲೂಕಿನಲ್ಲಿ ೧೨೦ ಗ್ರಾಮ ಬರಗಾಲಕ್ಕೆ ತುತ್ತಾಗಿದೆ. ಪ್ರತಿಯೊಂದು ಗ್ರಾಮದಲ್ಲೂ ಕನಿಷ್ಠ ಎರಡು ಕೆಲಸ ತೆಗೆದುಕೊಳ್ಳುವಂತಹ ವ್ಯವಸ್ಥೆ ಮಾಡಬೇಕು. ಒಂದು ಕಲಸ ಸಂಪೂರ್ಣವಾಗಿ ಮುಗಿದ ನಂತರ ಮತ್ತೊಂದು ಕೆಲಸ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಆದರೆ ಅಧಿಕಾರಿಗಳು ಹೇಳುತ್ತಾರೆ, ಈಗ ಬಂದಿರುವಂತಹ ಹಣದಿಂದ ಒಂದು ತಾಲ್ಲೂಕಿನಲ್ಲಿ ೨೫–೩೦ ಕೆಲಸ ಕೊಟ್ಟರೂ ಸಹ ಹಣ ಸಾಲುವುದಿಲ್ಲ ಎಂಬ ಮಾತನ್ನು ಸನ್ಮಾನ್ಯ ಜಿಲ್ಲಾಧಿಕಾರಿಗಳು ನಾಲ್ಕೈದು ದಿನಗಳ ಹಿಂದೆ ಹೇಳಿದ್ದಾರೆ.

ನಿಜ, ಹಣಕಾಸಿನ ತೊಂದರೆ ಇದೆ. ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಯಾವುದೇ ಹೊಸ ಕಾಮಗಾರಿ ಕೆಲಸಗಳೂ ನಡೆಯುತ್ತಿಲ್ಲ. ಬೇರೆ ಯಾವ ಕೆಲಸಗಳನ್ನು ನಿಲ್ಲಿಸಿದರೂ ಸಹ ಈ ಕಾಮಗಾರಿ ಕೆಲಸಗಳು ಸರಿಯಾಗಿ ನಡೆಯಬೇಕು. ಒಂದು ವಾರಕ್ಕೊಮ್ಮೆಯಾದರೂ ದುಡ್ಡು ಕೊಡುವ ಪ್ರಯತ್ನ ಮಾಡಬೇಕು. ನಾವು ಇಲ್ಲಿ ಎಷ್ಟು ಚರ್ಚೆ ಮಾಡಿದರೂ ಸುಧಾರಣೆ ಆಗಿಲ್ಲ. ಕಂಟ್ರಾಕ್ಟರ್ ಕೆಲಸ ಮಾಡುತ್ತಾರೆ. ಹೀಗಿದ್ದೂ ಕೂಡ ಕೂಲಿ ಕಾರ್ಮಿಕರಿಗೆ ಕೆಲಸ ಸಿಕ್ಕದೇ ಹೋದರೆ, ಕಾಲಕ್ಕೆ ಸರಿಯಾಗಿ ದುಡ್ಡು ಸಿಕ್ಕದೇ ಹೋದರೆ, ಆಗ ಕಾರ್ಮಿಕರು, ಕೂಲಿ ಕಡಿಮೆ ಸಿಕ್ಕಿದರೂ ಪರವಾಗಿಲ್ಲವೆಂದು ಬೇರೆ ಕಡೆ ಹೋಗುತ್ತಾರೆ. ಈ ದೃಷ್ಟಿಯಿಂದ ವಾರಕ್ಕೊಮ್ಮೆಯಾದರೂ ಕೂಲಿ ಸಿಗುವ, ದುಡ್ಡು ಸಿಗುವ ವ್ಯವಸ್ಥೆ ಮಾಡಬೇಕು. ಹಾಗೂ ಅವರಿಗೆ ಸುಲಭ ದರದಲ್ಲಿ ಅಕ್ಕಿ ಸಿಗುವಂತೆ ಅನುಕೂಲ ಮಾಡಿಕೊಡಬೇಕು, ಇನ್ನು ಕುಡಿಯುವ ನೀರಿನ ಸಮಸ್ಯೆ. ಇದರ ಬಗ್ಗೆ ಬೋರ್‌ವೆಲ್‌ಗಳನ್ನು ಅನಿವಾರ್ಯವಾಗಿ ಮಾಡಬೇಕಾದ ಸಂದರ್ಭದಲ್ಲಿ, ಬೆಂಗಳೂರಿಗೇ ಬಂದು ತೀರ್ಮಾನ ಮಾಡಿ ಕೊಡುವುದಕ್ಕೆ ಬದಲಾಗಿ ಅಲ್ಲಿಯ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡುವಂತಹ ಒಂದು ಅವಕಾಶ ಮಾಡಬೇಕು. ಸಮಿತಿಯವರು ಈ ಒಂದು ರೆಕಮೆಂಡ್ ಮಾಡಬೇಕು. ಆ ಆಧಾರದ ಮೇಲೆ ತಕ್ಷಣ ಬೋರ್‌ವೆಲ್‌ಗಳನ್ನು ಹಾಕುವುದಕ್ಕೆ ಅನುಕೂಲವಾಗುತ್ತದೆ. ಮಿನಿ ವಾಟರ್ ಸಪ್ಲೈ ಬಗ್ಗೆ ಇವತ್ತು ಕೂಡ ಅಧಿಕಾರಿಗಳನ್ನು ಭೇಟಿ ಮಾಡಿದರೆ, ಮಿನಿ ವಾಟರ್ ಸಪ್ಲೈ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ತಾವು ಕೂಡ ಕೇಂದ್ರ ಸರ್ಕಾರಕ್ಕೆ ಹಣವನ್ನು ಕೇಳಿದ್ದೀರಿ. ಈ ವ್ಯವಸ್ಥೆಯಿಂದ ತುಂಬಾ ಅನುಕೂಲವಾಗುತ್ತದೆ. ಇರುವಂತಹ ಬೋರ್‌ವೆಲ್‌ಗಳನ್ನು ಮಿನಿ ವಾಟರ್ ಸಪ್ಲೈಗೆ ಉಪಯೋಗ ಮಾಡಿದರೆ ತುಂಬಾ ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ಶಾಶ್ವತವಾದ ಕೆಲವು ಬರಗಾಲ ಕಾಮಗಾರಿಗಳನ್ನು ಪ್ರಾರಂಭ ಮಾಡಿ, ಜನರಿಗೆ ಅನುಕೂಲ ಮಾಡಿಕೊಡಬೇಕು. ನೇರವಾಗಿ ನಾನು ಹೇಳುವುದು ಶಿವಮೊಗ್ಗ ಜಿಲ್ಲೆಯ ವಿಚಾರ. ಇಲ್ಲಿ ಸಮಿತಿಯವರು ಯಾವರೀತಿ ರಿಪೋರ್ಟ್ ಕೊಟ್ಟರೋ ನನಗೆ ಗೊತ್ತಿಲ್ಲ. ವಿಚಿತ್ರವಾದ ಪ್ರಸಂಗವಾಗಿದೆ. ಸಮಿತಿಯವರು ಪ್ರವಾಸ ಮಾಡುವ ಸಂದರ್ಭದಲ್ಲಿ ನಾವು ಅಲ್ಲಿ ಅನಿವಾರ್ಯವಾಗಿ ಇರಲಿಲ್ಲ. ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಾಗ ಅದನ್ನು ಸರಿಮಾಡುವಂತಹ ಅವಕಾಶ ತೆಗೆದುಕೊಳ್ಳಬೇಕು. ಸಮಿತಿಯವರು ರಿಪೋರ್ಟ್ ಕೊಟ್ಟಿದ್ದರೂ ಸಹ, ಇಲ್ಲಿಗೇ ಮುಗಿಯಿತೆಂದು ಮಾಡಬೇಡಿ. ಈಗಿರುವ ಸಮಿತಿಯವರು ಮತ್ತೊಮ್ಮೆ ಪ್ರವಾಸ ಮಾಡಿ, ಪ್ರತಿ ತಾಲ್ಲೂಕಿನಲ್ಲೂ ಅಧಿಕಾರಿಗಳಿಗೆ ತಿಳಿಸದೇ, ಯಾವ ಗ್ರಾಮಕ್ಕೆ ಹೋಗಬೇಕೋ, ಅಲ್ಲಿಗೆ ನೇರವಾಗಿ ಹೋಗಿ. ಅಲ್ಲಿಯ ಪರಿಸ್ಥಿತಿಯನ್ನು ಅಧ್ಯಯನ ಮಾಡಿ, ಅಲ್ಲಿ ಸರಿಯಾಗಿ ಕಾಮಗಾರಿ ಕೆಲಸಗಳು ಆಗುತ್ತಿವೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಇದು ದೊಡ್ಡ ವಿಚಾರವಾದ್ದರಿಂದ, ಇದನ್ನು ಗಮನಕ್ಕೆ ತೆಗೆದುಕೊಂಡು ಹಗಲು ರಾತ್ರಿ ಸಮಿತಿಯವರೂ ಕೆಲಸ ಮಾಡಬೇಕು, ಮಂತ್ರಿಯವರೂ ಕೆಲಸ ಮಾಡಬೇಕು, ಅಧಿಕಾರಿಗಳೂ ಕೆಲಸ ಮಾಡಬೇಕು. ಜನತೆಯ ಹಿತದೃಷ್ಟಿಯಿಂದ, ಅನಿವಾರ್ಯವಾಗಿ ಈ ಕೆಲಸಗಳನ್ನು ಮಾಡಬೇಕು. ಆಮೆಯ ವೇಗದಲ್ಲಿ ಹೋದರೆ ಸಾಲದು. ಇಡೀ ರಾಜ್ಯದಲ್ಲಿ ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದೇವೆಂದೂ, ತಕ್ಷಣ ಕೆಲಸವನ್ನು ಮಾಡುತ್ತೇವೆಂದು ಘೋಷಣೆ ಮಾಡುತ್ತೀರಿ. ಇವತ್ತಿನವರೆಗೂ ಅಸೆಂಬ್ಲಿ ನಡೆಯುತ್ತಿದ್ದರೂ ಸಹ ಅಧಿಕಾರಿಗಳನ್ನು ಭೇಟಿ ಮಾಡಿದಾಗ, ಈ ನಿಮಿಷದವರೆಗೂ ಕೂಡ ಈ ಬಗ್ಗೆ ಚಿಂತನೆ ಮಾಡುವ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ಶಾಸಕರಿಗೆ ಹೇಳುವುದು ಸರಿಯಲ್ಲ. ತಾವು ಕೇಂದ್ರ ಸರ್ಕಾರದವರು ಕೊಡುವ ಹಣವನ್ನೇ ಕಾಯದೇ ಇವತ್ತಿನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಏನಾದರೂ ಪರಿಹಾರ ಕೊಡುವುದಕ್ಕೆ ಸಾಧ್ಯವಿದೆಯೋ, ಎಂಬುದರ ಬಗ್ಗೆ ತಾವು ಪ್ರಯತ್ನ ಮಾಡಬೇಕು. ಅಲ್ಪ ಸ್ವಲ್ಪ ಬೆಳೆ ಇದ್ದರೂ ಅದಕ್ಕೆ ಹೊಸ ಹೊಸ ರೋಗಗಳು ಬಂದಿವೆ. ಇರುವಂತಹ ಅಲ್ಪಸ್ವಲ್ಪ ಬೆಳೆಗಳಿಗೆ ಪುಕ್ಕಟೆಯಾಗಿ ಔಷಧಿಗಳನ್ನು ಕೊಡುವುದಕ್ಕೆ ಸಾಧ್ಯವಿದ್ದರೆ, ಅದನ್ನೂ ಕೊಡಬೇಕು. ಪ್ರತಿಯೊಂದು ಗ್ರಾಮದಲ್ಲೂ ಎರಡು ಕೆಲಸಗಳನ್ನಾದರೂ ತೆಗೆದುಕೊಂಡು, ವಾರಕೊಮ್ಮೆಯಾದರೂ ಪೇಮೆಂಟ್ ಮಾಡುವ ಕಡೆ ಗಮನ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಈ ರಿಪೋರ್ಟ್ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೇವೆ. ಮಾನ್ಯ ಮಂತ್ರಿಗಳು ಇವೆಲ್ಲವನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಬರುವಂತಹ ದಿವಸಗಳಲ್ಲಿ ವಾರಕ್ಕೊಮ್ಮೆ, ೧೫ ದಿವಸಕ್ಕೊಮ್ಮೆ ಜಿಲ್ಲಾ ಕೇಂದ್ರಗಳಲ್ಲಿ ಸನ್ಮಾನ್ಯ ಸಚಿವರುಗಳು ಬರಬೇಕು. ಶಾಸಕರನ್ನು ೧–೨೦ ದಿವಸಕ್ಕೊಮ್ಮೆ ಭೇಟಿ ಮಾಡಬೇಕು. ಈ ಕಡೆ ತೀವ್ರ ಗಮನಹರಿಸಬೇಕೆಂದು ಹೇಳಿ, ವಿನಂತಿ ಮಾಡಿಕೊಂಡು ಅಧ್ಯಕ್ಷರು ನನಗೆ ಈ ಒಂದು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಸಮಿತಿ ಶಾಶ್ವತ ಎಂದು ತಿಳಿದುಕೊಂಡಿದ್ದಾರೆ. ಈ ಸಮಿತಿಗೆ ೮ ದಿವಸದಲ್ಲಿ ರಿಪೋರ್ಟ್ ಕೊಡಬೇಕೆಂದು ಹೇಳಿದ್ದರು. ನಾವು ಪ್ರತಿಯೊಂದು ಜಿಲ್ಲೆಗೂ ಹೋಗಿ ನೋಡಿ, ರಿವ್ಯೂ ಮಾಡುವಂತಾದಿಲ್ಲ. ಈಗಾಗಲೇ ಇದರಲ್ಲಿ ೧೪೧ ತಾಲ್ಲೂಕುಗಳು ಇವೆ, ಇದರಲ್ಲಿ ಅನೇಕ ತಾಲ್ಲೂಕುಗಳು ಇವೆ, ಇದರಲ್ಲಿ ಅನೇಕ ತಾಲ್ಲೂಕುಗಳು ಸೇರಿವೆ. ೨೫ ತಾಲ್ಲೂಕುಗಳು ಬಿಟ್ಟು ಹೋಗಿವೆ. ತೀವ್ರವಾಗಿ ಅಭಾವಕ್ಕೆ ಒಳಪಟ್ಟ ತಾಲ್ಲೂಕುಗಳಿಗೆ ಮಾತ್ರ ಭೇಟಿ ಕೊಟ್ಟಿದ್ದೇವೆ. ನೀವು ಅಂಕಿಅಂಶ ತೆಗೆದು ನೋಡಿದರೆ ಗೊತ್ತಾಗುತ್ತದೆ. ಸಂಪೂರ್ಣವಾಗಿ ಎಲ್ಲವನ್ನೂ ವರದಿಯಲ್ಲಿ ಅಳವಡಿಸುವುದಕ್ಕಾಗುವುದಿಲ್ಲ. ಸಂಪೂರ್ಣವಾಗಿ ಸ್ಟಡಿ ಮಾಡಿ, ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಇದನ್ನು ಚರ್ಚೆ ಮಾಡಿದರೆ ಸರಿಹೋಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು ೨ ಸಾವಿರ ಹಳ್ಳಿಗಳು ಇವೆ. ನಿಮ್ಮ ರಿಪೋರ್ಟ್ ಪ್ರಕಾರ ೧೪೪ ಹಳ್ಳಿ ಎಂದು ಇದೆ. ಇದರ ಆಧಾರದ ಮೇಲೆ ಹಣಕಾಸಿನ ವ್ಯವಸ್ಥೆ ಮಾಡಿದರೆ, ಶಿವಮೊಗ್ಗ ಜಿಲ್ಲೆಯ ಪರಿಸ್ಥಿತಿ ಏನು? ಆದ್ದರಿಂದ ಇದನ್ನು ಸರಿಯಾಗಿ ವಿಮರ್ಶೆ ಮಾಡಿ ರಿಪೋರ್ಟ್ ತರಿಸಿಕೊಳ್ಳಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ನಜೀರ್‌ಸಾಬ್ ಅವರು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

STATEMENT BY THE MINISTER

Sub:-Allegation made by Sri K.B. Koliwad while speaking on Demands for Grants pertaining to Rural Development

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಅಧ್ಯಕ್ಷರೇ, ಆಯವ್ಯಯ ಚರ್ಚೆಯ ಮೇಲೆ ಭಾಷಣ ಮಾಡುತ್ತಾ, ಮಾನ್ಯ ಸದಸ್ಯರಾದ ಕೋಳಿವಾಡ್‌ರವರು ಕೆಲವು ಆಪಾದನೆಗಳನ್ನು ಮಾಡಿದರು. ಆ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದೆ. ಅದೇ ಪ್ರಕಾರ ಈಗ ಹೇಳಿಕೆಯನ್ನು ಕೊಡುತ್ತಿದ್ದೇನೆ. ಇದು ಇಂಗ್ಲೀಷ್‌ನಲ್ಲಿದೆ ದಯವಿಟ್ಟು ಕ್ಷಮಿಸಬೇಕು.

It is not true that 100% of the expenditure incurred on rural water supply is reimbursed by the Central Government. It is only for the schemes taken up under the central sector both piped water supply and borewells that the Government of India reimburses.

Hammer is a critical equipment of the drilling rig and it is the policy of the Department to purchase the critical items only from the manufacturers as otherwise the substitute equipment may damage the costly rig.

On the complaint that the bills are paid for 100' when only 50' are drilled Government have already taken action to entrust the verification of depth to a outside agency on a random basis and the Afro has been entrusted with this task of verification.

It is a figment of immagination to allege that the period of six months PVC pipes worth 800 lakhs have been purchased when actually orders have been placed for just about 96 lakhs and that too with manufacturers in the small industry sector under rate contract with SPD.